
ಬಾ ಮತ್ತು ಬಾಪು 150ನೇ ವರ್ಷಾಚರಣೆ - ಪುಸ್ತಕ ಮಾಲಿಕೆ

ಅಸ್ಪೃಶ್ಯತೆ

ಮೋಹನದಾಸ್ ಕರಮಚಂದ್ ಗಾಂಧಿ



ಕನ್ನಡಕ್ಕೆ ಅನುವಾದ : ಪ್ರೊ. ಜಿ. ಡಿ. ನಾಡಕರ್ಣಿ

ಬಾ-ಬಾಪು 150ನೇ



ವರ್ಷಾಚರಣೆ ಪುಸ್ತಕ ಮಾಲಿಕೆ

ಅಸ್ಪೃಶ್ಯತೆ


ಮೋಹನದಾಸ್ ಕರಮಚಂದ್ ಗಾಂಧಿ

ಅನುವಾದಕರು
ಪ್ರೊ. ಜಿ. ಡಿ. ನಾಡಕರ್ಣಿ

ಪ್ರಕಾಶಕರು
ಕರ್ನಾಟಕ ಗಾಂಧೀ ಸ್ಮಾರಕ ನಿಧಿ
ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ
ಬೆಂಗಳೂರು – 560001, ದೂರವಾಣಿ : 080–22261967

ASPRUSHYATE - Written by **M. K. Gandhi,**
Translated by **Prof. G. D. Nadakarni**
Published by the Secretary
Karnataka Gandhi Smaraka Nidhi
Gandhi Bhavana, Kumara Park East
Bengaluru - 560001
Phone : 080-22261967

1st Edition	:	1960 - 5000 copies
2nd Edition	:	2008 - 1000 copies
Revised 3rd Edition	:	2018
Copies	:	5000 Nos.
Pages	:	XII + 76
Price	:	45/-
Print	:	**CreativeGeekz** Yadhava College Road Madhava Nagara, Bengaluru Ph : 080 40927049




ಅರ್ಪಣೆ

ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಮಾಜಿ ಅಧ್ಯಕ್ಷರಾದ

ಡಾ. ಹೊ. ಶ್ರೀನಿವಾಸಯ್ಯ ಅವರಿಗೆ

ಗೌರವಪೂರ್ವಕವಾಗಿ



ನಿವ್ಮೋಡನೆ

ಬಾ ಮತ್ತು ಬಾಪು 150ನೇ ವರ್ಷಾಚರಣೆ ಸಂದರ್ಭದಲ್ಲಿ ಮಹಾತ್ಮ ಗಾಂಧೀಜಿ ಅವರ "ಅಸ್ಪೃಶ್ಯತೆ" ಕುರಿತಾದ ಕೃತಿ ಬಹಳ ಅಗತ್ಯವಾಗಿದೆ ಎಂದು ಪರಿಷ್ಕೃತ ಆವೃತ್ತಿಯನ್ನು ಪ್ರಕಟಿಸಲಾಗಿದೆ. ಗಾಂಧೀಜಿ ಅವರು ಅಸ್ಪೃಶ್ಯತೆ ವಿರುದ್ಧ ನಡೆಸಿದ ಹೋರಾಟ, ಸಮಾಜಪರಿವರ್ತನೆಗೆ ಪ್ರಯತ್ನಿಸಿದ್ದು ಮತ್ತು "ಹರಿಜನ" ಎಂಬ ಪತ್ರಿಕೆಯನ್ನೇ ಆರಂಭಿಸಿ, ಧೀರ್ಘವಾಗಿ, ಆ ಸಮಸ್ಯೆಯನ್ನು ಮೂಲೋಚ್ಚಾಟನೆ ಮಾಡಲು ಚರ್ಚಿಸಿರುವುದು ವರ್ತಮಾನದ ಭಾರತದಲ್ಲಿ ಇನ್ನೂ ಆಚರಣೆಯಲ್ಲಿರುವ ಈ ಸಮಸ್ಯೆ ಪರಿಹರಿಸಲು ಉತ್ತರವಾಗಿ ನಿಲ್ಲುತ್ತದೆ. ಮಹಾತ್ಮಾಜಿ ಅವರು ತಮ್ಮ ಪತ್ರಿಕೆಯಲ್ಲಿ ಚರ್ಚಿಸಿದಂತಹ, ವಿಷಯಗಳನ್ನು ಕ್ರೋಢೀಕರಿಸಿ ಸಮರ್ಥವಾಗಿ ಅನುವಾದ ಮಾಡಿದ ಪ್ರೊ. ಜಿ.ಡಿ. ನಾಡಕರ್ಣಿ ಇವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಪ್ರಥಮ ಅಧ್ಯಕ್ಷರಾದ ಶ್ರೀ ಆರ್.ಎಸ್. ಹುಕ್ಕೇರಿಕರ್ ಅವರು ಮತ್ತು ದ್ವಿತೀಯ ಮುದ್ರಣ ಮಾಡಿಸಿದ ಕ್ರಿಯಾಶೀಲ ಅಧ್ಯಕ್ಷರಾದ ಡಾ. ಹೊ. ಶ್ರೀನಿವಾಸಯ್ಯ ಅವರು ಈ ಕೃತಿಯನ್ನು ಪ್ರಕಟಗೊಳಿಸಿರುವ ಬಗ್ಗೆ ಅಭಿನಂದನೆಗಳು ಸಲ್ಲುತ್ತವೆ. ಪರಿಷ್ಕೃತ ತೃತೀಯ ಆವೃತ್ತಿಯ ಪ್ರಕಟಣೆಗೆ ಶ್ರಮಸಿರುವ ಗೌ. ಕಾರ್ಯದರ್ಶಿಗಳಾದ ಶ್ರೀಮತಿ ಇಂದಿರಾ ಕೃಷ್ಣಪ್ಪ ಇವರಿಗೆ ಹಾಗೂ ಗಾಂಧಿ ಸ್ಮಾರಕ ನಿಧಿಯ ಎಲ್ಲಾ ಕಾರ್ಯಕಾರಿ ಸಮಿತಿಯ ಸದಸ್ಯರಿಗೆ ಹೃದಯಪೂರ್ವಕ ನಮನಗಳು ತಿಳಿಸಬಯಸುತ್ತೇನೆ.

ಈ ಕೃತಿಯನ್ನು ಅಂದವಾಗಿ ಮುದ್ರಿಸಿ, ಮುಖಪುಟ ವಿನ್ಯಾಸ ರಚಿಸಿದ ಕ್ರಿಯೇಟಿವ್‌ಗೀಕ್ಸ್‌ನ ಶ್ರೀ ಮಹೇಶ್ ಹಾಗೂ ಎಲ್ಲಾ ಸಂಗಾತಿಗಳಿಗೆ ಹಾರ್ದಿಕ ವಂದನೆಗಳು. ಈ ಕೃತಿಯನ್ನು ಓದಿ, ತಮ್ಮ ಅನಿಸಿಕೆ, ಅಭಿಪ್ರಾಯಗಳನ್ನು ಗಾಂಧಿ ಸ್ಮಾರಕ ನಿಧಿ, ಬೆಂಗಳೂರು ಇಲ್ಲಿಗೆ ತಿಳಿಸಲು ಕೋರುತ್ತೇವೆ. ಅಂಥಹ ತಮ್ಮ ಅಭಿಪ್ರಾಯಗಳನ್ನು ಗಾಂಧಿ ಭವನದ ಮಾಸಿಕ ಪತ್ರಿಕೆ 'ಬಾಪು ಪ್ರಪಂಚ'ದಲ್ಲಿ ಪ್ರಕಟಿಸಲಾಗುವುದು.

ಬೆಂಗಳೂರು
ಜುಲೈ 24, 2018

ಡಾ. ವೂಡೇ ಪಿ. ಕೃಷ್ಣ
ಅಧ್ಯಕ್ಷರು
ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಮೊದಲ ಮಾತು

ಗಾಂಧೀಜಿ ಕುಳಿತಲ್ಲಿ ದೇವಮಂದಿರವಾಯಿತು. ನಡೆದಲ್ಲಿ ಪವಿತ್ರ ಭೂಮಿಯಾಯಿತು–ಎಂದು ಪಂಡಿತ ನೆಹರೂ ಅವರು ಹೇಳಿದರು. ಗಾಂಧೀಜಿಯ ಜೀವನ ಕಾಲದಲ್ಲಿ ಅವರ ಮಾರ್ಗದರ್ಶನದಲ್ಲಿ ಕೆಲಸವನ್ನು ಮಾಡುವ ಸೌಭಾಗ್ಯವು ಅನೇಕರಿಗೆ ಲಭಿಸಿತು. ಅವರ ವ್ಯಕ್ತಿತ್ವವು ತೋರಿದ ದಾರಿಯನ್ನು ಇಂದು ನಾವು ಅವರ ಲೇಖನಗಳ ಮೂಲಕ ಕಂಡುಕೊಳ್ಳಬೇಕಾಗಿದೆ.

ಗಾಂಧೀಜಿಯವರ ವಿಚಾರಗಳನ್ನು ಈ ರೀತಿ ಜನತೆಯ ಮುಂದಿಡುವ ದೃಷ್ಟಿಯಿಂದ ಗಾಂಧಿ ಸ್ಮಾರಕ ನಿಧಿಯವರು ಬೇರೆ ಬೇರೆ ಭಾರತೀಯ ಭಾಷೆಗಳಲ್ಲಿ ಗಾಂಧಿ ಸಾಹಿತ್ಯವನ್ನು ಭಾಷಾಂತರಿಸಿ ಪೂರೈಸುತ್ತಿದ್ದಾರೆ. ಕನ್ನಡದಲ್ಲಿ ಈಗಾಗಲೇ ಇಂಥ ಅನೇಕ ಪ್ರೌಢ ಪ್ರಕಟಣೆಗಳಾಗಿವೆ.

ಹೆಚ್ಚು ಸರಳವಾದ ಭಾಷೆಯಲ್ಲಿ ಗಾಂಧಿ ಸಾಹಿತ್ಯವನ್ನು ಒದಗಿಸುವ ದೃಷ್ಟಿಯಿಂದಲೂ, ಇಂಥ ಪ್ರಕಟಣೆಗಳು ಹಣ ಮತ್ತು ಆಕಾರಗಳ ದೃಷ್ಟಿಯಿಂದ ಹೆಚ್ಚು ಸಂಗ್ರಹಾನುಕೂಲವಾಗಿರುವಂತೆಯೂ ಇನ್ನೂ ಎರಡು ಆಕಾರಗಳಲ್ಲಿ ಗಾಂಧಿ ಸಾಹಿತ್ಯವನ್ನು ಪ್ರಕಟಿಸುವುದೆಂದು ನಿರ್ಧರಿಸಿತು.

ಈ ಪ್ರಕಟಣೆಗಳಲ್ಲಿಯ ಮೊದಲಿನ ಮಾಲಿಕೆಯಲ್ಲಿ ಹೆಚ್ಚು ಸರಳವಾದ ಪ್ರತಿಪಾದನೆಯ ಕಡೆಗೆ ಲಕ್ಷ್ಯವನ್ನು ಪೂರೈಸಿದ್ದರೆ ಜೇಬಿನಾವೃತ್ತಿಯಲ್ಲಿ ಆ ವಿಷಯಗಳ ಬಗೆಗೆ ಗಾಂಧಿ ವಿಚಾರ ಸಾರವು ನೆನಪಿನಲ್ಲಿ ಉಳಿಯುವಂತೆ ಸೂತ್ರಬದ್ಧವಾಗಿ ವಿಷಯಗಳನ್ನು ಕೊಡಲಾಗಿದೆ.

ಮೊದಲಿನ 'ಜನಪ್ರಿಯ' ಆವೃತ್ತಿಯಲ್ಲಿ ಈಗಾಗಲೇ "ಮಹಿಳೆಯರು", "ಒಳ್ಳೆಯ ಜೀವನ", ಎಂಬ ಎರಡು ಪುಸ್ತಕಗಳು ಪ್ರಕಟವಾಗಿವೆ.

ಶಿಕ್ಷಣ ಮತ್ತು ಇತರ ವಿಧಾಯಕ ಕಾರ್ಯಕ್ಷೇತ್ರಗಳಲ್ಲಿ ಇಂದು ಗಾಂಧಿ ವಿಚಾರದ ತಿಳುವಳಿಕೆ ಮತ್ತು ಅನುಷ್ಠಾನದ ಅವಶ್ಯಕತೆ ಎಷ್ಟಿದೆಯೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ವಯಸ್ಕರ ಶಿಕ್ಷಣ ಸಂಸ್ಥೆಗಳು, ಹಳ್ಳಿ ಮತ್ತು ಪಟ್ಟಣಗಳಲ್ಲಿಯ ವಾಚನಾಲಯಗಳು ಮತ್ತು ವಿಧಾಯಕ ಕಾರ್ಯಕರ್ತರು ಈ ಪ್ರಕಟಣೆಗಳನ್ನು ಸ್ವಾಗತಿಸುವುದಾಗಿ ನಂಬಿದ್ದೇವೆ.

ವಿದ್ಯಾಗಿರಿ
ಧಾರವಾಡ
10–12–1959

ಆರ್.ಎಸ್. ಹುಕ್ಕೇರಿಕರ್
ಅಧ್ಯಕ್ಷರು
ಸ್ಥಾನಿಕ ಸಂಪಾದಕ ಮಂಡಳಿ

ಪ್ರಕಾಶಕರ ಮಾತು

ಗಾಂಧೀ ತತ್ವವೆಂಬುದು ಕತ್ತಲಿನ ಸಮಾಜಕ್ಕೆ ದೀವಟಿಗೆಯಿದ್ದಂತೆ. ಗಾಂಧೀಜಿಯವರ ಸತ್ಯ, ಅಹಿಂಸೆ ಮತ್ತು ಸ್ವದೇಶಿ ತತ್ವಗಳು ಬದುಕಿನ ದಾರಿಯನ್ನು ಹಸನುಗೊಳಿಸಲು ನೇಗಿಲಿದ್ದಂತೆ, ಈ ಕೃತಿ ಮೊದಲು ಮುದ್ರಣವಾದದ್ದು 1960ರ ಗಾಂಧೀ ಜಯಂತಿ ಸಂದರ್ಭದಲ್ಲಿ 5000 ಕೃತಿಗಳನ್ನು ಮುದ್ರಿಸಲಾಗಿತ್ತು. ಆ ಕೃತಿಗಳು ಮುಗಿದುಹೋಗಿರುವುದರಿಂದ ಈ ಕೃತಿಯನ್ನು ಪುನರ್‌ಮುದ್ರಣ ಮಾಡಲಾಯಿತು. ಈ ಕೃತಿಯಲ್ಲಿ ಅಸ್ಪೃಶ್ಯತೆಯು ಮಹಾ ಪಾಪವೆಂದು ಅದು ಹಿಂದು ಧರ್ಮಕ್ಕೆ ಅಂಟಿಕೊಂಡಿರುವ ಮಹಾಕಳಂಕವೆಂದು ನಾನು ಭಾವಿಸಿದ್ದೇನೆ. ದಕ್ಷಿಣ ಆಫ್ರಿಕೆಯ ಕಹಿ ಅನುಭವದಿಂದ ನನ್ನಲ್ಲಿ ಈ ಭಾವನೆಯು ಬೆಳೆದಿದೆಯೆಂದು ಕೆಲವರು ತಿಳಿದಿದ್ದಾರೆ. ಆದರೆ ಇವು ನನ್ನ ಅನುಭವಕ್ಕೆ ಗೋಚರಿಸಿದವು. ಮತ್ತು ಎಲ್ಲಿಯವರೆವಿಗೆ ಹಿಂದುಗಳು ತಮ್ಮ ಬಂಧು ವರ್ಗದ ಒಂದು ಭಾಗವನ್ನು ಮುಟ್ಟುವುದು ಪಾಪವೆಂದು ತಿಳಿಯುವರೋ ಅಲ್ಲಿಯವರೆಗೆ ಸ್ವರಾಜ್ಯವನ್ನು ಪಡೆಯುವುದು ಅಸಾಧ್ಯವೆಂದು ನಂಬಿದ್ದರು. ಅವರು ಕೃತಿಯಲ್ಲಿ ಅಸ್ಪೃಶ್ಯತೆಯು ಮಹಾಪಾಪ, ಅಸ್ಪೃಶ್ಯತೆ ಮತ್ತು ಸ್ವರಾಜ್ಯ, ಹಿಂದು ಧರ್ಮ ಹಾಗೂ ಅಸ್ಪೃಶ್ಯತೆ, ಅಸ್ಪೃಶ್ಯತೆ ಮತ್ತು ವರ್ಣ ಜಾತಿಗಳೂ ಅಸ್ಪೃಶ್ಯತೆ ನಿವಾರಣೆ, ದೇವಾಲಯ ಪ್ರವೇಶ, ಸಹಭೋಜನ ಮತ್ತು ಅಂತರಜಾತಿ ವಿವಾಹ, ಧರ್ಮಾಂತರ, ಶಿಕ್ಷಣ ಸುಧಾರಣೆ, ಹರಿಜನ ಸೇವಕರಿಗೆ ಹಿತೋಕ್ತಿಗಳು ಇಂತಹ ಹಲವಾರು ವಿಚಾರಗಳನ್ನು ಯಂಗ್ ಇಂಡಿಯಾ ಪತ್ರಿಕೆಯಲ್ಲಿ ತಿಳಿಸಿದ್ದಾರೆ. ಅವುಗಳ ಆಯ್ದ ಲೇಖನಗಳ ಮಾಲೆಗಳನ್ನು ಹೆಕ್ಕಿ ಕೃತಿಯನ್ನಾಗಿಸಲಾಗಿದೆ. ಈ ಕೃತಿಯು ಸರ್ವೋದಯ ಸಮಾಜದ ರಚನೆಗೆ ಇಂದಿನ ಸಮಾಜಕ್ಕೆ ಅವಶ್ಯವಾದುದು. ಇಂತಹ ಕೃತಿಯು ವಿದ್ಯಾರ್ಥಿ ಯುವಜನತೆಗೆ ಉತ್ತಮ ಕೃತಿಯಾಗಬಲ್ಲದು.

ಇಂತಹ ಕೃತಿಯನ್ನು ಪ್ರಕಟಿಸಿ ಮಹಾತ್ಮರ ಅಭಿಪ್ರಾಯಗಳನ್ನು ಜನರಲ್ಲಿ ಪರಿಚಯಿಸಿದ ಸ್ಮಾರಕ ನಿಧಿಯ ಹಿಂದಿನ ಅಧ್ಯಕ್ಷರು ಹಾಗೂ ಅಂದಿನ ಪ್ರಕಟನಾ ಸಲಹಾ ಸಮಿತಿಯ ಸದಸ್ಯರೆಲ್ಲರ ಸಹಾಯವನ್ನು ನಾನು ನೆನೆಯುತ್ತೇನೆ. ಈ ಕಾರ್ಯದಲ್ಲಿ ನಮ್ಮೊಡನೆ ಸಹಕರಿಸಿದ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಕಾರ್ಯಕಾರಿ ಸಮಿತಿ ಸದಸ್ಯರೆಲ್ಲರ ಸಹಾಯವನ್ನು ನಾನು ನೆನೆಯುತ್ತೇನೆ. ಈ ಕಾರ್ಯದಲ್ಲಿ ನಮ್ಮೊಡನೆ ಸಹಕರಿಸಿದ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಕಾರ್ಯಕಾರಿ ಸಮಿತಿ ಸದಸ್ಯರಿಗೂ ಹಾಗೂ ಈ ಕೃತಿ ಕರಡು ತಿದ್ದುಪಡಿ ಮಾಡಿದ ಶ್ರೀಯುತ ಅಶ್ವಥ್‌ನಾರಾಯಣ್ ದಂಪತಿಗಳಿಗೂ ಮತ್ತು ಈ ಕೃತಿಗೆ ಅಂದವಾದ ಮುಖಪುಟ ರಚಿಸಿಕೊಟ್ಟ ಡಾ॥ ಬಸವರಾಜ ಪಾಟೀಲ್ ಅವರಿಗೂ ಮತ್ತು ಅಂದವಾಗಿ ಸಮಯಕ್ಕೆ ಸರಿಯಾಗಿ ಮುದ್ರಿಸಿಕೊಟ್ಟ ಶ್ರೀ ಮಂಜುನಾಥ ಪ್ರಿಂಟರ್ಸ್ ಮಾಲೀಕರಾದ ಶ್ರೀ ಲೋಕೇಶ್ ಅವರಿಗೂ ಧನ್ಯವಾದಗಳು.


ಡಾ॥ ಹೊ. ಶ್ರೀನಿವಾಸಯ್ಯ
ಅಧ್ಯಕ್ಷರು ಮತ್ತು ಪ್ರಕಾಶಕರು
(1985 ರಿಂದ 2017)
ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಪರಿವಿಡಿ

ಸಂಕ್ಷೇಪ ಸೂಚಿ :

ಯ.ಇ. = ಯಂಗ್ ಇಂಡಿಯಾ

ಹ. = ಹರಿಜನ



"ಅಸ್ಪೃಶ್ಯತೆಯು ಮಹಾ ಪಾಪವು"

ಅಸ್ಪೃಶ್ಯತೆಯು ಹಿಂದೂ ಧರ್ಮಕ್ಕೆ ಅಂಟಿಕೊಂಡಿರುವ ಮಹಾ ಲಂಕವೆಂದು ನಾನು ಭಾವಿಸಿದ್ದೇನೆ. ದಕ್ಷಿಣ ಆಫ್ರಿಕೆಯಲ್ಲಿಯ ಹೋರಾಟದ ಹಿ ಅನುಭವದಿಂದ ನನ್ನಲ್ಲಿ ಈ ಭಾವನೆಯು ಬೆಳೆದಿದೆಯೆಂದು ಕೆಲವರು ಳಿದಿದ್ದಾರೆ; ಇನ್ನು ಕೆಲವರು, ನಾನು ಇಂಥ ವಿಚಾರಗಳನ್ನು ಕ್ರಿಶ್ಚನ್ ಧಾರ್ಮಿಕ ಗ್ರಂಥಗಳನ್ನು ಓದುವುದರಿಂದ ಪಡೆದೆನೆಂದು ಭಾವಿಸಿದ್ದಾರೆ. ಆದರೆ ಈ ಊಹೆಗಳೆಲ್ಲ ತಪ್ಪು. ನಾನು ಬೈಬಲ್‌ನಾಗಲಿ ಅದನ್ನು ಧರ್ಮಗ್ರಂಥವೆಂದು ಅನುಸರಿಸುವ ಜನರನ್ನಾಗಲಿ ಅರಿಯದೆ ಇದ್ದ ಕಾಲದಿಂದಲೂ ಅಸ್ಪೃಶ್ಯತೆಯ ಬಗ್ಗೆ ಇದೇ ವಿಚಾರಗಳು ನನ್ನಲ್ಲಿ ಬೆಳೆದುಬಂದಿದೆ.

ನಾನು ಆಗ ಹನ್ನೆರಡು ವರ್ಷ ವಯಸ್ಸಿನವನಿರಬಹುದು; ಉಕಾ ಎಂಬ ಹೆಸರಿನ ಒಬ್ಬ ಭಂಗಿಯು, ಒಬ್ಬ "ಅಸ್ಪೃಶ್ಯನು", ಆಗ ನಮ್ಮ ಮನೆಯ ಪಾಯಖಾನೆಗಳನ್ನು ಸ್ವಚ್ಛಮಾಡಲು ಬರುತ್ತಿದ್ದನು. "ಅವನನ್ನು ಮುಟ್ಟುವುದು ಪಾಪವೇಕೆ?"–ಎಂದು ನಾನು ಆಗ ನನ್ನ ತಾಯಿಯನ್ನು ಕೇಳುತ್ತಿದ್ದೆ. ನಾನು ಅಕಸ್ಮಾತ್ತಾಗಿ ಅವನನ್ನು ಮುಟ್ಟಿದರೂ ನನ್ನ ತಾಯಿಯು ನನಗೆ ಸ್ನಾನಮಾಡಲು ಹೇಳುತ್ತಿದ್ದಳು. ನಾನು ಆಗ ಹಿರಿಯರ ಮಾತನ್ನು ಮನ್ನಿಸುತ್ತಿದ್ದರೂ ಮುಗುಳ್ನಗೆಯಿಂದ ಹೇಳುತ್ತಿದ್ದೆ– "ಅಸ್ಪೃಶ್ಯತೆಗೆ ಧರ್ಮದ ಮನ್ನಣೆಯಿಲ್ಲ, ಹಾಗಿರುವುದು ಎಂದಿಗೂ ಸಾಧ್ಯವಿಲ್ಲ!" ಎಂದು. ಉಕಾನನ್ನು ಮುಟ್ಟಿದರೆ ಯಾವ ಪಾಪವೂ ಬರಲಾರದೆಂದು ನಾನು ತಾಯಿಗೆ ಹೇಳುತ್ತಿದ್ದೆ.

ಶಾಲೆಯಲ್ಲಿ ನಾನು 'ಅಸ್ಪೃಶ್ಯ'ರನ್ನು ಅಕಸ್ಮಾತ್ತಾಗಿ ಮುಟ್ಟಿದಾಗ ನಾನು ತಂದೆ–ತಾಯಿಗಳಿಗೆ ಹಾಗೆಂದು ಹೇಳುತ್ತಿದ್ದೆ. ಆಗ ತಾಯಿಯು "ದಾರಿಯಲ್ಲಿ ಹೋಗುತ್ತಿರುವ ಯಾವನಾದರೊಬ್ಬ ಮುಸಲಮಾನನನ್ನು ಮುಟ್ಟಿದರೆ ಅಸ್ಪೃಶ್ಯರನ್ನು ಸೋಂಕಿದ ಪಾಪವು ಪರಿಹಾರವಾಗುವುದು" ಎಂದು ಹೇಳುತ್ತಿದ್ದಳು. ನನ್ನ ತಾಯಿಗೆ ಗೌರವ ಕೊಡುವುದರ ಸಲುವಾಗಿ ನಾನು ಅನೇಕ ಸಲ ಅವಳು ಹೇಳಿದ ಹಾಗೆ ಮಾಡಿದೆ–ಆದರೆ ಅದನ್ನು ಧಾರ್ಮಿಕವಿಧಿ ಎಂದು ನಾನೆಂದೂ ನಂಬಿರಲಿಲ್ಲ. ಕೆಲಕಾಲದ ನಂತರ ನಾವು ಪೋರಬಂದರಕ್ಕೆ ಹೋದೆವು. ನಾನಿನ್ನೂ ಇಂಗ್ಲಿಷ್ ಶಾಲೆಗೆ ಹೋಗಲು ಪ್ರಾರಂಭಿಸಿರಲಿಲ್ಲ. ಆಗ ನಾನು ನನ್ನ ಸೋದರನ ಜೊತೆಗೆ

ಬ್ರಾಹ್ಮಣರೊಬ್ಬರಿಂದ ರಾಮರಕ್ಷಾ ಮಂತ್ರವನ್ನೂ, ವಿಷ್ಣುಪೂಜೆಯನ್ನೂ ಕಲಿತೆ. ಮನೆಯಲ್ಲಿ ದೀಪಗಳು ಆರಿ ಕತ್ತಲೆಯಾದಾಗ ನಾನು ಭೂತ-ಪಿಶಾಚಿಗಳು ಬರುತ್ತವೆ ಎಂದು ಬಹಳ ಹೆದರುತ್ತಿದ್ದೆನು. ಆಗ ನಮ್ಮ ಮನೆಯ ಹತ್ತಿರ ಇರುತ್ತಿದ್ದ ಒಬ್ಬ ವೃದ್ಧೆಯು ರಾಮರಕ್ಷಾ ಮಂತ್ರವನ್ನು ಪಠಿಸಿದರೆ ಯಾವ ಭಯವೂ ಉಂಟಾಗಲಾರದೆಂದು ಹೇಳಿದ್ದಳು. ಅದರಂತೆ ನಾನು ಆ ಮಂತ್ರವನ್ನು ಪಠಿಸುತ್ತಿದ್ದೆ. ಈ ಮಂತ್ರದಲ್ಲಿ ಎಲ್ಲಿಯೂ "ಅಸ್ಪೃಶ್ಯರನ್ನು ಮುಟ್ಟುವುದು ಪಾಪ" ಎಂದು ಹೇಳಿರಲಿಲ್ಲ.

ನಮ್ಮ ಮನೆಯಲ್ಲಿ ತಪ್ಪದೆ ರಾಮಾಯಣವನ್ನು ಒಬ್ಬ ಬ್ರಾಹ್ಮಣರು ಓದುತ್ತಿದ್ದರು. ಅದರಲ್ಲಿ ಈಗ 'ಅಸ್ಪೃಶ್ಯ'ನೆಂದು ಕರೆಯಬಹುದಾದ ಒಬ್ಬ ವ್ಯಕ್ತಿಯು ರಾಮನನ್ನು ತನ್ನ ನಾವಿನಲ್ಲಿ ಗಂಗಾನದಿಯ ಆಚೆಯ ದಂಡೆಗೆ ಮುಟ್ಟಿಸಿದನೆಂದು ಬರುತ್ತದೆ. ಹಾಗಾದರೆ ರಾಮಾಯಣದಲ್ಲಿ ಅಸ್ಪೃಶ್ಯತೆಯ ಕಲ್ಪನೆ ಇರಲಿಲ್ಲವೆಂದು ನಾನು ಭಾವಿಸಿದೆ. ನಾವು ಪರಮಾತ್ಮನನ್ನು 'ಪತಿತ ಪಾವನ' ಎಂದು ಕರೆಯುವುದಿಲ್ಲವೇ? ಅಂದಮೇಲೆ ಹಿಂದೂ ಧರ್ಮದಲ್ಲಿ ಜನಿಸಿದ ಒಬ್ಬ ವ್ಯಕ್ತಿಯನ್ನು "ಅಸ್ಪೃಶ್ಯ" ಎಂದು ಕರೆಯುವುದು ಪಾಪವಲ್ಲವೇ? ಇದು ರಾಕ್ಷಸೀ ಮನೋವೃತ್ತಿಯಲ್ಲವೇ? ಚಿಕ್ಕವನಿದ್ದಾಗಿನಿಂದಲೂ ಅಸ್ಪೃಶ್ಯತೆಯು ಮಹಾಪಾಪವೆಂದು ನಾನು ಹೇಳುತ್ತ ಬಂದಿದ್ದೇನೆ. ಹಾಗೆ ಎಷ್ಟು ಸಲ ಹೇಳಿದರೂ ನನಗೆ ಬೇಸರವಿಲ್ಲ. ನಾನು ಹನ್ನೆರಡು ವರ್ಷದ ಬಾಲಕನಿರುವಾಗಲೇ ನನ್ನ ಈ ನಂಬಿಕೆ ರೂಪುಗೊಂಡಿತ್ತೆಂದು ನಾನು ಸುಳ್ಳು ಹೇಳಲಾರೆ. ಆದರೆ ನಾನು ಆಗಲೂ ಕೂಡ ಅಸ್ಪೃಶ್ಯತೆಯು ಪಾಪವೆಂದೇ ತಿಳಿದಿದ್ದೆ ಎಂಬುದು ನಿಜ. ವೈಷ್ಣವರು ಮತ್ತು ಸನಾತನಿ ಹಿಂದೂಗಳ ತಿಳುವಳಿಕೆಗಾಗಿ ನಾನು ಮೇಲಿನ ಕಥೆಯನ್ನೆಲ್ಲ ಹೇಳಿದ್ದೇನೆ.

(ಯಂಗ್ ಇಂಡಿಯಾ, 27–3–1921)

* * *

ಏಪ್ರಿಲ್ 6ನೇ ದಿನಾಂಕ ನಾನು ನೆಲ್ಲೂರಿನಲ್ಲಿದ್ದೆ. ಅಲ್ಲಿ ನಾನು 'ಅಸ್ಪೃಶ್ಯ'ರನ್ನು ಭೆಟ್ಟಿಯಾದೆ ಮತ್ತು ಇಂದು ಪ್ರಾರ್ಥನೆ ಮಾಡಿದಂತೆ ಅಂದೂ ಮಾಡಿದೆ: ನಾನು ಮತ್ತೊಮ್ಮೆ ಹುಟ್ಟಿ ಬರುವುದಾದರೆ, 'ಅಸ್ಪೃಶ್ಯ'ರ ದುಃಖ,

ಕಷ್ಟ, ಅವಮಾನಗಳನ್ನು ನಾನು ಅನುಭವಿಸಿ ಅಂಥ ಸ್ಥಿತಿಯಿಂದ ನನ್ನನ್ನೂ ಅವರನ್ನೂ ಪಾರುಮಾಡಲು ಪ್ರಯತ್ನಿಸಲು ಹೆಚ್ಚು ಅನುಕೂಲವಾಗುವುದು. ದೇವರಲ್ಲಿ ಇದೇ ನನ್ನ ಪ್ರಾರ್ಥನೆ:- "ಅಸ್ಪೃಶ್ಯೋದ್ಧಾರದ ಕೆಲಸ ಪೂರ್ಣವಾಗುವಷ್ಟರಲ್ಲಿಯೇ ನಾನು ಮರಣಹೊಂದಿದರೆ, ನನ್ನ ಹಿಂದೂ ಧರ್ಮ ಆದರ್ಶವನ್ನು ಸಾಧಿಸದಿದ್ದರೆ, ನಾನು 'ಅಸ್ಪೃಶ್ಯ'ರಲ್ಲಿ ಒಬ್ಬನಾಗಿ ಹುಟ್ಟಬೇಕು ಮತ್ತು ಹಿಂದೂ ಧರ್ಮದಲ್ಲಿಯೂ ಅಸ್ಪೃಶ್ಯತೆಯ ಕಲಂಕವನ್ನು ನಿವಾರಿಸಿ ಅದನ್ನು ಪರಿಪೂರ್ಣವಾಗಿಸಬೇಕು."

(ಯಂಗ್ ಇಂಡಿಯಾ, 4-5-1921)

* * *

ಹಿಂದೂ ಧರ್ಮದ ಈ ಕಲಂಕವನ್ನು ನಿವಾರಿಸುವುದೆಂತು? "ಬೇರೆಯವರು ನಿನ್ನನ್ನು ಹೇಗೆ ಕಾಣಬೇಕೆಂದು ನೀನು ಬಯಸುವಿಯೋ ಹಾಗೆಯೇ ನೀನೂ ಅನ್ಯರನ್ನು ಕಾಣು." ನಾನು ಎಷ್ಟೋ ಸಲ ಇಂಗ್ಲಿಷ್ ಅಧಿಕಾರಿಗಳಿಗೆ ಹೇಳಿದ್ದೇನೆ:- "ನೀವು ಭಾರತದ ಸೇವಕರೂ, ಮಿತ್ರರೂ ಆಗಿದ್ದರೆ ನಿಮ್ಮ ಉಚ್ಚ ಆಸನಗಳಿಂದ ಕೆಳಗಿಳಿದು ಬನ್ನಿರಿ; ಭಾರತೀಯರೊಂದಿಗೆ ಒಂದಾಗಿ ಅವರ ಸ್ನೇಹವನ್ನು ಗಳಿಸಿರಿ; ಮತ್ತು ಅವರನ್ನು ನಿಮ್ಮ ಇಂಗ್ಲಿಷ್ ಬಾಂಧವರಷ್ಟೇ ಸಮಾನರೆಂದು ತಿಳಿಯಿರಿ." ಪಂಜಾಬದ ಮತ್ತು ಖಿಲಾಫತ್‌ದ ಅನುಭವಗಳ ನಂತರ ನಾನು ಇನ್ನೊಂದು ಹೆಜ್ಜೆ ಮುಂದೆ ಹೋಗಿ ಅವರಿಗೆ ಪಶ್ಚಾತ್ತಾಪಪಡಲು ಮತ್ತು ಹೃದಯಪರಿವರ್ತನೆ ಮಾಡಿಕೊಳ್ಳಲು ಕೇಳಿಕೊಂಡಿರುವೆ. ಅದರಂತೆಯೇ ಹಿಂದೂಗಳಾದ ನಾವು 'ಅಸ್ಪೃಶ್ಯ'ರಿಗೆ ಮಾಡಿದ ಅನ್ಯಾಯಗಳ ಬಗ್ಗೆ ಪಶ್ಚಾತ್ತಾಪಪಡಬೇಕು. ಮತ್ತು ಅದರ ಬಗೆಗಿನ ನಮ್ಮ ಧೋರಣೆಯನ್ನು ಬದಲಿಸಬೇಕು. ಇಂಗ್ಲಿಷರ ರಾಜ್ಯದಾಡಳಿತೆಯು ಎಷ್ಟು ನಮ್ಮನ್ನು ಹತ್ತಿಕ್ಕಿದೆ ಎಂದು ನಾವು ಭಾವಿಸುತ್ತೇವೆಯೋ ಅಷ್ಟೇ ರಾಕ್ಷಸೀವೃತ್ತಿಯಿಂದ ನಾವು 'ಅಸ್ಪೃಶ್ಯ'ರನ್ನು ಹತ್ತಿಕ್ಕಿದ್ದೇವೆ. ನಾವು ಅವರಿಗೆ ಕೆಲವು ಶಾಲೆಗಳನ್ನು ತೆರೆದುಕೊಟ್ಟರೆ ನಮ್ಮ ಕರ್ತವ್ಯ ಮುಗಿಯಲಿಲ್ಲ; ನಾವು ಅವರಿಗಿಂತ ಮೇಲು ಎಂಬ ಭಾವನೆಯನ್ನು ನಾವು ತೊರೆಯಬೇಕು. ನಾವು ಅವರನ್ನು ಒಡಹುಟ್ಟಿದವರೆಂದು ಬಗೆಯಬೇಕು. ನಾವು ಇದುವರೆಗೆ ಅವರಿಗೆ ಏನೇನು ನಿರಾಕರಿಸಿದ್ದೇವೆಯೋ ಅದನ್ನೆಲ್ಲ ಕೊಡಬೇಕು. ಮತ್ತು ಇದು ಕೇವಲ ನಾಲ್ಕು ಜನ ಇಂಗ್ಲಿಷ್ ಕಲಿತ ಸುಧಾರಕರ ಕೆಲಸವಾಗಿರದೇ

ಎಲ್ಲ ಹಿಂದೂಗಳ ಸ್ವಯಂ ಪ್ರೇರಿತ, ಪ್ರಯತ್ನಪೂರ್ವಕ ಕರ್ತವ್ಯವಾಗಿದೆ. ಈಗಾಗಲೇ ವಿಲಂಬವಾಗಿರುವ ಈ ಕರ್ತವ್ಯವನ್ನು ನಾವು ಅನಿಶ್ಚಿತ ಅವಧಿಯವರೆಗೆ ಮುಂದೆ ಹಾಕದೆ, ಈ ವರ್ಷದಲ್ಲಿಯೇ ಇದನ್ನು ಕಾರ್ಯಗತಗೊಳಿಸಲು ನಾವು ಹೆಣಗಬೇಕು.

(ಯಂಗ್ ಇಂಡಿಯಾ, 19-1-1921)

* * *

ರಾಜಕೀಯ ಉದ್ದೇಶಗಳಿಗಾಗಿ ದಲಿತವರ್ಗಗಳ ಉಪಯೋಗ ಮಾಡಿಕೊಳ್ಳುವ ಪ್ರವೃತ್ತಿ ಇತ್ತೀಚೆಗೆ ಕಂಡುಬರುತ್ತಿದೆ. ಇದು ಅಯೋಗ್ಯವೆಂದು ನಾನು ನನ್ನ ಹಿಂದೂ ಬಾಂಧವರಿಗೆ ಎಚ್ಚರಿಕೆ ಕೊಡುತ್ತಿದ್ದೇನೆ. ಅಸ್ಪೃಶ್ಯತೆಯನ್ನು ನಿವಾರಿಸುವುದು ಸವರ್ಣ ಹಿಂದೂಗಳು ಹಿಂದೂಧರ್ಮದ ಸಲುವಾಗಿ ಮತ್ತು ತಮ್ಮ ಸಲುವಾಗಿ ಮಾಡಬೇಕಾದ ತಪಸ್ಸಾಗಿದೆ. 'ಅಸ್ಪೃಶ್ಯ'ರೆಂದು ಕರೆಯಲ್ಪಡುವ ಜನರ ಶುದ್ಧೀಕರಣ ಈಗ ಆಗಬೇಕಾಗಿಲ್ಲ; ಆದರೆ 'ಸವರ್ಣ ಹಿಂದೂ'ಗಳೆಂದು ಕರೆದುಕೊಳ್ಳುವ ಜನರ ಶುದ್ಧೀಕರಣ ಈಗ ಅವಶ್ಯವಾಗಿದೆ. ನಮ್ಮ ಅಹಂಕಾರವೇ ನಮ್ಮ–ಎಂದರೆ ಸವರ್ಣ ಹಿಂದೂಗಳ–ದೋಷಗಳು ಕಾಣದಿರುವುದಕ್ಕೆ ಕಾರಣವಾಗಿದೆಯಲ್ಲದೆ, ನಾವು ಕಡೆಗಣಿಸಿದ ನಮ್ಮ ಬಂಧುಗಳ ದೋಷಗಳು ದೊಡ್ಡವಾಗಿ ಕಾಣುವುದಕ್ಕೂ ಕಾರಣವಾಗಿದೆ. ಪರಮಾತ್ಮನ ದಯೆ ಮತ್ತು ಸಾಕ್ಷಾತ್ಕಾರಗಳು ಯಾವುದೇ ಕುಲದ ಅಥವಾ ದೇಶದ ಸೊತ್ತು ಅಲ್ಲ. ಯಾರು ಅವನನ್ನು ಆರಾಧಿಸುವರೋ ಅವರಿಗೆ ಅವು ಪ್ರಾಪ್ತವಾಗುವವು. ಯಾವ ಧರ್ಮ ಅಥವಾ ದೇಶವು ಅನ್ಯಾಯ, ಅಸತ್ಯ ಅಥವಾ ಹಿಂಸೆಗೆ ಅಂಟಿಕೊಳ್ಳುವುದೋ ಅಂಥ ಧರ್ಮ ಅಥವಾ ದೇಶವು ಬಾಳಲಾರದು. ಪರಮಾತ್ಮನೆಂದರೆ ಬೆಳಕು, ಕತ್ತಲೆಯಲ್ಲ; ಅವನು ಪ್ರೇಮ, ದ್ವೇಷವಲ್ಲ; ಅವನು ಸತ್ಯ, ಅಸತ್ಯವಲ್ಲ. ಪರಮಾತ್ಮನೊಬ್ಬನೇ ದೊಡ್ಡವನು. ಅವನ ಸೃಷ್ಟಿಯಾದ ನಾವು ಧೂಳಿಯ ಕಣಗಳು. ನಾವು ನಿರಹಂಕಾರಿಗಳಾಗಿದ್ದು ಅವನ ಸೃಷ್ಟಿಯ ಅತಿ ಕೀಳು ಜೀವಿಯನ್ನೂ ಗೌರವಿಸಲು ನಾವು ಕಲಿಯೋಣ. ಶ್ರೀಕೃಷ್ಣನು, ಬೇರೆ ಯಾರನ್ನೂ ಗೌರವಿಸದ ರೀತಿಯಲ್ಲಿ, ಚಿಂದಿಯನ್ನು ಉಟ್ಟ ಸುದಾಮನನ್ನು ಗೌರವಿಸಲಿಲ್ಲವೇ? ಪ್ರೀತಿಯೇ ಧರ್ಮದ ಮೂಲ.

(ಯಂಗ್ ಇಂಡಿಯಾ, 26-12-1924)

ಅಸ್ಪೃಶ್ಯತೆ ಮತ್ತು ಸ್ವರಾಜ್ಯ

ಎಲ್ಲಿಯವರೆಗೆ ಹಿಂದೂಗಳು ಉದ್ದೇಶಪೂರ್ವಕವಾಗಿ ಅಸ್ಪೃಶ್ಯತೆಯನ್ನು ತಮ್ಮ ಧರ್ಮದ ಅಂಗವೆಂದು ಭಾವಿಸುವರೋ, ಎಲ್ಲಿಯವರೆಗೆ ಹಿಂದೂಗಳು ತಮ್ಮ ಬಂಧುವರ್ಗದ ಒಂದು ಭಾಗವನ್ನು ಮುಟ್ಟುವುದು ಪಾಪವೆಂದು ತಿಳಿಯುವರೋ ಅಲ್ಲಿಯವರೆಗೆ ಸ್ವರಾಜ್ಯವನ್ನು ಪಡೆಯುವುದು ಅಸಾಧ್ಯ. ಯುಧಿಷ್ಠಿರನು ತನ್ನ ನಾಯಿಯನ್ನು ಹೊರಗೆ ಬಿಟ್ಟು ಸ್ವರ್ಗವನ್ನು ಪ್ರವೇಶಿಸಲು ನಿರಾಕರಿಸಿದನು. ಅಂದಮೇಲೆ, ಆ ಯುಧಿಷ್ಠಿರನ ವಂಶಜರು "ಅಸ್ಪೃಶ್ಯ"ರನ್ನು ಬಿಟ್ಟು ಸ್ವರಾಜ್ಯವನ್ನು ಸಂಪಾದಿಸಲು ಹೇಗೆ ಸಾಧ್ಯ?

ನಾವು ನಮ್ಮ ಬಂಧುಗಳನ್ನು ಹತ್ತಿಕ್ಕಿ ಅಪರಾಧಗೈದಿದ್ದೇವೆ; ಅವರು ಹೊಟ್ಟೆ ಹೊಸೆಯುವಂತೆ ಮಾಡಿದವರೂ ನಾವೇ; ಅವರು ಭೂಮಿಯ ಮೇಲೆ ಮೂಗುತಿಕ್ಕುವಂತೆ ಮಾಡಿದವರೂ ನಾವೇ. ಕಣ್ಣು ಕೆಂಪಗೆ ಮಾಡಿ ನಾವು ಅವರನ್ನು ರೇಲ್ವೆಯ ಡಬ್ಬಿಗಳಿಂದ ಹೊರದೂಡುತ್ತೇವೆ;- ಇದಕ್ಕಿಂತ ಹೆಚ್ಚಿಗೆ ಅನ್ಯಾಯ ಬ್ರಿಟಿಶ್ ಆಡಳಿತೆಯಾದರೂ ಏನು ಮಾಡಿದೆ? ಎಲ್ಲಿಯವರೆಗೆ ನಾವು ದುರ್ಬಲರನ್ನು ಮತ್ತು ನಿಸ್ಸಹಾಯಕರನ್ನು ಸಂರಕ್ಷಿಸುವುದಿಲ್ಲವೋ, ಸ್ವರಾಜ್ಯವಾದಿಯೊಬ್ಬನು ಇನ್ನೊಬ್ಬ ವ್ಯಕ್ತಿಯ ಮನಸ್ಸನ್ನು ನೋಯಿಸಲು ಎಲ್ಲಿಯವರೆಗೆ ಸಾಧ್ಯವಿದೆಯೋ ಅಲ್ಲಿಯವರೆಗೆ ಸ್ವರಾಜ್ಯದ ಮಾತನ್ನಾಡುವುದು ವ್ಯರ್ಥವೇ ಸರಿ.

ಆದರೆ ನನ್ನಲ್ಲಿ ಇನ್ನೂ ವಿಶ್ವಾಸವಿದೆ. ಸಂತ ತುಲಸೀದಾಸರು ಮುಕ್ತಕಂಠದಿಂದ ಹಾಡಿರುವ, ಜೈನ-ವೈಷ್ಣವ ಧರ್ಮಗಳ ತಿರುಳಾಗಿರುವ, ಭಾಗವತ ಗ್ರಂಥದ ಸ್ಥಾಯಿಯಾಗಿರುವ, ಭಗವದ್ಗೀತೆಯ ಪ್ರತಿಯೊಂದು ಶ್ಲೋಕದಲ್ಲಿ ತುಂಬಿತುಳುಕುತ್ತಿರುವ ದಯೆ, ಪ್ರೀತಿ, ತ್ಯಾಗಗಳು ಭಾರತೀಯರ ಮನಸ್ಸಿನಲ್ಲಿ ಬೆಳೆಯುತ್ತಿರುವವೆಂಬುದನ್ನು ನಾನು ನನ್ನ ಭಾರತದ ಸಂಚಾರದಲ್ಲಿ ಅನೇಕ ಬಾರಿ ಕಂಡುಕೊಂಡಿದ್ದೇನೆ.

(ಯಂಗ್ ಇಂಡಿಯಾ, 4-5-1921)

* * *

ನಾವು ಅಸ್ಪೃಶ್ಯತೆಯನ್ನು ನಮ್ಮಲ್ಲಿ ಇಟ್ಟುಕೊಂಡೇ ಸ್ವರಾಜ್ಯವನ್ನು ಪಡೆಯಬಹುದೆಂಬ ತಪ್ಪು ಕಲ್ಪನೆ ನಮ್ಮಲ್ಲಿ ಹಲವರಿಗಿದೆ. ಆದರೆ ಇಂಥ ವಿಚಾರದಲ್ಲಿಯೇ ಮೂಲಭೂತ ವಿರೋಧವಿದೆಯೆಂಬುದು ಅನೇಕರ ಲಕ್ಷ್ಯಕ್ಕೆ ಬಂದಿಲ್ಲ. ಸ್ವರಾಜ್ಯವು 'ಸ್ಪೃಶ್ಯ'ರಿಗೆ ಎಷ್ಟು ಅವಶ್ಯಕವಾಗಿದೆಯೋ 'ಅಸ್ಪೃಶ್ಯ'ರಿಗೂ ಅಷ್ಟೇ ಅವಶ್ಯವಾಗಿದೆ. ನಾರಾಯಣವರಂದಿಂದ ಸುದ್ದಿಗಾರನೊಬ್ಬನು ಬರೆದಿದ್ದಾನೆ-

"ನಮ್ಮ ಪ್ರದೇಶದಲ್ಲಿ ಹಿಂದೂಗಳು ಅದರಲ್ಲಿಯೂ ಬ್ರಾಹ್ಮಣರು ಪಂಚಮರನ್ನು ಅತಿ ಕೀಳುರೀತಿಯಿಂದ ಕಾಣುತ್ತಾರೆ. ಹಳ್ಳಿಗಳಲ್ಲಿ ಬ್ರಾಹ್ಮಣರು ವಾಸಿಸುವ ಬೀದಿಗಳಲ್ಲಿ ಪಂಚಮರು ಅಡ್ಡಾಡುವಂತಿಲ್ಲ. ಬ್ರಾಹ್ಮಣರೊಡನೆ ಮಾತಾಡುವಾಗ ಅವರು ಬಹಳ ದೂರದಲ್ಲಿ ನಿಲ್ಲಬೇಕಾಗುವುದು".

ಈ ಪತ್ರದಲ್ಲಿ 'ಬ್ರಾಹ್ಮಣರು' ಎಂದು ಇದ್ದಲ್ಲೆಲ್ಲ 'ಸಾಹೇಬ'ರೆಂದೂ, 'ಪಂಚಮ'ರು ಎಂದು ಇದ್ದಲ್ಲೆಲ್ಲ 'ಭಾರತೀಯರು' ಎಂದೂ ಬದಲಿಸಿಕೊಂಡು ಓದಿರಿ; ಮತ್ತು ಆಗ ನಿಮಗೆ ಏನು ಅನಿಸುತ್ತದೆ? ಅಲ್ಲದೆ ಕೆಲವು ವಿದೇಶೀ ಸಾಹೇಬರು ಕೆಲವು ಬ್ರಾಹ್ಮಣರಿಗಿಂತಲೂ ನಿಶ್ಚಯವಾಗಿಯೂ ಒಳ್ಳೆಯವರಿದ್ದಾರೆಂದು ನಾನು ನಿಸ್ಸಂದೇಹವಾಗಿ ನಂಬಿದ್ದೇನೆ. ನಮ್ಮ ಒಬ್ಬ ಸೋದರನನ್ನು, ಕೇವಲ ಅವನ ಜನ್ಮದ ಮೂಲಕ, 'ಅಸ್ಪೃಶ್ಯ'ನೆಂದು ಕಡೆಗಣಿಸುವವರೆಗೆ ಪರಮಾತ್ಮನು ನಮಗೆ ಸ್ವರಾಜ್ಯವನ್ನು ಅನುಗ್ರಹಿಸುವುದಿಲ್ಲ.

(ಯಂಗ್ ಇಂಡಿಯಾ, 22-9-1921)

* * *

ನಾವು ನಮ್ಮ ಕುಲದ ಆರರಲ್ಲಿಯ ಒಂದು ಪಾಲನ್ನು 'ಅಸ್ಪೃಶ್ಯ'ರನ್ನಾಗಿಸಿ ಧರ್ಮದ ಹೆಸರಿನಲ್ಲಿ ಅವರನ್ನು ಕಡೆಗಣಿಸುತ್ತಿರುವ ಪಾಪಕ್ಕೆ ಪರಮಾತ್ಮನು ನಮಗೆ ಕೊಟ್ಟ ಶಿಕ್ಷೆಯೆಂದರೆ ವಿದೇಶಿಯರ ದಬ್ಬಾಳಿಕೆ. ಆದ್ದರಿಂದ ನಾವು ಸ್ವಾತಂತ್ರ್ಯ ಪಡೆಯುವುದಕ್ಕಿಂತ ಪೂರ್ವದಲ್ಲಿ ಅಸ್ಪೃಶ್ಯತೆಯನ್ನು ನಿವಾರಿಸಲೇಬೇಕು. ನಮ್ಮ ಬಂಧುಗಳನ್ನೇ ದಾಸ್ಯದಲ್ಲಿಟ್ಟ ನಾವು ಮೊದಲು ಅವರ ವಿಮೋಚನೆ ಮಾಡದಿದ್ದಲ್ಲಿ, ಸ್ವಾತಂತ್ರ್ಯ ಬೇಕು ಎಂದು ಕೇಳುವ ಹಕ್ಕು ನಮಗೆ ಹೇಗೆ ಬಂದೀತು?

(ಯಂಗ್ ಇಂಡಿಯಾ, 13-10-1921)

ನನ್ನ ದೃಷ್ಟಿಯಲ್ಲಿ 'ಸ್ವರಾಜ್ಯ'ವೆಂದರೆ ಪ್ರತಿಯೊಬ್ಬ ಭಾರತೀಯನು ಸ್ವತಂತ್ರನಾಗಿರುವ ಸ್ಥಿತಿ. ವಿದೇಶಿ ಆಳಿಕೆಯಲ್ಲಿ ನಾವೆಲ್ಲ ದುಃಖಪಡುತ್ತಿರುವಾಗ 'ಪಂಚಮ'ರ ಸ್ಥಿತಿ ಸುಧಾರಿಸದಿದ್ದರೆ, ಸ್ವರಾಜ್ಯ ದೊರೆತ ಮೇಲಿನ ಆನಂದದ ಕಾಲದಲ್ಲಿ ಅವರ ಸ್ಥಿತಿ ಸುಧಾರಿಸೀತೇ? ನಾನು ಭಾರತವನ್ನು ಕೇವಲ ಇಂಗ್ಲಿಷ್ ಆಳಿಕೆಯ ನೊಗದಿಂದ ಮುಕ್ತಮಾಡಲು ಬಯಸುತ್ತಿಲ್ಲ. ನಾನು ಭಾರತವನ್ನು ಎಲ್ಲ ಪ್ರಕಾರದ ನೊಗದಿಂದ ಮುಕ್ತಮಾಡಲಿಚ್ಛಿಸುತ್ತೇನೆ. ನನಗೆ 'ಸ್ವರಾಜ್ಯ'ದ ಚಳವಳಿಯೆಂದರೆ ಆತ್ಮಶುದ್ಧಿಯ ಚಳವಳಿ.

(ಯಂಗ್ ಇಂಡಿಯಾ, 12–6–1924)

* * *

ನಾವು ನಮ್ಮ ಹತಭಾಗ್ಯ ಬಂಧುಗಳೊಡನೆ ರಾಕ್ಷಸೀವೃತ್ತಿಯಿಂದ ನಡೆದುಕೊಂಡಿದ್ದೇವೆ. ನಮ್ಮೆದುರು ಇಟ್ಟುಕೊಂಡ ಅಸ್ಪೃಶ್ಯತಾ ನಿವಾರಣೆಯ ಕಾರ್ಯಕ್ರಮವೆಂದರೆ ಕೇವಲ ಆ ಮಹದನ್ಯಾಯದ ಅಲ್ಪ ಪರಿಮಾರ್ಜನೆ. ಕಾಂಗ್ರೆಸ್ಸಿನ ಕಾರ್ಯಕ್ರಮಗಳಲ್ಲಿ ಈ ಕೆಲಸಕ್ಕೆ ವಿಶೇಷ ಮಹತ್ವವನ್ನು ಕೊಡಲು ಒತ್ತಾಯಪಡಿಸಿದವನೂ ನಾನೇ; ನನ್ನನ್ನು ನಿಂದಿಸಬಯಸುವ ಕೆಲವರು ಇದು ನಾನು 'ಅಸ್ಪೃಶ್ಯ'ರನ್ನು ಒಲಿಸಿಕೊಳ್ಳಲು ಹೂಡಿದ ಆಟವೆಂದು ನನ್ನನ್ನು ಹೀಗಳೆಯಬಹುದು. ಇಂಥ ಆಪಾದನೆಯಲ್ಲಿ ಏನೂ ಹುರುಳಿಲ್ಲವೆಂದು ನಾನು ಹೇಳಬಯಸುತ್ತೇನೆ. ಹಿಂದೂಗಳೆಂದು ಹೇಳಿಕೊಳ್ಳುವವರೆಲ್ಲರೂ ಹಿಂದೂ ಧರ್ಮದ ಈ ಕಲಂಕವನ್ನು ನಿವಾರಿಸಿ ನಂತರ ಹಿಂದೂ ಧರ್ಮದ ಅಭಿಮಾನಿಗಳಾಗಬೇಕೆಂಬ ವಿಚಾರ ನನ್ನಲ್ಲಿ ಬಹಳ ಕಾಲದಿಂದಲೂ ಬೆಳೆದಿದೆ. ಕಾಂಗ್ರೆಸ್ಸಿನಲ್ಲಿ ಬಹುಶಃ ಹಿಂದೂಗಳೇ ಇರುವುದರಿಂದ ಅಸ್ಪೃಶ್ಯತಾ ನಿವಾರಣೆಗೆ ಕಾಂಗ್ರೆಸ್ ಕಾರ್ಯಕ್ರಮ ಪಟ್ಟಿಯಲ್ಲಿ ಪ್ರಥಮ ಪ್ರಾಶಸ್ತ್ಯವನ್ನು ನಾನು ಕೊಟ್ಟಿದ್ದೇನೆ. ಹಿಂದೂಗಳು ಈ ಕಲಂಕವನ್ನು ಮೊದಲು ತೆಗೆದುಹಾಕಲು ಸಿದ್ಧರಾಗದಿದ್ದರೆ ಅವರು ಸ್ವಾತಂತ್ರ್ಯಕ್ಕೆ ಅನರ್ಹರು ಎಂಬುದು ನನ್ನ ನಂಬಿಕೆಯಾಗಿದೆ. ಅಸ್ಪೃಶ್ಯತೆಯು ಹಾಗೆಯೇ ಉಳಿದು ನಾವು ಸ್ವತಂತ್ರರಾಗಿ ರಾಜಕೀಯ ಅಧಿಕಾರವನ್ನು ಪಡೆದರೆ ಆಗ 'ಅಸ್ಪೃಶ್ಯ'ರ ಸ್ಥಿತಿ ಈಗಿನಕ್ಕಿಂತ ಹೆಚ್ಚು ಹೀನವಾಗುವುದರಲ್ಲಿ ಸಂಶಯವಿಲ್ಲ. ಏಕೆಂದರೆ ಆಗ ನಾವು ನಮ್ಮ ದೌರ್ಬಲ್ಯದೋಷಗಳನ್ನು ರಾಜಕೀಯ ಅಧಿಕಾರದ ಸಹಾಯದಿಂದ ಮುಚ್ಚಿಕೊಳ್ಳಬಹುದು.

ಈ ಬಗೆಯ ಆತ್ಮಶುದ್ಧೀಕರಣವು ಸ್ವರಾಜ್ಯ ಪಡೆಯುವುದಕ್ಕಿಂತ ಮೊದಲು ಅತ್ಯವಶ್ಯವೆಂದು ನಾನು ಯಾವಾಗಲೂ ಹೇಳುತ್ತಿದ್ದೇನೆ. ಈ ನಿರ್ಣಯಕ್ಕೆ ನಾನು ಇಂದು ಬಂದು ಮುಟ್ಟಿಲ್ಲ. ನಾನು ಸ್ವರಾಜ್ಯದ ಬಗ್ಗೆ ಎಂದು ವಿಚಾರಮಾಡಲು ಪ್ರಾರಂಭಿಸಿದೆನೋ ಅಂದಿನಿಂದಲೂ ಈ ವಿಚಾರ ನನ್ನ ಮನಸ್ಸಿನಲ್ಲಿದೆ.

(ಯಂಗ್ ಇಂಡಿಯಾ, 6–8–1931)

* * *

ಅಸ್ಪೃಶ್ಯತೆಯ ಬಗೆಗೆ ಇರುವ ಕಾಂಗ್ರೆಸ್ ಠರಾವಿನ ಅರ್ಥವು ಏನಾಗಬಹುದೆಂಬುದನ್ನು ನಾನು ಸಂತೋಷದಿಂದ ಹೇಳಬಲ್ಲೆ; ಅಸ್ಪೃಶ್ಯತೆಯು ಇಲ್ಲದಾಗುವುದು ಉಳಿದವರಿಗೆ ಎಷ್ಟು ಹಕ್ಕು ಬಾಧ್ಯತೆಯು ಪ್ರಾಪ್ತವಾಗುವವೋ ಅಷ್ಟೇ "ಅಸ್ಪೃಶ್ಯ"ರಿಗೂ ದೊರಕುವವು. ಆದರೆ ಯಾರನ್ನಾದರೂ ಸ್ಪರ್ಶಿಸಬೇಕೆಂದು ಯಾವ ಬ್ರಾಹ್ಮಣನನ್ನೂ ಒತ್ತಾಯಪಡಿಸಲಾಗುವುದಿಲ್ಲ. ಅವನು ತಾನೇ ಪ್ರತ್ಯೇಕವಿದ್ದು ತನ್ನ ಸ್ವಂತ ಬಾವಿ, ದೇವಾಲಯ, ಶಾಲೆ ಮೊದಲಾದವುಗಳನ್ನು ಮಾಡಿಕೊಳ್ಳಬಹುದು; ಮತ್ತು ತನ್ನ ನೆರೆಹೊರೆಯವರಿಗೆ ತೊಂದರೆಯಾಗದಂತೆ ಅವುಗಳನ್ನು ಉಪಯೋಗಿಸಿಕೊಳ್ಳಬಹುದು. ಆದರೆ ಒಬ್ಬ ಬ್ರಾಹ್ಮಣನು ಸಾರ್ವಜನಿಕ ರಸ್ತೆ–ಬಾವಿಗಳನ್ನು ಉಪಯೋಗಿಸುವ 'ಅಸ್ಪೃಶ್ಯ'ರನ್ನು (ಈಗಿನಂತೆ) ಶಿಕ್ಷಿಸಲಾರನು. ಸ್ವರಾಜ್ಯ ದೊರೆತ ನಂತರ, ಹಿಂದೂಗಳಿಗಾಗಿ ಮುಕ್ತವಿರುವ ಸಾರ್ವಜನಿಕ ದೇವಾಲಯಗಳು "ಅಸ್ಪೃಶ್ಯ"ರಿಗೂ ಮುಕ್ತವಾಗುವುವು. ಆಗ ವೇದ ಮತ್ತು ಇತರ ಶಾಸ್ತ್ರಗಳ ಆಧಾರವನ್ನು ಮನ್ನಿಸಲಾಗುವುದು; ಆದರೆ ಅವುಗಳ ಅರ್ಥವಿವರಣೆಯು ಕೇವಲ ವ್ಯಕ್ತಿಗಳ ಕೈಯಲ್ಲಿ ಉಳಿಯುವದಿಲ್ಲ. ಧರ್ಮ ಅಥವಾ ರೂಢಿಯ ಹೆಸರಿನಲ್ಲಿ ಯಾವುದೇ ವ್ಯಕ್ತಿಯಾಗಲಿ ಅಥವಾ ವರ್ಗವಾಗಲಿ ಇತರರಿಗಿಂತ ಶ್ರೇಷ್ಠನೆಂದು ಭಾವಿಸುವುದು ಕಾಯದೆಗೆ ವಿರುದ್ಧವಾಗುವುದು. ಆದರೆ ಇದೆಲ್ಲ ನನ್ನ ಕನಸು. ಕಾಂಗ್ರೆಸ್ಸೆಂದರೆ ಕೇವಲ ನಾನು ಮಾತ್ರವಲ್ಲ. ಕಾಂಗ್ರೆಸ್ಸು ಹೀಗೆಲ್ಲ ಮಾಡಬಾರದು ಎಂಬ ಅಭಿಪ್ರಾಯವುಳ್ಳವರು ಈಗಲೇ ತ್ವರೆಮಾಡಿ ಕಾಂಗ್ರೆಸನ್ನು ತಾನು ಸೇರುವುದಲ್ಲದೆ ತಮ್ಮಂತೆಯೇ ಅಭಿಪ್ರಾಯವುಳ್ಳವರು ಸೇರುವಂತೆ ಮಾಡಬೇಕು. ಕಾಂಗ್ರೆಸ್ಸು ಜನಸಾಮಾನ್ಯರ ಅಭಿಮತವನ್ನು ಪ್ರತಿನಿಧೀಕರಿಸುವಷ್ಟು ವಿಶಾಲವಾಗಿದೆ.

(ಯಂಗ್ ಇಂಡಿಯಾ, 11–6–1931)

"ಅಸ್ಪೃಶ್ಯ"ರಿಗೆ ಈಗ ಕರೆಯುವ 'ಅಂತ್ಯಜ' ಎಂಬ ಹೆಸರಿನ ಬದಲಾಗಿ ಅವರನ್ನು "ಹರಿಜನ" ಎಂದು ಕರೆದರೆ ಯೋಗ್ಯವಲ್ಲವೆ? ಎಂದು ನನ್ನ ಮಿತ್ರನೊಬ್ಬನು ಮೊನ್ನೆ ಸೂಚಿಸಿದನು. ಪ್ರಸಿದ್ಧ ಸಾಧುವಾದ ನರಸಿಂಹ ಮೆಹತಾ ಈ ಶಬ್ದವನ್ನು ಉಪಯೋಗಿಸಿದ್ದಾನೆ. ಈ ಸಾಧುವು ಸ್ವತಃ ನಗರ ಬ್ರಾಹ್ಮಣ ಜಾತಿಯವನಾದರೂ "ಅಸ್ಪೃಶ್ಯ"ರನ್ನು ತನ್ನ ಬಂಧುಗಳೆಂದು ಸ್ವೀಕರಿಸಿದನು. ಇದರ ಬಗ್ಗೆ ಈತನು ತನ್ನ ಇಡಿಯ ಸಮಾಜದ ರೋಷವನ್ನು ಎದುರಿಸಿದನು. ಇಂಥ ಮಹಾಪುರುಷನು ಉಪಯೋಗಿಸಿ ಪಾವನಗೊಳಿಸಿದ ಈ ಶಬ್ದವನ್ನು ನಾನು ಸಂತೋಷದಿಂದ ಸ್ವೀಕರಿಸುತ್ತೇನೆ. ಆದರೆ ನೀವು ಭಾವಿಸುವುದಕ್ಕಿಂತ ಹೆಚ್ಚಿನ ಅರ್ಥ ನಾನು ಈ ಶಬ್ದದಲ್ಲಿ ಕಾಣುತ್ತೇನೆ. ನನ್ನ ದೃಷ್ಟಿಯಲ್ಲಿ "ಅಸ್ಪೃಶ್ಯ"ನು ನಿಜವಾಗಿಯೂ "ಹರಿಜನ"–ಎಂದರೆ ದೇವನಿಗೆ ಪ್ರಿಯನು; ನಾವು "ದುರ್ಜನ"ರು. ಏಕೆಂದರೆ ನಾವು ಸ್ವಚ್ಛವಾಗಿಯೂ ಬಾಳಬೇಕೆಂದು "ಅಸ್ಪೃಶ್ಯ"ನು ಕಷ್ಟಪಟ್ಟಿದ್ದಾನೆ, ತನ್ನ ಕೈಗಳನ್ನು ಹೊಲಸು ಮಾಡಿಕೊಂಡಿದ್ದಾನೆ. ಆದರೆ ನಾವು ಅಂಥವನನ್ನು ಹತ್ತಿಕ್ಕುವುದರಲ್ಲಿ ಸಂತೋಷ ಹೊಂದುತ್ತೇವೆ. ಈ "ಅಸ್ಪೃಶ್ಯ"ರಲ್ಲಿ ದೌರ್ಬಲ್ಯ–ದೋಷಗಳೇನಾದರೂ ಇದ್ದರೆ ಅವುಗಳಿಗೆ ಕೇವಲ ನಾವೇ ಕಾರಣರು. ನಾವೂ "ಹರಿಜನ"ರಾಗುವುದು ಸಾಧ್ಯಎದೆ. ಆದರೆ "ಅಸ್ಪೃಶ್ಯ"ರಿಗೆ ಗೈದಿರುವ ಅನ್ಯಾಯಕ್ಕೆ ತಕ್ಕ ಪಶ್ಚಾತ್ತಾಪಪಟ್ಟಾಗ ಮಾತ್ರ ನಾವು ನಿಜವಾದ "ಹರಿಜನ"ರಾಗಬಲ್ಲೆವು.

(ಯಂಗ್ ಇಂಡಿಯಾ, 6–1–1931)

* * *

ಹಿಂದೂಧರ್ಮ ಹಾಗೂ ಅಸ್ಪೃಶ್ಯತೆ

ನಾನು ಹಿಂದೂ ಧರ್ಮದಲ್ಲಿ ನಿಷ್ಠೆಯುಳ್ಳವನಾದ್ದರಿಂದ ಅಸ್ಪೃಶ್ಯತೆಯನ್ನು ಕಂಡು ನನಗೆ ಅತಿಶಯ ವ್ಯಥೆಯಾಗುತ್ತದೆ. ನಾವು ಹಿಂದೂ ಶಾಸ್ತ್ರಗಳೆಂದು ಕರೆಯುವ ಗ್ರಂಥಗಳಲ್ಲಿ ನಾವು ಇಂದು ಆಚರಿಸುವಂಥ ಅಸ್ಪೃಶ್ಯತೆಯ ಅಸ್ತಿತ್ವಕ್ಕೆ ಒಂದು ಆಧಾರವನ್ನು ಕೂಡ ಪಡೆಯಲು ನಾನು ಸಮರ್ಥನಾಗಿಲ್ಲ. ಆದರೆ, ನಾನು ಬೇರೆ ಕಡೆಗಳಲ್ಲಿ ಪುನಃ ಪುನಃ ಹೇಳಿದಂತೆ, ಒಂದು ವೇಳೆ ಹಿಂದೂ ಧರ್ಮದಲ್ಲಿ ಅಸ್ಪೃಶ್ಯತೆಯ ಅಸ್ತಿತ್ವಕ್ಕೆ ನಿಜವಾಗಿಯೂ ಆಧಾರವಿದ್ದುದು ನನಗೆ ಕಂಡುಬಂದರೆ, ನಾನು ಹಿಂದೂಧರ್ಮವನ್ನೇ ತ್ಯಜಿಸಲು ಹಿಂದುಮುಂದೆ ನೋಡುವುದಿಲ್ಲ. ಏಕೆಂದರೆ, ಯಾವುದೇ ಧರ್ಮವು, ತನ್ನ ಹೆಸರಿಗೆ ತಕ್ಕ ಯೋಗ್ಯತೆಯುಳ್ಳುದು ಆಗಬೇಕಾದರೆ, ನೀತಿ–ನ್ಯಾಯಗಳ ಮೂಲತತ್ತ್ವಗಳಿಗೆ ವಿಸಂಗತವಿರಕೂಡದು. ಆದರೆ ಹಿಂದೂ ಧರ್ಮದಲ್ಲಿ ಅಸ್ಪೃಶ್ಯತೆಗೆ ಸ್ಥಾನವೇ ಇಲ್ಲವೆಂದು ನಾನು ನಂಬಿರುವುದರಿಂದ ಹಿಂದೂ ಧರ್ಮಕ್ಕೆ ಅಂಟಿಕೊಂಡಿದ್ದೇನೆ; ಮತ್ತು ಈ ಮಹದನ್ಯಾಯವನ್ನು ಕಂಡು ದಿನಾಲು ನನ್ನ ಮನಸ್ಸು ಅತಿಶಯ ವ್ಯಥಿತವಾಗುತ್ತಲಿದೆ.

(ಯಂಗ್ ಇಂಡಿಯಾ, 20–10–1927)

* * *

ಒಮ್ಮೆ ಒಬ್ಬ ವಿಚಾರವಂತ ಮುಸಲ್ಮಾನನು ನನಗೆ ಹೀಗೆ ಹೇಳಿದನು: ಹಿಂದೂಧರ್ಮದಲ್ಲಿ ಅಸ್ಪೃಶ್ಯತೆ ಇರುವವರೆಗೆ ಮುಸಲ್ಮಾನರು "ಹಿಂದೂ ಧರ್ಮ ಮತ್ತು ಅದರ ಅನುಯಾಯಿಗಳನ್ನು ಹೇಗೆ ಗೌರವಿಸುವರು?" ಶಾಸ್ತ್ರಗಳು "ಅಸ್ಪೃಶ್ಯ" ಸಮಾಜವೆಂಬುದನ್ನು ಅರಿಯವು ಎಂದು ನಾನು ಅಸಂಖ್ಯ ಸಲ ಹೇಳಿದ್ದೇನೆ. ಭಂಗೀ ಜನರನ್ನು "ಅಸ್ಪೃಶ್ಯ"ರೆಂದು ವರ್ಗೀಕರಿಸಿಲ್ಲ. ನನ್ನ ತಾಯಿಯೇ ನಾನು ಕೂಸಿದ್ದಾಗ ನನ್ನನ್ನು ಸ್ವಚ್ಛಗೊಳಿಸಿ ಭಂಗಿಯಾಗಿರಲಿಲ್ಲವೆ? ಆದರೆ ಆ ಕಾರಣದಿಂದ ಅವಳು ಅಸ್ಪೃಶ್ಯಳಾಗಲಿಲ್ಲ. ಅಂದ ಬಳಿಕ, ಇಂಥವೇ ಅವಶ್ಯಕ ಸೇವೆಯನ್ನು ಮಾಡುವ ಭಂಗಿಯು

ಅಸ್ಪೃಶ್ಯನೆಂದು ಏಕೆ ತಿಳಿಯಲ್ಪಡಬೇಕು? ಶಾಸ್ತ್ರಿಗಳ ಸಮುದಾಯವೆಲ್ಲ ನನ್ನನ್ನು ವಿರೋಧಿಸಿದರೂ ನಾನು ಮಾತ್ರ "ಅಸ್ಪೃಶ್ಯತೆಯು ಹಿಂದೂ ಧರ್ಮದ ಅಂಗವೆಂದು ನೀವು ತಿಳಿಯುವುದು ತಪ್ಪು"–ಎಂದು ಉದ್ಘೋಷಿಸುವೆ.

(ಯಂಗ್ ಇಂಡಿಯಾ, 26–2–1925)

* * *

ಯಾವುದೇ ಒಬ್ಬ ಮಾನವಜೀವಿಯನ್ನು ಅಸ್ಪೃಶ್ಯನೆಂದು ನಡೆಯಿಸಿಕೊಳ್ಳಲು ಹಿಂದೂ ಧರ್ಮದಲ್ಲಿ ಮನ್ನಣೆಯಿಲ್ಲವೆಂದು ನಾನು ನಿಮಗೆ ಭರವಸೆ ಕೊಡುವೆ. ತನ್ನ ಧರ್ಮವನ್ನು ಅರಿತಿದ್ದ ಮತ್ತು ಅದರಂತೆ ಆಚರಿಸುತ್ತಿದ್ದ ಒಬ್ಬ ಬ್ರಾಹ್ಮಣನ ದೃಷ್ಟಿಯಲ್ಲಿ ಒಬ್ಬ ಶೂದ್ರನೂ ತಾನೂ ಸಮಾನರು. ಒಬ್ಬ ಚಾಂಡಾಲನು ಬ್ರಾಹ್ಮಣನಿಗಿಂತ ಯಾವುದೇ ದೃಷ್ಟಿಯಲ್ಲಿ ಕಡಿಮೆಯವನು ಎಂದು ಭಗವದ್ಗೀತೆಯು ಎಲ್ಲಿಯೂ ಬೋಧಿಸಿಲ್ಲ. ಒಬ್ಬ ಬ್ರಾಹ್ಮಣನು ಗರ್ವಿಷ್ಠನಾಗಿ ತಾನೊಬ್ಬ ಶ್ರೇಷ್ಠ ವ್ಯಕ್ತಿ ಎಂದು ತಿಳಿದುಕೊಂಡಾಕ್ಷಣವೇ ತನ್ನ ಬ್ರಾಹ್ಮಣ್ಯವನ್ನೇ ಕಳೆದುಕೊಳ್ಳುತ್ತಾನೆ. ಸರ್ವರ ಉನ್ನತಿಗಾಗಿ ತಮ್ಮ ಸರ್ವಸ್ವವನ್ನೂ ಸ್ವಯಂಪ್ರೇರಣೆಯಿಂದ ತ್ಯಾಗ ಮಾಡಿದ ಬ್ರಾಹ್ಮಣರಿಗೆ ಭಾರತವು ಚಿರಋಣಿಯಾಗಿದೆ. ಪರಮಾತ್ಮನನ್ನು ಕಿಂಕರರ ಕಿಂಕರನೆಂದೂ, ಪತಿತಪಾವನನೆಂದೂ ಕರೆದವರು ಬ್ರಾಹ್ಮಣರು. ಒಬ್ಬ ವೇಶ್ಯೆ ಅಥವಾ ಚಾಂಡಾಲನು ತನ್ನ ಹೃದಯ ಶುದ್ಧಿಯಿಂದ ಮೋಕ್ಷವನ್ನು ಪಡೆಯಬಲ್ಲನೆಂದು ಬೋಧಿಸಿದವರು ಬ್ರಾಹ್ಮಣರು.

ಆದರೆ ಮಾವನಕುಲದ ದುರ್ದೈವದಿಂದ ಮಾನವನ ದೌರ್ಬಲ್ಯಗಳಿಗೆ ಬ್ರಾಹ್ಮಣರು ಹೊರತಾಗಿಲ್ಲ. ಉಳಿದವರಂತೆ ಇವರೂ ಮಾನವಕುಲಕ್ಕೆ ಜ್ಞಾನದಾನವನ್ನು ಮಾಡುವ ಮತ್ತು ಸರಿಯಾದ ಮಾರ್ಗದರ್ಶನ ಮಾಡುವ ತಮ್ಮ ಕರ್ತವ್ಯವನ್ನು ಅಲಕ್ಷಿಸಿದ್ದಾರೆ. ಇಂಗ್ಲಿಷರು ಅಹಂಕಾರಿಗಳು ಎಂದು ಸುಲಭವಾಗಿ ನಾವು ಹೇಳಿಬಿಡುತ್ತೇವೆ. ಆದರೆ ಅವರ ಮೇಲೆ ಕಲ್ಲು ಎಸೆಯುವುದಕ್ಕಿಂತ ಮೊದಲು ನಮ್ಮ ನಡತೆಯನ್ನು ತಿದ್ದಿಕೊಳ್ಳೋಣ.

(ಯಂಗ್ ಇಂಡಿಯಾ, 11–5–1921)

* * *

"ಒಬ್ಬ ವ್ಯಕ್ತಿಯ ಕರ್ಮವೇ ಅವನ ಸ್ಥಿತಿಗೆ ಕಾರಣ" ಎಂದು ಕೆಲವರು ಹೇಳುತ್ತಾರೆ. ಆದರೆ ಒಬ್ಬ ಪಾಪಿಯೆಡೆಗೆ ಕಲ್ಲೆಸೆಯಬೇಕೆಂದು ನನ್ನ ಕರ್ಮದ ಕಲ್ಪನೆಯು ನನ್ನನ್ನು ಒತ್ತಾಯಪಡಿಸುವುದಿಲ್ಲ. ಮಾನವನನ್ನು ಉದ್ಧರಿಸಲು ಧರ್ಮವು ನಿರ್ಮಿತವಾಗಿದೆ, ಆದರೆ ಅವನ ಕರ್ಮದ ಭಾರದಿಂದ ಅವನನ್ನು ಕೆಳಗೆ ತುಳಿಯುವುದಕ್ಕಲ್ಲ. ಕೀಳು ಕುಲದಲ್ಲಿ ಜನಿಸಿದವನೆಂದು ಒಬ್ಬನನ್ನು ನರಕದಲ್ಲಿಡುವುದು ಕರ್ಮದಂಥ ಮಹಾತತ್ತ್ವಕ್ಕೆ ನಾವು ಮಾಡಿದ ಅನ್ಯಾಯವೇ ಸರಿ. ಒಬ್ಬ ಮೀನುಗಾರನಿಂದ ಗೌರವಿಸಲ್ಪಟ್ಟ ಶ್ರೀರಾಮನು ಅದನ್ನು ತನ್ನ ಭಾಗ್ಯವೆಂದು ತಿಳಿದನು. ದುರ್ದೈವಿ ಬಾಂಧವರನ್ನು ಅವರ ದುಃಖದಿಂದ ಮುಕ್ತಗೊಳಿಸಿದ ಅನೇಕ ಮಹಾಪುರುಷರ ಉದಾಹರಣೆಗಳಿಂದ ಹಿಂದೂ ಧರ್ಮವು ತುಂಬಿದೆ. ಇಂದಿನ ಹಿಂದೂಗಳಾದರೂ, ತಮ್ಮ ಮಹಾಪುರುಷರನ್ನು ಅನುಸರಿಸಿ, ಹಿಂದೂ ಧರ್ಮವನ್ನು ಹೀಗೆ ಅಪವಿತ್ರಗೊಳಿಸುತ್ತಿರುವ ಅಸ್ಪೃಶ್ಯತೆಯ ಕಲಂಕವನ್ನು ಏಕೆ ನಿವಾರಿಸಬಾರದು?

(ಯಂಗ್ ಇಂಡಿಯಾ, 22-9-1921)

* * *

ಸಮಾಜದ ಎಲ್ಲ ವರ್ಗಗಳನ್ನು ಅಳಿಸುವುದು ಸಾಧ್ಯವೆಂದು ನಾನು ನಂಬಿರುವುದಿಲ್ಲ. ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಬೋಧಿಸಿದ ಸಮಾನತೆಯ ತತ್ವದಲ್ಲಿ ನನಗೆ ನಂಬಿಗೆಯಿದೆ. ಚತುರ್ವರ್ಣಗಳ ಸದಸ್ಯರನ್ನು ಸಮಾನರೆಂದು ಕಾಣಬೇಕು ಎಂದು ಗೀತೆಯು ನಮಗೆ ಬೋಧಿಸುತ್ತದೆ. ಬ್ರಾಹ್ಮಣನಿಗೂ ಮತ್ತು ಭಂಗಿಯವನಿಗೂ ಅದೇ ಧರ್ಮವನ್ನು ಗೀತೆಯು ವಿಧಿಸಿರುವುದಿಲ್ಲ. ಆದರೆ ಅವರೀರ್ವರೂ ಸಮಾನ ಗೌರವಕ್ಕೆ ಅರ್ಹರೆಂದು ಅದು ಬೋಧಿಸಿರುತ್ತದೆ. ಆದ್ದರಿಂದ "ಅಸ್ಪೃಶ್ಯ"ರಿಗೆ ತಾವು ತಿರಸ್ಕರಿಸಲ್ಪಟ್ಟದ್ದೇವೆಂದೂ, ಕಡೆಗಣಿಸಲ್ಪಟ್ಟದ್ದೇವೆಂದೂ ಭಾವನೆ ಬಾರದ ಹಾಗೆ ನೋಡಿಕೊಳ್ಳುವುದು ನಮ್ಮ ಕರ್ತವ್ಯವಾಗಿದೆ. ಅವರ ಉದರನಿರ್ವಹಣೆಗಾಗಿ ನಾವು ಉಂಡು ಚೆಲ್ಲಿದ ಎಂಜಲನ್ನು ಹಾಕದಿರೋಣ. ಅದೇ ದೇವರನ್ನು ಪೂಜಿಸುವ ಮತ್ತು ದೇಹ-ಆತ್ಮಗಳನ್ನು ಶುದ್ಧವಾಗಿ ಇಟ್ಟುಕೊಂಡಿರುವ ಒಬ್ಬ ಬ್ರಾಹ್ಮಣ ಮತ್ತು ಒಬ್ಬ ಭಂಗಿಯವರಲ್ಲಿ ನಾನೆಂತು ಭೇದ-ಭಾವವನ್ನು ಮಾಡಲಿ? ಒಬ್ಬ ಭಂಗಿಯವನಿಗೆ ನಾನು ಎಂಜಲನ್ನು ಹಾಕಿದರೆ ಅಥವಾ ಅವನಿಗೆ

ಏನಾದರೂ ಅವಶ್ಯವಿದ್ದು ಸಹಾಯ ನಾನು ಮಾಡದಿದ್ದರೆ ನಾನು ಪಾಪ ಮಾಡಿದೆನೆಂದು ಭಾವಿಸುತ್ತೇನೆ. ಈ ವಿಷಯದಲ್ಲಿಯ ನನ್ನ ನಿಲುಮೆಯನ್ನು ಸ್ಪಷ್ಟಗೊಳಿಸುವೆ.

ಇಂದು ಆಚರಣೆಯಲ್ಲಿರುವ ಅಸ್ಪೃಶ್ಯತೆಗೆ ಹಿಂದೂ ಧರ್ಮದಲ್ಲಿ ಸ್ಥಾನವಿಲ್ಲವೆಂಬುದು ನಿಜವಾದರೂ, ಒಂದು ಮರ್ಯಾದಿತವಾದ ರೀತಿಯಲ್ಲಿ ಮತ್ತು ಕೆಲ ವಿಶಿಷ್ಟ ಪ್ರಸಂಗಗಳಲ್ಲಿ "ಅಸ್ಪೃಶ್ಯತೆ"ಯನ್ನು ಹಿಂದೂ ಧರ್ಮವು ಪರಿಗಣಿಸಿದೆ. ಉದಾಹರಣೆಗೆ, ನನ್ನ ತಾಯಿಯು ಏನಾದರೂ ಹೊಲಸು ಪದಾರ್ಥಗಳನ್ನು ಮುಟ್ಟಿದರೆ ಆ ವೇಳೆಗೆ ಅವಳು ಅಸ್ಪೃಶ್ಯಳಾಗುತ್ತಾಳೆ ಮತ್ತು ಸ್ನಾನ ಮಾಡಿದ ನಂತರ ಮತ್ತೆ ಶುದ್ಧಳಾಗುತ್ತಾಳೆ. ವೈಷ್ಣವನಾದ ನಾನು ಒಬ್ಬ ವ್ಯಕ್ತಿಯು ತನ್ನ ಜನ್ಮದ ಕಾರಣದಿಂದ ಅಸ್ಪೃಶ್ಯನೆಂದು ಪರಿಗಣಿಸಲ್ಪಡಬೇಕೆಂಬುದನ್ನು ಒಪ್ಪುವುದಿಲ್ಲ. ತಾತ್ಕಾಲಿಕವಾದ ಅಸ್ಪೃಶ್ಯತೆಯು ಅದರ ಹೆಸರಿಗೆ ತಕ್ಕಂತೆ–ಸುಲಭವಾಗಿ ನಿವಾರಿಸಬಹುದಾದದ್ದೂ ಮತ್ತು ಯಾವುದಾದರೊಂದು ಅಶುದ್ಧ, ಕೆಲಸಕ್ಕೆ ಸಂಬಂಧಿಸಿದ್ದೂ ಆಗಿರುತ್ತದೆ. ಅಷ್ಟೆ ಅಲ್ಲದೆ, ನಾವು ಕೂಸಿದ್ದಾಗ ನಮ್ಮನ್ನು ಸ್ವಚ್ಛಗೊಳಿಸುವ ಕೆಲಸ ಮಾಡಿದ ತಾಯಿಯನ್ನು ನಾವು ಹೇಗೆ ಗೌರವಿಸುವೆವೋ ಮತ್ತು ಅವಳೆಷ್ಟು ಹೆಚ್ಚು ಕೆಲಸ ಮಾಡುವಳೋ ಅಷ್ಟು ಅವಳ ಬಗ್ಗೆ ನಮ್ಮ ಗೌರವ ಹೆಚ್ಚುವಂತೆ, ಸಮಾಜಕ್ಕೆ ಸ್ವಚ್ಛತೆಯ ಸೇವೆಯನ್ನು ಸಲ್ಲಿಸುವ ಭಂಗೀ ಜನರು ನಾವು ಹೆಚ್ಚಾಗಿ ಗೌರವಿಸುವುದಕ್ಕೆ ಅರ್ಹರಾಗಿದ್ದಾರೆ.

(ಯಂಗ್ ಇಂಡಿಯಾ, 22–1–1925)

* * *

ಹಿಂದೂ ಧರ್ಮವು ಗಂಗಾನದಿಯಂತೆ ಮೂಲದಲ್ಲಿ ಪವಿತ್ರವೂ, ಅಕಲುಷಿತವೂ ಆಗಿದ್ದು ಮಾರ್ಗದಲ್ಲಿಯ ಅಶುದ್ಧತೆಯನ್ನು ತೆಗೆದುಕೊಳ್ಳುತ್ತ ಮುಂದೆ ಸಾಗಿದೆ. ಗಂಗೆಯಂತೆ ಒಟ್ಟು ಪರಿಣಾಮದಲ್ಲಿ ಅದು ಹಿತಕಾರಿಯಾಗಿದೆ. ಅದು ಪ್ರತಿ ಪ್ರಾಂತದಲ್ಲಿ ಒಂದು ಪ್ರಾಂತೀಯ ಸ್ವರೂಪವನ್ನು ಧರಿಸುತ್ತದೆ, ಆದರೆ ಅದರ ಅಂತಃಸತ್ವವು ಎಲ್ಲ ಕಡೆಗೂ ಒಂದೇ ಆಗಿದೆ. ರೂಢಿಯು ಧರ್ಮವಲ್ಲ. ರೂಢಿಯು ಬದಲಾಗಬಹುದು, ಆದರೆ ಧರ್ಮವೆಂದೂ ಬದಲಾಗದು.

ಒಂದು ಕಾಲಕ್ಕೆ ಯೋಗ್ಯವೆನಿಸಿದ ಒಂದು ರೂಢಿಯ ಅಂಧಾನುಕರಣವನ್ನು ನಾವು ಇನ್ನೊಂದು ಕಾಲದಲ್ಲಿ ಮಾಡಿದರೆ ಯೋಗ್ಯವಾದೀತೆ? ಒಂದು ಕಾಲಕ್ಕೆ ಪಶುಬಲಿ ಕೊಡುವುದು, ಗೋಮಾಂಸಭಕ್ಷಣ, ಕಳ್ಳರ ಕೈಕಾಲುಗಳನ್ನು ಕತ್ತರಿಸುವುದು, ಬಾಲ್ಯವಿವಾಹ ಮೊದಲಾದವು ರೂಢಿಯಲ್ಲಿದ್ದವು. ಇಂದು ಅಂಥ ರೂಢಿಗಳ ಪುನರುಜ್ಜೀವನವನ್ನು ನಾವು ಮಾಡಬಹುದೆ? ಹಾಗೆಯೇ, ಮಾನವಜನಾಂಗದ ಒಂದು ಭಾಗವನ್ನು ಹಿಂದೊಮ್ಮೆ ಪರಿತ್ಯಾಗ ಮಾಡಿದ್ದೆವು ಎಂಬ ಕಾರಣದಿಂದ ಅವರ ವಂಶಜರನ್ನು ಇಂದು ನಾವು ಜಾತಿಬಾಹಿರವೆಂದು ತಿರಸ್ಕರಿಸಬಹುದೆ?

(ಯಂಗ್ ಇಂಡಿಯಾ, 8–4–1926)

* * *

"ಯಂಗ್ ಇಂಡಿಯಾ" ಪತ್ರಿಕೆಯ ಸಂಪಾದಕರಿಗೆ–

ಮಾನ್ಯರೇ,

ಶ್ರೀ ಗಾಂಧಿಯವರು ಭಾರತದ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಪ್ರಸ್ತುತವೆಂದು ಎತ್ತಿಕೊಂಡಿರುವ ಅಸ್ಪೃಶ್ಯತೆಯ ಸಮಸ್ಯೆಯು ಇದುವರೆಗಿನಕಿಂತ ಈಗ ಹೆಚ್ಚು ಹಿಂದೂಗಳ ಗಮನವನ್ನು ಸೆಳೆಯಲು ಅರ್ಹವಾಗಿದೆ. ಇದುವರೆಗೆ ಶ್ರೀ ಗಾಂಧಿಯವರು ಕೇವಲ ಮಾನವತೆಯ ದೃಷ್ಟಿಯಿಂದ ಉಚ್ಚಜಾತಿಯಿಂದ ಕರೆಯಿಸಿಕೊಳ್ಳಲ್ಪಡುವ ಜನರು ಕೆಳಗಿನ ಜಾತಿಯನ್ನು ಯೋಗ್ಯ ರೀತಿಯಿಂದ ನಡೆಯಿಸಿಕೊಳ್ಳಬೇಕೆಂದು ಹೇಳುತ್ತಿದ್ದರು. ಇದನ್ನು ಯಾವ ಹಿಂದೂವಾದರೂ ಅಯೋಗ್ಯವೆಂದು ಕರೆಯುವುದು ಸಾಧ್ಯವಿರಲಿಲ್ಲ. ಆದರೆ, ಈ ದೇಶಭಕ್ತರು ಈಗ ಕೆಳಗಿನ ಜಾತಿಯವರ ಸುಧಾರಣೆಯ ಪ್ರತಿಪಾದನೆಯಿಂದ ತೃಪ್ತರಾಗದೆ ಜನತೆಗೆ ಈ ಸಮಸ್ಯೆಯ ಧಾರ್ಮಿಕ ಸ್ವರೂಪದ ಬಗೆಗೂ ಬೋಧಿಸಲು ಪ್ರಾರಂಭಿಸಿದ್ದಾರೆ. ಕೆಲಕಾಲದ ಹಿಂದೆ ಸಂಸ್ಕೃತ ಗ್ರಂಥಗಳ ಭಾಷಾಂತರಗಳನ್ನು ತಾವು ಓದಿದ್ದರಿಂದ ತಾವೇನೂ ಹಿಂದೂ ಧರ್ಮವನ್ನು ಆಳವಾಗಿ ಅಭ್ಯಸಿಸಿಲ್ಲ ಎಂದು ಅವರು ಹೇಳಿದ್ದರು. ಆದರೆ ಅವರು ಈಗ ತಾವು ಸನಾತನಿ ಹಿಂದೂ ಎಂದೂ, ಶಾಸ್ತ್ರಗಳಲ್ಲಿ ಈ "ಅಸ್ಪೃಶ್ಯತೆ"ಗೆ ಆಧಾರವಿಲ್ಲವೆಂದೂ ತಮ್ಮ ಶ್ರೋತೃಗಳಿಗೆ

ಭರವಸೆ ಕೊಡುತ್ತಿದ್ದಾರೆ. ಶ್ರೀ ಗಾಂಧಿಯವರಂಥ ವ್ಯಕ್ತಿಗಳು ಯಾವುದೇ ವಿಧಾನವನ್ನು ಮಾಡುವಾಗ ತುಂಬ ಎಚ್ಚರಿಕೆ ವಹಿಸಬೇಕಾದುದು ಅವಶ್ಯ. ಒಂದೂ ಧರ್ಮಶಾಸ್ತ್ರದ ಪುಟಗಳನ್ನು ತಿರುವಿಹಾಕದೆ ಇಂಥ ವಿಧಾನವನ್ನು ಮಾಡುವುದು ಶೋಚನೀಯವಾದುದು. ಏಕೆಂದರೆ ಅವರು ಧರ್ಮಶಾಸ್ತ್ರಗಳನ್ನು ಅವಲೋಕಿಸಿದ್ದರೆ "ಅಸ್ಪೃಶ್ಯತೆ"ಯ ಬಗೆಗೆ ಅಸಂಖ್ಯ ಆಧಾರಗಳು ಅವರಿಗೆ ದೊರೆಯುತ್ತಿದ್ದವು. "ಕೆಳಗಿನ ಜಾತಿಯವರಿಗೆ ಲೌಕಿಕ ಜೀವನದ ಅನುಕೂಲತೆಗಳನ್ನು ಒದಗಿಸಿಕೊಡುವುದು ಮತ್ತು ಉಚ್ಚಜಾತಿಯವರು ತಾವು ಶ್ರೇಷ್ಠರು ಎಂಬ ಅಹಂಕಾರವನ್ನು ತ್ಯಜಿಸುವುದು" ಎಂಬ ವಿಷಯಗಳ ಮಟ್ಟಿಗೆ ಶಾಸ್ತ್ರಗಳಲ್ಲಿ ಇನ್ನೂ ವಿಶ್ವಾಸವಿರುವ ಹಿಂದೂಜನರು ಶ್ರೀ ಗಾಂಧಿಯವರಿಗೆ ಸಹಕಾರವನ್ನು ಸಂತೋಷದಿಂದ ನೀಡುತ್ತಾರೆ. ಆದರೆ ಅವರು ಪ್ರಾಚೀನ ಮನು, ಯಾಜ್ಞವಲ್ಕ್ಯ, ಪರಾಶರ ಮೊದಲಾದವರಿಗಿಂತ ಶ್ರೀ ಗಾಂಧಿಯವರು ಹಿಂದೂ ಧರ್ಮದ ಹೆಚ್ಚಿನ ಅಧಿಕಾರಿಗಳೆಂದು ಒಪ್ಪುವುದು ಅಸಾಧ್ಯವಾದ ಮಾತು. ಇಲ್ಲಿ ಶಾಸ್ತ್ರಗಳಿಂದ ಕೆಲವು ಉದ್ಧೃತಿಗಳನ್ನು ಮಾತ್ರ ಕೊಡುವೆ:-

"ಯಾವನಾದರೊಬ್ಬನು ಒಬ್ಬ ಚಾಂಡಾಲ, ರಜಸ್ವಲೆಯಾದ ಸ್ತ್ರೀ, ಜಾತಿಬಾಹಿರ ಶವ ಅಥವಾ ಅದನ್ನು ಮುಟ್ಟಿದ ವ್ಯಕ್ತಿ–ಇವರನ್ನು ಮುಟ್ಟಿದರೆ ಸ್ನಾನಮಾಡಿ ಶುದ್ಧನಾಗಬೇಕು."

–ಮನು 5–85 ಮತ್ತು ಗೌತಮ ಧರ್ಮಶಾಸ್ತ್ರ 14–29

"ಒಬ್ಬ ಚಾಂಡಾಲನನ್ನು ಮತ್ತು ಜಾತಿಬಾಹಿರನನ್ನು ದೂರವಿರಿಸಬೇಕು. ಅಂಥ ಅಂತರವು ಆಕಳ ಬಾಲದಷ್ಟು ದೀರ್ಘವಿರದಿದ್ದರೆ ಸಚೇಲಸ್ನಾನ ಮಾಡಬೇಕು".

–ವ್ಯಾಘ್ರಪಾದ

"ಒಬ್ಬ ಜಾತಿಬಾಹಿರ, ರಜಸ್ವಲೆಯಾದ ಸ್ತ್ರೀ, ಬಾಣಂತಿ, ಮತ್ತು ಒಬ್ಬ ಚಂಡಾಲ, –ಇವರನ್ನು ಅನುಕ್ರಮವಾಗಿ ಒಂದು ನೊಗ, ಎರಡು ನೊಗ, ಮೂರು ನೊಗ ಮತ್ತು ನಾಲ್ಕು ನೊಗಗಳಷ್ಟು ದೂರವಿರಿಸಬೇಕು".

–ಬೃಹಸ್ಪತಿ

"ಚಾಂಡಾಲನನ್ನು ಮುಟ್ಟಿದರೆ ಸ್ನಾನಮಾಡಬೇಕು"-ಬೌಧಾಯನ ಮೇಲಿನ ಉಕ್ತಿಗಳನ್ನು ನೋಡಿದರೆ ಮತ್ತು ರಜಸ್ವಲೆಯಾದ ಸ್ತ್ರೀಯನ್ನು ಇದರಲ್ಲಿ ಉಲ್ಲೇಖಿಸಿದ್ದನ್ನು ಗಮನಿಸಿದರೆ, ಶಾಸ್ತ್ರಗಳು ಈ ನಿಯಮಗಳನ್ನು ವಿಧಿಸುವಾಗ ವೈಯಕ್ತಿಕ ಅಹಂಕಾರ ಅಥವಾ ಶ್ರೇಷ್ಠತೆಯನ್ನು ಗಮನಿಸಿರಲಿಲ್ಲ. ಆದರೆ ಆಧ್ಯಾತ್ಮಿಕ ಶುದ್ಧಿಯನ್ನು ಮಾತ್ರ ಆಧಾರವಾಗಿಟ್ಟುಕೊಂಡಿದ್ದವು ಎಂಬುದು ಸ್ಪಷ್ಟವಾಗುತ್ತದೆ. ಶಾಸ್ತ್ರಗಳು ಹಿಂದೂಗಳ ಆಚರಣೆಯನ್ನು ನಿಯಂತ್ರಿಸುವ ಅಧ್ಯಾತ್ಮಿಕ ಗುರುಗಳಾಗಿರುವವರೆಗೆ ಅಸ್ಪೃಶ್ಯತೆಯು ಧಾರ್ಮಿಕ ಪ್ರಶ್ನೆಯಲ್ಲ. ಅದು ಸಾಮಾಜಿಕ ಪ್ರಶ್ನೆ ಎಂದು ಹೇಳುವುದು ಕೇವಲ ಅಜ್ಞಾನವೇ ಸರಿ. ಶ್ರೀ ಗಾಂಧಿಯವರು ಶಾಸ್ತ್ರಗಳಲ್ಲಿ ಏನು ಹೇಳಿದೆ ಮತ್ತು ಏನು ಹೇಳಿಲ್ಲ ಎಂಬುದರ ಬಗ್ಗೆ ಘೋಷಿಸುವುದಕ್ಕಿಂತ ಮೊದಲು ಶಾಸ್ತ್ರಗಳನ್ನು ಅವಲೋಕಿಸುವ ಶ್ರಮವಹಿಸಬೇಕೆಂದು ಬಿನ್ನವಿಸುತ್ತೇನೆ."

ತಿನ್ನವೆಲ್ಲಿ. —ಆರ್. ಕೃಷ್ಣಸ್ವಾಮಿ ಅಯ್ಯರ್

"ಯಂಗ್ ಇಂಡಿಯಾ" ಪತ್ರಿಕೆಯ ಓದುಗರು ಈ ಪ್ರಶ್ನೆಯ ಇನ್ನೊಂದು ಪಕ್ಷವನ್ನು ಅರಿಯಲೆಂದು ನಾನು ಈ ಪತ್ರವನ್ನು ಸಂತೋಷದಿಂದ ಪ್ರಸಿದ್ಧಿಸುತ್ತಿದ್ದೇನೆ. ಶ್ರೀ ಅಯ್ಯರರು ಪಂಡಿತರಾದ ವಕೀಲರಿದ್ದಾರೆ ಮತ್ತು ನನ್ನ ನಿಲುಮೆಯ ಬಗೆಗೆ ಅವರಿಗೆ ಸರಿಯಾದ ಕಲ್ಪನೆ ಇರಬೇಕಾಗಿತ್ತೆಂದು ಅನಿಸುತ್ತದೆ. ಮದ್ರಾಸ ಪ್ರಾಂತದ ನನ್ನ ಎಲ್ಲ ಭಾಷಣಗಳಲ್ಲಿ ನಾನು "ಅಸ್ಪೃಶ್ಯ"ರ ವಿರುದ್ಧ ಕಂಡುಬರುವ ಕ್ರೂರ ಪೂರ್ವಗ್ರಹದ ಬಗೆಗೆ ಹೆಚ್ಚು ಮಹತ್ವ ಕೊಟ್ಟಿದ್ದೆನು. ರಜಸ್ವಲೆಯಾಗಿ ಅಥವಾ ಬೇರೆ ಕಾರಣದಿಂದ ಅಸ್ಪೃಶ್ಯರಾಗಿರುವ ನಮ್ಮ ತಾಯಿ-ಸೋದರಿಯರಂತೆ ನಾವು 'ಅಸ್ಪೃಶ್ಯ'ರಾದ ಪಂಚಮರೊಡನೆ ನಡೆದುಕೊಳ್ಳುತ್ತೇವೆಯೆ? ನಾನು ಶಾಸ್ತ್ರಗಳನ್ನು ಆಳವಾಗಿ ಅಭ್ಯಸಿಸಿದ ಪಂಡಿತನಲ್ಲವೆಂದು ಒಪ್ಪುತ್ತೇನೆ; ಅದರೆ ಹಿಂದೂ ಧರ್ಮದ ರಹಸ್ಯವನ್ನು ನಾನು ಬಲ್ಲೆನೆಂದು ಹೇಳುತ್ತೇನೆ. ನಾನು ಅತ್ಯಂತ ನಮ್ರನಾಗಿ, ಆದರೆ ನನ್ನಲ್ಲಿದ್ದ ಎಲ್ಲ ಶಕ್ತಿಯೊಂದಿಗೆ, ಹೇಳಬಯಸುತ್ತೇನೆ: ಈಗ ಇರುವ ಅಸ್ಪೃಶ್ಯತೆಯನ್ನು ಇನ್ನು ಮುಂದೆಯೂ ಮುಂದುವರಿಸುವುದು ಹಿಂದೂ ಧರ್ಮದ ದೊಡ್ಡ ಕಲಂಕ; ಸ್ಮೃತಿಗಳ ದುರುಪಯೋಗ ಮತ್ತು ಹಿಂದೂಧರ್ಮದ ತಳಹದಿಯಾದ ಪ್ರೀತಿಯ ನಿರಾಕರಣೆ. ಇಂದು

ಆಚರಣೆಯಲ್ಲಿರುವ ಅಸ್ಪೃಶ್ಯತೆಯು ಸೈತಾನನ ಕೈವಾಡವೆಂದು ಕರೆಯಲು ನಾನು ಹಿಂಜರಿಯುವುದಿಲ್ಲ. ನಮ್ಮ ದೇಶದ ಜಾತಿಬಾಹಿರರ ಸೇವೆಗಾಗಿ ಪರಮಾತ್ಮನು ಅವರಿಗೆ ಕೊಟ್ಟ ಶಕ್ತಿವಿಶೇಷವನ್ನು ಶ್ರೀ ಅಯ್ಯರರು ಉಪಯೋಗಿಸಬೇಕೆಂದು ನಾನು ವಿನಂತಿಸುತ್ತೇನೆ; ಮತ್ತು ಹಿಂದೂ ಶಾಸ್ತ್ರಗಳಲ್ಲಿ ನಾನು ಕಾಣುವ ಬಾಳಿನ ಅರ್ಥ ಅವರಿಗೂ ಕಾಣುವುದೆಂದು ನನಗೆ ವಿಶ್ವಾಸವಿದೆ.

(ಯಂಗ್ ಇಂಡಿಯಾ, 20, 27–10–1921)

ನಾನು ಶಾಸ್ತ್ರಗಳ ಶಬ್ದಕ್ಕೆ ಮಹತ್ವ ಕೊಡುವುದಿಲ್ಲ. ಆದ್ದರಿಂದ ನಾನು ಜಗತ್ತಿನ ವಿವಿಧ ಧರ್ಮಗ್ರಂಥಗಳ ಜೀವಾಳವನ್ನು ಅರಿಯಲು ಪ್ರಯತ್ನಿಸುತ್ತೇನೆ. ಈ ಗ್ರಂಥಗಳೇ ವಿಧಿಸಿದ ಸತ್ಯ ಮತ್ತು ಅಹಿಂಸೆಗಳ ಒರೆಗಲ್ಲಿನಿಂದಲೇ ಅವುಗಳನ್ನು ಅರ್ಥಮಾಡಿಕೊಳ್ಳಲು ನಾನು ಪ್ರಯತ್ನಿಸುತ್ತೇನೆ. ತತ್ತ್ವಗಳಿಗೆ ವಿಸಂಗತವಾದುದೆಲ್ಲವನ್ನೂ ನಾನು ತ್ಯಜಿಸುತ್ತೇನೆ ಮತ್ತು ಅವುಗಳಿಗೆ ಸುಸಂಗತವಾದುದೆಲ್ಲವನ್ನೂ ಸ್ವೀಕರಿಸುವೆ. ಶೂದ್ರನೊಬ್ಬನು ವೇದಗಳನ್ನು ಅಭ್ಯಸಿಸಲು ಧೈರ್ಯಮಾಡಿದ್ದಕ್ಕೆ ಶ್ರೀರಾಮಚಂದ್ರನು ಅವನನ್ನು ಶಿಕ್ಷಿಸಿದನೆಂಬ ಅಂಶವನ್ನು ನಾನು ಪ್ರಕ್ಷಿಪ್ತಭಾಗವೆಂದು ತಿಳಿಯುತ್ತೇನೆ.

(ಯಂಗ್ ಇಂಡಿಯಾ, 27–8–1925)

* * *

ನನ್ನ ದೃಷ್ಟಿಯಲ್ಲಿ ಸನಾತನ ಧರ್ಮವೆಂದರೆ ವೇದ ಮತ್ತು ಅದರ ನಂತರದ ಇತರ ಗ್ರಂಥಗಳನ್ನು ಅವಲಂಬಿಸಿದ ಮತ್ತು ಪ್ರಾಗೈತಿಹಾಸಿಕ ಕಾಲದಿಂದಲೂ ಪೀಳಿಗೆಯಿಂದ ಪೀಳಿಗೆಗೆ ಮುಂದುವರಿಸಲ್ಪಟ್ಟ ಶಕ್ತಿಯುಕ್ತವಾದ ಧರ್ಮವಾಗಿದೆ. ದೇವರು ಮತ್ತು ಹಿಂದೂ ಧರ್ಮ ಹೇಗೆ ವ್ಯಾಖ್ಯೆಯನ್ನು ಮೀರಿರುವವೊ ಹಾಗೆಯೇ ವೇದಗಳೂ ಇವೆಯೆಂದು ನನ್ನ ಭಾವನೆ. ವೇದಗಳೆಂದರೆ ಮುದ್ರಿತವಾದ ನಾಲ್ಕು ಪುಸ್ತಕಗಳೆಂದು ಹೇಳುವ ಮಾತು ಪೂರ್ಣ ಸತ್ಯವಲ್ಲ. ಈ ಗ್ರಂಥಗಳೆಂದರೆ ಪ್ರಾಚೀನ ದ್ರಷ್ಟಾರರು ಬೋಧಿಸಿದ ಉಪದೇಶಗಳ ಅವಶೇಷಗಳಾಗಿವೆ. ಮುಂದಿನ ಋಷಿಗಳು ಈ ಸಂಪತ್ತಿಗೆ ತಮ್ಮ ವಿಚಾರಗಳನ್ನೂ ಸೇರಿಸಿದರು. ಅನಂತರ ಉನ್ನತ

ವಿಚಾರಗಳುಳ್ಳ ಮಹಾನುಭಾವನಾದ ಗೀತಾಕಾರನು ಉದಯಿಸಿದನು. ಅವನು ಹಿಂದೂಗಳಿಗೆ ಹಿಂದೂಧರ್ಮದ ಸಮನ್ವಯವನ್ನು ತಿಳಿಸಿದನು. ಅದು ಆಳವಾದ ತತ್ತ್ವಜ್ಞಾನವಾಗಿರುವುದರ ಜೊತೆಗೆ ಒಬ್ಬ ಸಾಮಾನ್ಯ ವ್ಯಕ್ತಿಗೂ ಸುಲಭವಾಗಿ ತಿಳಿಯುವಂತಹದಾಗಿದೆ. ಪ್ರತಿಯೊಬ್ಬ ಹಿಂದೂವಿಗೂ ಅದು ಗ್ರಹಿಸಲು ಯೋಗ್ಯವಾದ ತೆರೆದಿಟ್ಟ ಪುಸ್ತಕವಾಗಿದೆ. ಎಲ್ಲ ಧರ್ಮಗ್ರಂಥಗಳೂ ಒಂದು ವೇಳೆ ಸುಟ್ಟು ನಾಶವಾದರೂ, ಈ ಅಮರವಾದ ಗ್ರಂಥದ ಏಳು ನೂರು ಶ್ಲೋಕಗಳು ಹಿಂದೂ ಧರ್ಮವೆಂದರೇನು ಮತ್ತು ಹೇಗೆ ಅದನ್ನು ಜೀವನದಲ್ಲಿ ಆಚರಣೆಯಲ್ಲಿ ತರಬೇಕು ಎಂಬುದನ್ನು ತಿಳಿಸಲು ಸಮರ್ಥವಾಗಿವೆ. ನಾನು ನಾಲ್ವತ್ತು ವರ್ಷಗಳಿಂದಲೂ ಗೀತೆಯ ಉಪದೇಶದಂತೆ ನಡೆಯಲು ಪ್ರಯತ್ನಿಸುತ್ತಿದ್ದುದರಿಂದಲೇ ನನ್ನನ್ನು ಸನಾತನಿ ಹಿಂದೂವೆಂದು ಕರೆದುಕೊಳ್ಳುತ್ತಿದ್ದೇನೆ.

– "ನನ್ನ ಆತ್ಮದ ವ್ಯಥೆ" (1933), 4–11–1932, ಪುಟ 6–7)

* * *

ಅತಿ ಶುದ್ಧವಾದ ಹಿಂದೂ ಧರ್ಮದ ಪ್ರಕಾರ ಒಬ್ಬ ಬ್ರಾಹ್ಮಣ, ಒಂದು ಇರುವೆ, ಒಂದು ಆನೆ, ಒಬ್ಬ ಶ್ವಪಚ–ಇವರೆಲ್ಲರೂ ಸಮಾನರು. ನಮ್ಮ ತತ್ತ್ವಜ್ಞಾನವೇ ಉನ್ನತವಾಗಿರುವುದರಿಂದ ಮತ್ತು ನಾವು ಅದರ ಪ್ರಕಾರ ಜೀವಿಸದೆ ಹೋದುದರಿಂದ ಆ ತತ್ತ್ವಜ್ಞಾನವೇ ಇಂದು ಅವನತಿಗೆ ಇಳಿದಿದೆ. ಹಿಂದೂ ಧರ್ಮವು ಎಲ್ಲ ಮಾನವರಲ್ಲಿ ಬಾಂಧ್ಯವವು ಅವಶ್ಯವಾಗಿದೆ ಎಂದು ಹೇಳುವುದಲ್ಲದೆ ಎಲ್ಲ ಪ್ರಾಣಿಗಳಲ್ಲಿಯೂ ಅದು ಅವಶ್ಯ ಎಂದು ಬೋಧಿಸುತ್ತದೆ. ನಾವು ಎಂದು ಮನುಷ್ಯ–ಮನುಷ್ಯರಲ್ಲಿ ಜೀವಂತವಾದ ಮತ್ತು ನಿಜವಾದ ಸಮಾನತೆಯನ್ನು ಉಂಟುಮಾಡುವೆವೋ ಅಂದು ಮಾನವ ಮತ್ತು ಇಡಿಯ ಸೃಷ್ಟಿಗಳಲ್ಲಿ ಸಮಾನತೆಯನ್ನು ಪ್ರಸ್ತಾಪಿಸಲು ಸಮರ್ಥರಾಗುತ್ತೇವೆ; ಆ ಸುದಿನ ಎಂದು ಉದಯವಾಗುವುದೋ ಅಂದು ಪ್ರಪಂಚದ ಶಾಂತಿ ಮತ್ತು ಮಾನವ ಕೋಟಿಯ ಕಲ್ಯಾಣ ಸಾಧಿಸಲ್ಪಡುವವು.

(ಹ. 28–3–1936)

* * *

ಅಸ್ಪೃಶ್ಯತೆ ಮತ್ತು ವರ್ಣ-ಜಾತಿಗಳು

ನಾನೆಷ್ಟೋ ಸಲ ವರ್ಣಾಶ್ರಮ ಮತ್ತು ಅಸ್ಪೃಶ್ಯತೆ ಇವುಗಳಲ್ಲಿಯ ಭೇದವನ್ನು ಸ್ಪಷ್ಟಪಡಿಸಿದ್ದೇನೆ. ನಾನು ವರ್ಣಾಶ್ರಮವನ್ನು ಬುದ್ಧಿಗೆ ಒಪ್ಪಿಗೆಯಾಗುವ ಶಾಸ್ತ್ರೀಯ ಪದ್ಧತಿಯೆಂದೂ, ಅಸ್ಪೃಶ್ಯತೆಯು ಅನವಶ್ಯಕವಾದುದು ಮಾತ್ರವಲ್ಲದೆ ಅನ್ಯಾಯದ್ದೆಂದೂ ಹೇಳುತ್ತ ಬಂದಿದ್ದೇನೆ. ವರ್ಣಾಶ್ರಮವು ಜನ್ಮವನ್ನು ಅವಲಂಬಿಸಿದ ಯೋಗ್ಯವಾದ ಶ್ರಮವಿಭಾಗವೆಂದು ನಾನು ಭಾವಿಸುತ್ತೇನೆ. ಸದ್ಯದ ಜಾತಿಯ ಬಗೆಗೆ ಇರುವ ವಿಚಾರಗಳು ಮೂಲ ತತ್ವದ ವಿಪರ್ಯಾಸಗಳಾಗಿವೆ. ಮೊದಲು ವರ್ಣ ವ್ಯವಸ್ಥೆಯು ಕೇವಲ ಕರ್ತವ್ಯದ್ದಾಗಿತ್ತು. ಅದರಲ್ಲಿ ಕೀಳು-ಮೇಲು ಎಂಬ ಭಾವನೆ ಇರಲಿಲ್ಲ. ವರ್ಣವು ಜನ್ಮವನ್ನು ಅವಲಂಬಿಸಿದೆ ಎಂದು ನಾನು ಹಿಂದೆ ಹೇಳಿದ್ದೇನೆ. ಆದರೆ, ಶೂದ್ರನೊಬ್ಬನು ತನಗೆ ಬೇಕೆಂದರೆ ವೈಶ್ಯನಾಗಬಹುದೆಂದೂ ನಾನು ಹೇಳಿದ್ದೇನೆ.

ಪಂಚಮನನ್ನು ಶೂದ್ರನೆಂದು ತಿಳಿಯಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಏಕೆಂದರೆ ಐದನೆಯ ವರ್ಣವನ್ನು ಕಲ್ಪಿಸಲು ಆಧಾರಗಳಿಲ್ಲವೆಂದು ನಾನು ನಂಬಿದ್ದೇನೆ. ಪಂಚಮನು ಶೂದ್ರನ ಕೆಲಸವನ್ನು ಮಾಡುತ್ತಾನೆ. ಆದ್ದರಿಂದ ಅವನನ್ನು ಶೂದ್ರನೆಂದೇ ವರ್ಗೀಕರಿಸಬೇಕು. ಅಸ್ಪೃಶ್ಯತೆ ಮತ್ತು ವರ್ಣಾಶ್ರಮಗಳ ನಡುವಿನ ಈ ಗೊಂದಲ ಮತ್ತು ಅದೇ ಉಸಿರಿನಲ್ಲಿ ಅವೆರಡನ್ನೂ ತಿರಸ್ಕರಿಸುವುದು-ಇವುಗಳಿಂದ ಅಸ್ಪೃಶ್ಯತಾ ನಿವಾರಣೆಯ ಕೆಲಸಕ್ಕೆ ಅಡ್ಡಿಯಾಗುತ್ತದೆ. ವರ್ಣಾಶ್ರಮದ ದುರುಪಯೋಗವನ್ನು ನಾವು ಖಂಡಿಸತಕ್ಕದ್ದು, ವರ್ಣಾಶ್ರಮವನ್ನೇ ಅಲ್ಲ.

(ಯಂಗ್ ಇಂಡಿಯಾ, 23-4-1925)

* * *

ಒಬ್ಬ ಸುದ್ದಿಗಾರನು ಬರೆಯುತ್ತಾನೆ:

"ನೀವು 'ಜನ್ಮವನ್ನು ಅವಲಂಬಿಸಿದ ಶ್ರಮವಿಭಾಗ'ವನ್ನು ಸಮಾಜ ರಚನೆಯ ಒಳ್ಳೆಯ ತತ್ವವೆಂದು ಒಪ್ಪಿದ್ದೀರಿ; ಇದರಿಂದ 'ಅಸ್ಪೃಶ್ಯ'ರು ನಮ್ಮೊಡನೆ ಯಾವಾಗಲೂ ಉಳಿಯುವರು ಎಂಬ ಮಾತು ಸ್ಪಷ್ಟವಾಗುವುದಿಲ್ಲವೆ? ಸಮಾಜದ ಕೆಲವು ಜನರು ಆನುವಂಶಿಕವಾಗಿ ಭಂಗೀ ಕೆಲಸ, ಹೆಣ ಹೊರುವುದು ಮತ್ತು ಹುಗಿಯುವುದು–ಇಂಥ ಕೆಲಸಗಳನ್ನು ಮಾಡುತ್ತ ಹೋದರೆ, ಇವರು ಬಹಳ ಅಶುದ್ಧರು ಎಂದು ಸಮಾಜದ ಉಳಿದ ಜನರು ಇವರನ್ನು ಮುಟ್ಟದೆ ಇರಬಹುದಲ್ಲವೆ? ಉಳಿದೆಲ್ಲ ದೇಶಗಳಲ್ಲಿ ಭಂಗೀಜನರು, ಮೊಚ್ಚೆಗಾರರು, ಹಜಾಮರು, ಮಡಿವಾಳರು ಮೊದಲಾದವರು ವೈಯಕ್ತಿಕವಾಗಿ ಅಥವಾ ಸಾಮೂಹಿಕವಾಗಿ ಅಸ್ಪೃಶ್ಯರೆಂದು ತಿಳಿಯಲ್ಪಡುವುದಿಲ್ಲ. ಏಕೆಂದರೆ ಅಲ್ಲಿ ಈ ಉದ್ಯೋಗಗಳು ಆನುವಂಶಿಕವಾಗಿಲ್ಲ; ಬೇಕಾದವನು ಬೇಕಾದ ಕಾಲಕ್ಕೆ ಸೈನಿಕ, ವ್ಯಾಪಾರಿ, ಶಿಕ್ಷಕ, ವಕೀಲ ಅಥವಾ ರಾಜಕಾರಣಿ ಆಗಬಹುದಾಗಿದೆ. ಆದ್ದರಿಂದ ನಮ್ಮ ದೇಶಕ್ಕೆ ವಿಶಿಷ್ಟವಾದ ಈ ಅಸ್ಪೃಶ್ಯತೆಯ ದೋಷದ ಮೂಲವು ಆನುವಂಶಿಕತೆಯ ಆಧಾರದಿಂದ ರಚಿಸಿದ ನಮ್ಮ ವಿಶಿಷ್ಟ ಸಮಾಜರಚನೆಯಲ್ಲಿದೆ ಎಂದು ನನಗನಿಸುತ್ತದೆ. ಮತ್ತು ಈ ತತ್ವಕ್ಕೆ ಅಂಟಿಕೊಂಡಿರುವತನಕ ನಾವು ಅಸ್ಪೃಶ್ಯತೆಯನ್ನು ನಿವಾರಿಸಲಾರೆವು ಎಂದೂ ನನಗನಿಸುತ್ತದೆ."

ಮೇಲಿನ ಪತ್ರವು ನೋಡುವುದಕ್ಕೆ ಸರಿ ಎಂದು ತೋರುತ್ತದೆ; ಮತ್ತು ಸುಧಾರಕರು ಎಚ್ಚರ ವಹಿಸದಿದ್ದರೆ ಈ ಸುದ್ದಿಗಾರನು ವ್ಯಕ್ತಪಡಿಸಿದಂಥ ಭಯವು ನಿಜವಾಗಿಯೇ ಪರಿಣಮಿಸಬಹುದು. ಆದರೆ ಮೇಲಿನ ಪತ್ರದಲ್ಲಿ ವಿಚಾರಗಳ ಗೊಂದಲವಾದುದು ಎದ್ದು ಕಾಣುತ್ತದೆ. ಒಬ್ಬ ಭಂಗಿ ಅಥವಾ ಮೊಚ್ಚೆಗಾರನ ಅಸ್ಪೃಶ್ಯತೆಯು ಅವರ ಜನ್ಮದಿಂದ ಬಂದುದೋ ಅಥವಾ ಅವನ ಉದ್ಯೋಗದಿಂದಲೋ? ಅದು ಅವನ ಜನ್ಮಕ್ಕೆ ಸಂಬಂಧಿಸಿದ್ದಾದರೆ ಅದು ಆರೋಗ್ಯದ ಒಂದು ಮಹತ್ವದ ನಿಯಮವಾಗುತ್ತದೆ. ಪರದೇಶಗಳಲ್ಲಿ ಇಂಥ ಕೆಲಸ ಮಾಡುವವರು ತಮ್ಮ ಕೆಲಸ ಮುಗಿದೊಡನೆಯೆ ಸ್ನಾನಮಾಡಿ, ಬಟ್ಟೆ ಬದಲಾಯಿಸಿ ಸಮಾಜದಲ್ಲಿಯ ಎಲ್ಲ ಜನರೊಡನೆ ಬೆರೆಯುತ್ತಾರೆ. ಆದ್ದರಿಂದ ನಾವು ಜನ್ಮಕ್ಕೆ ಸಂಬಂಧಿಸಿದ ಮೇಲು–ಕೀಳು ಎಂಬ

ಭಾವನೆಯನ್ನು ನಿವಾರಿಸಿದೆವೆಂದರೆ ವರ್ಣಾಶ್ರಮವು ಪರಿಶುದ್ಧವಾಗುವುದು. ಒಬ್ಬ ಭಂಗಿಯವನ ಮಕ್ಕಳು ಭಂಗಿಯವರೇ ಆಗಿ ಉಳಿಯಬಹುದು- ತಾವು ಕೀಳು ಎಂದು ತಿಳಿದುಕೊಳ್ಳದೆ ಅಥವಾ ಅನ್ಯರಿಂದ ಹಾಗೆ ತಿಳಿಯಲ್ಪಡದೆ ಮತ್ತು ಬ್ರಾಹ್ಮಣರು ಹೇಗೆ ಅಸ್ಪೃಶ್ಯರಲ್ಲವೋ ಹಾಗೆಯೇ ಇವರು ಅಸ್ಪೃಶ್ಯರಾಗುವುದಿಲ್ಲ. ಆದ್ದರಿಂದ ಅನುವಂಶಿಕತೆಯ ತತ್ತ್ವವನ್ನು ನಂಬುವುದರಲ್ಲಿ ದೋಷವಿಲ್ಲ; ಆದರೆ ಅಸಮಾನತ್ವದ ತಪ್ಪು ಕಲ್ಪನೆಯಲ್ಲಿ ದೋಷವಡಗಿದೆ.

ನನ್ನ ಅಭಿಪ್ರಾಯದಲ್ಲಿ ವರ್ಣಾಶ್ರಮವು ಸಂಕುಚಿತ ಭಾವನೆಯಿಂದ ರೂಪುಗೊಳ್ಳಲಿಲ್ಲ. ತದ್ವಿರುದ್ಧವಾಗಿ ಅದು ಕೈಯಿಂದ ಕೆಲಸ ಮಾಡುವ ಶೂದ್ರನಿಗೆ ವಿಚಾರಶೀಲನಾದ ಬ್ರಾಹ್ಮಣನ ಸಮಾನತೆಯನ್ನು ತಂದುಕೊಟ್ಟಿತು. ಅದು ಮೊದಲು ಪುಣ್ಯವನ್ನು ಗಳಿಸಲು ಮತ್ತು ಪಾಪವನ್ನು ಅಳಿಸಲು ಒಂದು ಸಾಧನವಾಗಿತ್ತು. ಅದು ಮನುಷ್ಯನ ಆಕಾಂಕ್ಷೆಯನ್ನು ಕೇವಲ ಲೌಕಿಕ ಕ್ಷೇತ್ರದಿಂದ ಬಿಡಿಸಿ ಶಾಶ್ವತವಾದ ಮತ್ತು ಆಧ್ಯಾತ್ಮಿಕವಾದ ಕ್ಷೇತ್ರಕ್ಕೆ ಒಯ್ದಿತು. ಬ್ರಾಹ್ಮಣನ ಮತ್ತು ಶೂದ್ರನ ಗುರಿ ಕೀರ್ತಿ, ಸಂಪತ್ತು, ಅಧಿಕಾರ-ಇವುಗಳ ಸಂಪಾದನೆಯಾಗಿರದೆ ಮೋಕ್ಷ ಸಂಪಾದನೆಯಾಗಿದ್ದಿತು. ಆದರೆ ನಂತರ, ವರ್ಣಾಶ್ರಮದ ಈ ಉನ್ನತ ಕಲ್ಪನೆಯು ಅಧಃಪತನ ಹೊಂದಿ ಕೇವಲ ಶುಷ್ಕ ಬಾಹ್ಯಾಡಂಬರವಾಗಿ ಮತ್ತು ಸಮಾಜದಲ್ಲಿಯ ಮೇಳು-ಕೀಳು ಎಂಬ ಭಾವನೆಗಳ ಮೂಲವಾಗಿ ಪರಿಣಮಿಸಿತು. ಹೀಗೆ ಹೇಳಿದ ಮಾತ್ರಕ್ಕೆ ಇದು ವರ್ಣಾಶ್ರಮದ ದೋಷವಲ್ಲ; ಇಂದು ಅಸ್ಪೃಶ್ಯತೆಯನ್ನು ನಿವಾರಿಸಿ, ವರ್ಣಾಶ್ರಮಕ್ಕೆ ಅದರ ಮೊದಲಿನ ಸ್ಥಾನಮಾನಗಳನ್ನು ದೊರಕಿಸಿಕೊಡಲು ಸುಧಾರಕನು ಪ್ರಯತ್ನಿಸಬೇಕು.

(ಯಂಗ್ ಇಂಡಿಯಾ, 13-8-1925)

* * *

ಮೇಲು-ಕೀಳು ಎಂಬ ತಪ್ಪು ಕಲ್ಪನೆಯನ್ನು ನಿವಾರಿಸಲು ನಾನು ಇನ್ನೊಮ್ಮೆ ಸಂತೋಷದಿಂದ ವರ್ಣಾಶ್ರಮ ಧರ್ಮದ ನನ್ನ ಕಲ್ಪನೆಯನ್ನು ಹೆಚ್ಚಿಗೆ ವಿವರಿಸುತ್ತೇನೆ. ನನ್ನ ದೃಷ್ಟಿಯಲ್ಲಿ ಆನುವಂಶಿಕವಾಗಿ ಅಥವಾ ಒಬ್ಬನು ಸಂಪಾದಿಸಿದ್ದೇ ಆಗಲಿ "ಉಳಿದವರಿಗಿಂತ ತಾನು ಶ್ರೇಷ್ಠ" ಎಂಬ ಭಾವನೆಗೆ ಅವಕಾಶವೇ ಇಲ್ಲ. ಎಲ್ಲಕ್ಕೂ ತಳಹದಿಯಾಗಿರುವ ಅದ್ವೈತವನ್ನು ನಾನು ನಂಬಿದ್ದೇನೆ. ನನ್ನ ಅದ್ವೈತದ ಕಲ್ಪನೆಯ ಪ್ರಕಾರ ಎಲ್ಲಿಯೂ ಶ್ರೇಷ್ಠತೆಯ ಭಾವನೆಗೆ ಎಡೆಯೇ ಇಲ್ಲ. ಎಲ್ಲ ಮಾನವರೂ ಸಮಾನರಾಗಿ ಹುಟ್ಟಿದ್ದಾರೆಂದು ನಾನು ದೃಢವಾಗಿ ನಂಬಿದ್ದೇನೆ. ಭಾರತ-ಇಂಗ್ಲೆಂಡ-ಅಮೆರಿಕಾ ಅಥವಾ ಯಾವುದೇ ದೇಶದಲ್ಲಿ ಜನ್ಮ ತಾಳಿದ ವ್ಯಕ್ತಿಗೂ ಅದೇ ಆತ್ಮವಿರುವುದು ಎಲ್ಲ ವ್ಯಕ್ತಿಗಳ ಸಮಾನತೆಯಲ್ಲಿ ನನಗೆ ವಿಶ್ವಾಸವಿರುವುದರಿಂದಲೇ ನಮ್ಮನ್ನು ಆಳುತ್ತಿರುವ ಜನಾಂಗದ ಅನೇಕರು ತಾವು ಶ್ರೇಷ್ಠರೆಂದು ಹೇಳಿಕೊಳ್ಳುತ್ತಿರುವ ಭಾವನೆಯ ವಿರುದ್ಧ ಹೋರಾಡುತ್ತಿದ್ದೇನೆ. ಇದೇ ಕಾರಣದ ಸಲುವಾಗಿ ನಾನು ದಕ್ಷಿಣ ಆಫ್ರಿಕೆಯಲ್ಲಿಯೂ ಹೋರಾಡಿದೆ; ಇದೇ ನಂಬಿಗೆಯ ಮೂಲಕವೇ ನಾನು ಒಬ್ಬ ಭಂಗಿ, ನೇಕಾರ, ಒಕ್ಕಲಿಗ, ಕೂಲಿಕಾರ ಎಂದು ನನ್ನನ್ನು ಕರೆದುಕೊಳ್ಳುವುದರಲ್ಲಿ ಸಂತೋಷ ಹೊಂದುತ್ತೇನೆ. ತಮ್ಮ ಜನ್ಮದ ಕಾರಣದಿಂದ ಅಥವಾ ತಾವು ಸಂಪಾದಿಸಿದ ಜ್ಞಾನದ ಸಲುವಾಗಿ ತಾವೇ ಶ್ರೇಷ್ಠರು ಎಂದು ಬ್ರಾಹ್ಮಣರು ತಮ್ಮನ್ನು ಕರೆದುಕೊಂಡಾಗ ಆ ಭಾವನೆಯ ವಿರುದ್ಧ ನಾನು ಹೋರಾಡಿದ್ದೇನೆ. ಇನ್ನೊಬ್ಬನಿಗಿಂತ ತಾನು ಮೇಲು ಎಂದು ತಿಳಿಯುವುದನ್ನು ನಾನು ಹೇಡಿತನವೆಂದು ಭಾವಿಸುತ್ತೇನೆ. ಯಾರು ತಾನೇ ಶ್ರೇಷ್ಠ ಎಂದು ಭಾವಿಸುವರೋ ಅವರು ಮಾನವರೆಂದು ಕರೆಯಿಸಿಕೊಳ್ಳಲು ಯೋಗ್ಯರಲ್ಲ.

ಹೀಗೆಲ್ಲ ಇದ್ದರೂ ನಾನು ವರ್ಣಾಶ್ರಮ ಧರ್ಮದಲ್ಲಿ ನಂಬಿಗೆಯುಳ್ಳವನಾಗಿದ್ದೇನೆ. ಈ ಧರ್ಮದಲ್ಲಿ ವಿಶ್ವಾಸವುಳ್ಳವರಾದರೆ ನಾವು ಜೀವಿತದ ಮಹೋದ್ದೇಶವನ್ನು ಸಾಧಿಸಲು ನಮಗೆ ಬಿಡುವು ಸಿಗುವುದು. ವರ್ಣಾಶ್ರಮ ಧರ್ಮವು ಮಾನವನನ್ನು ವಿನೀತನನ್ನಾಗಿಸುವುದು. ಎಲ್ಲ ಪುರುಷರು ಮತ್ತು ಸ್ತ್ರೀಯರು ಸಮಾನರು ಎಂದಾಗ ಆನುವಂಶಿಕವಾಗಿ ಗುಣಗಳು ಬರುವುದಿಲ್ಲವೆಂದು ನನ್ನ ಅಭಿಪ್ರಾಯವಲ್ಲ. ಪ್ರತಿಯೊಬ್ಬರೂ

ತಮ್ಮ ತಾಯಿ–ತಂದೆಯವರಿಂದ ಅನೇಕ ಮಾನಸಿಕ ವೈಲಕ್ಷಣ್ಯಗಳನ್ನು ಪಡೆಯುತ್ತಾರೆ. ಆ ಮಾತನ್ನು ನಾವು ಒಪ್ಪಿಕೊಂಡು ಇದರಂತೆ ನಡೆದರೆ ನಮ್ಮ ಐಹಿಕ ಆಕಾಂಕ್ಷೆಗಳಿಗೊಂದು ಯೋಗ್ಯವಾದ ಮಿತಿಯು ಏರ್ಪಟ್ಟು ನಮ್ಮ ಶಕ್ತಿಯನ್ನು ಆಧ್ಯಾತ್ಮಿಕ ಸಂಶೋಧನೆ ಮತ್ತು ವಿಕಾಸಕ್ಕೆ ಉಪಯೋಗಿಸಿಕೊಳ್ಳಲು ಅವಕಾಶವು ಸಿಗುವುದು. ಈ ಪ್ರಕಾರದ ವರ್ಣಾಶ್ರಮ ಧರ್ಮವನ್ನು ನಾನು ಯಾವಾಗಲೂ ನಂಬಿದ್ದೇನೆ. ಆದರೆ ಈಗ ತಿಳಿಯಲ್ಪಡುವ ಮತ್ತು ಆಚರಿಸಲ್ಪಡುವ ವರ್ಣಾಶ್ರಮ ಧರ್ಮವು ಮೊದಲಿನ ಆ ಧರ್ಮದ ವಿಕೃತರೂಪವಾಗಿದೆ. ಇಂಥ ವಿಕೃತರೂಪವನ್ನು ನಾವೀಗ ನಾಶಪಡಿಸಬೇಕೇ ಹೊರತು ವರ್ಣಾಶ್ರಮ ಧರ್ಮವನ್ನೇ ಅಲ್ಲ.

(ಯಂಗ್ ಇಂಡಿಯಾ, 29–9–1927)

ಹಿಂದೂ ಧರ್ಮದ ಬಗ್ಗೆ ನನಗೆ ಗೊತ್ತಿರುವ ವಿಷಯಗಳಲ್ಲೆಲ್ಲ ಅತಿ ಸುಲಭವಾದುದೆಂದರೆ “ವರ್ಣ”. ನಮ್ಮ ಆನುವಂಶಿಕ ಮತ್ತು ಸಾಂಪ್ರದಾಯಿಕ ಉದ್ಯೋಗಗಳನ್ನು ನಾವು ಪಾಲಿಸುತ್ತ ಹೋಗುವುದೇ “ವರ್ಣ”ದ ಅರ್ಥ. ಆದರೆ ಈ ಉದ್ಯೋಗಗಳು ನೀತಿಗೆ ಸಮ್ಮತವಾಗಿಯೂ, ಕೇವಲ ಉದರನಿರ್ವಹಣೆಗಾಗಿಯೂ ಇರಬೇಕು. ಎಲ್ಲ ಧರ್ಮಗಳಲ್ಲಿ ವಿವರಿಸಿದ ಮಾನವನ ವ್ಯಾಖ್ಯೆಯನ್ನು ನಾವು ಒಪ್ಪಿಕೊಂಡರೆ ಈ ವರ್ಣಾಶ್ರಮ ಧರ್ಮವನ್ನು ಮಾನವ ಜೀವನದ ಧರ್ಮವೆಂದು ಕರೆಯಬೇಕೆಂದು ನನಗನ್ನಿಸುತ್ತದೆ. ಪರಮಾತ್ಮನ ಎಲ್ಲಾ ಸೃಷ್ಟಿಯಲ್ಲಿ ಮಾನವನೊಬ್ಬನೇ ಸೃಷ್ಟಿಕರ್ತನನ್ನು ಅರಿಯಲೆಂದು ನಿರ್ಮಿಸಲ್ಪಟ್ಟಿದ್ದಾನೆ. ಆದ್ದರಿಂದ ಮನುಷ್ಯನ ಜೀವನದ ಗುರಿಯು ಪ್ರತಿ ನಿತ್ಯವೂ ಐಹಿಕ ಸಂಪತ್ತನ್ನು ಹೆಚ್ಚಿಸುವುದು ಆಗಿರದೆ ತನ್ನನ್ನು ಸೃಷ್ಟಿಸಿದ ಪರಮಾತ್ಮನ ಹತ್ತಿರ ಬರುವುದೇ ಆಗಿದೆ. ಈ ದೃಷ್ಟಿಯಿಂದಲೇ ಪ್ರಾಚೀನ ಋಷಿಗಳು ಮೇಲೆ ಹೇಳಿದ ಜೀವನದ ಧರ್ಮವನ್ನು ಶೋಧಿಸಿದರು. ಈ ವರ್ಣಾಶ್ರಮ ಧರ್ಮವನ್ನು ನಾವೆಲ್ಲರೂ ಪಾಲಿಸಿದರೆ ನಮ್ಮ ಐಹಿಕ ಆಕಾಂಕ್ಷೆಗೆ ಒಂದು ಮಿತಿ ಉಂಟಾಗಿ ನಾವು ನಮ್ಮ ಶಕ್ತಿಯನ್ನು ವಿಶಾಲವಾದ ಆಧ್ಯಾತ್ಮಿಕ ಕ್ಷೇತ್ರದಲ್ಲಿ ಉಪಯೋಗಿಸಿ ಪರಮಾತ್ಮನನ್ನು ಅರಿಯಲು ಅನುಕೂಲವಾಗುವುದು. ದಕ್ಷಿಣ ಭಾರತದ ಕೆಲವು ಹಿಂದೂಗಳು ಇತ್ತೀಚೆಗೆ ವರ್ಣಾಶ್ರಮ ಧರ್ಮವು ಹಿಂದೂ ಧರ್ಮದ

ಕಲಂಕವೆಂದು ಹೇಳುತ್ತಾರೆ; ಆದರೆ ಇಂದು ಕಂಡುಬರುವ ವರ್ಣಾಶ್ರಮದ ವಿಕೃತ ರೂಪವನ್ನು ಒಂದು ಕ್ಷಣವಾದರೂ ನೀವಾಗಲಿ, ನಾನಾಗಲಿ ಸಹಿಸಕೂಡದು. ವರ್ಣಾಶ್ರಮ ಮತ್ತು ಜಾತಿ–ಇವುಗಳಲ್ಲಿ ಸಮಾನವಾದ ಅಂಶ ಒಂದೂ ಇಲ್ಲ. ಜಾತಿಯು ಹಿಂದೂ ಜನರ ಪ್ರಗತಿಗೆ ನಿಜವಾಗಿಯೂ ಅಡ್ಡಿಯಾಗಿದೆ ಮತ್ತು ಅಸ್ಪೃಶ್ಯತೆಯು ಒಂದು ದೊಡ್ಡ ಕಲಂಕವಾಗಿದೆ. ಇದು ಹೊಲದಲ್ಲಿ ಹುಲ್ಲು ಬೆಳೆದ ಹಾಗೆ ಬೆಳೆದಿದೆ. ಇದನ್ನು ತೆಗೆದುಹಾಕುವುದು ನಮ್ಮ ಕರ್ತವ್ಯವಾಗಿದೆ.

(ಯಂಗ್ ಇಂಡಿಯಾ, 20–10–1927)

* * *

ಒಬ್ಬ ಮನುಷ್ಯನು ತನ್ನ ಉದರನಿರ್ವಹಣೆಗಾಗಿ ತನ್ನ ಮನೆತನದ ಆನುವಂಶಿಕ ಉದ್ಯೋಗವನ್ನು ತಾನೂ ಮಾಡುತ್ತ ಹೋಗುವುದೇ "ವರ್ಣದ ನಿಯಮ." ಪ್ರತಿಯೊಂದು ಮಗುವು ಸಹಜವಾಗಿ ತನ್ನ ತಂದೆ ಬಣ್ಣ (ವರ್ಣ)ವನ್ನು ಹೋಲುವಂತೆ ತನ್ನ ತಂದೆಯ ಉದ್ಯೋಗವನ್ನೂ ಮುಂದುವರಿಸಬೇಕು. ವರ್ಣದ ನಿಯಮವೆಂದರೆ ಒಂದು ದೃಷ್ಟಿಯಿಂದ ಆನುವಂಶಿಕತೆಯ ನಿಯಮವೇ ಆಗಿದೆ. ಇದು ಹಿಂದೂಗಳ ಮೇಲೆ ತಂದು ಯಾರೋ ಹೇರಿದ್ದಲ್ಲ; ಆದರೆ ಹಿಂದಿನ ಸಮಾಜದ ಹಿತಚಿಂತಕರು ಕಂಡುಹಿಡಿದ ನಿಯಮವಾಗಿದೆ. ಇದು ಮಾನವನ ಸಂಶೋಧನೆಯಾಗಿರದೆ ನಿಸರ್ಗದಲ್ಲಿ ಯಾವಾಗಲೂ ಇದ್ದು ಕೆಲಸ ಮಾಡುತ್ತಿರುವ ಬದಲಾಗದ ಒಂದು ನಿಸರ್ಗದ ನಿಯಮವಾಗಿದೆ. ಪೃಥ್ವಿಯ ಆಕರ್ಷಣದ ತತ್ವವು ನ್ಯೂಟನ್‌ನು ಅದನ್ನು ಕಂಡುಹಿಡಿಯುವುದಕ್ಕಿಂತಲೂ ಮೊದಲೇ ಇದ್ದಿತು; ಹಾಗೆಯೇ ವರ್ಣದ ತತ್ವವಾದರೂ ಮೊದಲಿನಿಂದಲೂ ಇದ್ದದ್ದೇ. ಇದನ್ನು ಕಂಡುಹಿಡಿದ ಭಾಗ್ಯ ಹಿಂದೂಗಳದಾಗಿದೆ. ಪಾಶ್ಚಾತ್ಯ ದೇಶದ ವಿಜ್ಞಾನಿಗಳು ನಿಸರ್ಗದ ಕೆಲವು ನಿಯಮಗಳನ್ನು ಕಂಡುಹಿಡಿದು ಅವುಗಳ ಉಪಯೋಗದಿಂದ ತಮ್ಮ ಲೌಕಿಕ ಸಂಪತ್ತನ್ನು ಹೆಚ್ಚಿಸಿಕೊಂಡಿದ್ದಾರೆ. ಹಾಗೆಯೇ ಹಿಂದೂಗಳು ಅದಮ್ಯವಾದ ಈ ಸಾಮಾಜಿಕ ತತ್ವವನ್ನು ಕಂಡುಹಿಡಿದು ಆಧ್ಯಾತ್ಮಿಕ ಕ್ಷೇತ್ರದಲ್ಲಿ ಉಳಿದ ಯಾವ ದೇಶವೂ ಸಾಧಿಸದ ಪ್ರಗತಿಯನ್ನು ಸಾಧಿಸಿದರು.

ಪ್ರಶ್ನೆ : ಒಬ್ಬನು ತನ್ನ ಪೂರ್ವಜರ ಉದ್ಯೋಗವನ್ನು ಅನುಸರಿಸದೆ ಬೇರೆ ಉದ್ಯೋಗ ಅನುಸರಿಸಿದರೆ, ಅವನ 'ವರ್ಣ' ಯಾವುದು?

ಉತ್ತರ : ಹಿಂದೂ ಧರ್ಮದ ಪ್ರಕಾರ ಅವನು ಯಾವ ವರ್ಣದಲ್ಲಿ ಹುಟ್ಟಿರುವನೋ ಅದೇ ವರ್ಣದವನಾಗುತ್ತಾನೆ; ಆದರೆ ಆ ರೀತಿ ಅವನು ಜೀವನದಲ್ಲಿ ನಡೆಯದೆ ಇದ್ದರೆ ಅವನು ತನಗೆ ಅನ್ಯಾಯಮಾಡಿಕೊಂಡಂತಾಗಿ ಅವನು ಪತಿತನಾಗುತ್ತಾನೆ.

ಪ್ರಶ್ನೆ : ಒಬ್ಬ ಶೂದ್ರನು ಜನ್ಮತಃ ಬ್ರಾಹ್ಮಣನು ಮಾಡಬೇಕಾದ ಕರ್ತವ್ಯವನ್ನು ಮಾಡಿದರೆ ಅವನು ಪತಿತನಾಗುತ್ತಾನೆಯೇ?

ಉತ್ತರ : ಬ್ರಾಹ್ಮಣನಿಗಿರುವಷ್ಟೇ ಶೂದ್ರನಿಗೂ ಜ್ಞಾನವನ್ನು ಪಡೆಯುವ ಅಧಿಕಾರವಿದೆ. ಆದರೆ ಅವನು ಕಲಿಸುವುದರಿಂದ ತನ್ನ ಹೊಟ್ಟೆ ಹೊರೆದುಕೊಳ್ಳುವುದನ್ನು ಪ್ರಾರಂಭಿಸಿದರೆ ಮಾತ್ರ ಅದು ತಪ್ಪು. ಪ್ರಾಚೀನ ಕಾಲದಲ್ಲಿ ವ್ಯಾಪಾರಸ್ಥರ ಶ್ರೇಣಿಗಳಿದ್ದವು; ಒಂದು ಉದ್ಯೋಗದ ಜನರಿಗೆ ಸಹಜವಾಗಿ ರಕ್ಷಣೆ ದೊರೆಯುತ್ತಿತ್ತು. ನೂರು ವರ್ಷಗಳ ಹಿಂದೆ ಒಬ್ಬ ಬಡಿಗನ ಮಗನು ವಕೀಲನಾಗಲು ಎಂದೂ ಬಯಸುತ್ತಿರಲಿಲ್ಲ. ಇಂದು ಅವನು ಬಯಸುತ್ತಾನೆ; ಯಾಕೆಂದರೆ ಹಣ ಸಂಪಾದಿಸಲು ಅದು ಅತ್ಯಂತ ಸುಲಭೋಪಾಯವೆಂದು ಅವನಿಗನಿಸಿದೆ. ವಕೀಲನು ತನ್ನ ಮಿದುಳಿನ ಉಪಯೋಗಕ್ಕಾಗಿ 15000 ರೂ. ಫೀ ಬೇಡುತ್ತಾನೆ; ಹಕೀಮ ಸಾಹೇಬನಂಥ ಒಬ್ಬ ವೈದ್ಯನು ತನ್ನ ವೈದ್ಯಕೀಯ ಸಲಹೆಗಾಗಿ ದಿನಾಲು 1000 ರೂ. ಫೀ ಬೇಡುತ್ತಾನೆ!

ಪ್ರಶ್ನೆ : ಅಂದರೆ ಒಬ್ಬ ಮನುಷ್ಯನು ತಾನು ಪ್ರೀತಿಸುವ ಉದ್ಯೋಗವನ್ನು ಮಾಡಲೇಬಾರದೇ?

ಉತ್ತರ : ಅವನು ತನ್ನ ಪೂರ್ವಜರ ಉದ್ಯೋಗವನ್ನೇ ಪ್ರೀತಿಸಬೇಕು. ಇದರಲ್ಲಿ ತಪ್ಪೇನೂ ಇಲ್ಲ; ಇಷ್ಟೇ ಅಲ್ಲ ಅದು ಗೌರವಯುತವಾದುದು. ನಾವಿಂದು ಕಾಣುವುದು ಈ ವಿಷಯದಲ್ಲಿಯು ಸ್ವೇಚ್ಛಾಚಾರ; ಆದ್ದರಿಂದ ಸಮಾಜದಲ್ಲಿಯ ವ್ಯವಸ್ಥೆಗೆ ಭಂಗ ಬರುವುದು. ಇಂಥ ಕೆಲವು ತೋರಿಕೆಯ ಉದಾಹರಣೆಗಳಿಂದ ನಾವು ಗೊಂದಲದಲ್ಲಿ ಬೀಳುವುದು ಬೇಡ.

ತಮ್ಮ ತಂದೆಯ ಉದ್ಯೋಗವನ್ನೇ ಮುಂದುವರಿಸುವ ಸಾವಿರಾರು ಬಡಿಗರು ಇದ್ದಾರೆ; ಆದರೆ ಬಡಿಗರವನ ಮಕ್ಕಳು ವಕೀಲರಾದುದಕ್ಕೆ ನೂರಾರು ಉದಾಹರಣೆ ಕೂಡ ಇಲ್ಲ. ಹಿಂದಿನ ಕಾಲದಲ್ಲಿ ಮತ್ತೊಬ್ಬರ ಉದ್ಯೋಗವನ್ನು ತಾನು ಸ್ವೀಕರಿಸಿ ಹಣ ಸಂಪಾದಿಸುವ ಆಕಾಂಕ್ಷೆ ಇರಲಿಲ್ಲ. ಉದಾಹರಣೆಗೆ–ಸಿಸಿರೋನ ಕಾಲದಲ್ಲಿ ವಕೀಲವೃತ್ತಿಯು ಯಾವ ಹಣವನ್ನು ಅಪೇಕ್ಷಿಸದ ಗೌರವದ ಕೆಲಸವಾಗಿತ್ತು. ಅದರಂತೆ ಒಬ್ಬ ಬಡಿಗರವನ ಮಗನು ಬುದ್ಧಿವಂತನಾಗಿದ್ದರೆ ಹಣದ ಆಸೆ ಇಟ್ಟುಕೊಳ್ಳದೆ ಕೇವಲ ಸೇವಾಬುದ್ಧಿಯಿಂದ ವಕೀಲನಾಗಬಹುದು. ನಂತರ ಹಣ ಮತ್ತು ಕೀರ್ತಿಗಳನ್ನು ಸಂಪಾದಿಸುವ ಆಕಾಂಕ್ಷೆ ಜನರಲ್ಲಿ ಉಂಟಾಯಿತು. ಹಿಂದೆ ವೈದ್ಯರು ಸಮಾಜಕ್ಕೆ ಸೇವೆ ಸಲ್ಲಿಸಿ ಕೊಟ್ಟಷ್ಟರಿಂದ ತೃಪ್ತಿ ಹೊಂದುತ್ತಿದ್ದರು; ಈಗ ಅವರು ವ್ಯಾಪಾರಿಗಳಾಗಿದ್ದಾರಲ್ಲದೆ ಸಮಾಜಕ್ಕೆ ಗಂಡಾಂತರಪ್ರಾಯರೂ ಕೂಡ ಆಗಿದ್ದಾರೆ.

ಪ್ರಶ್ನೆ : ವರ್ಣದ ನಿಯಮವು ನಮ್ಮ ಲೌಕಿಕ ಆಕಾಂಕ್ಷೆಗಳನ್ನು ನಿಗ್ರಹಿಸುತ್ತದೆ ಎಂದು ನೀವು ಹೇಳುತ್ತೀರಿ. ಅದು ಹೇಗೆ?

ಉತ್ತರ : ನಾನು ನನ್ನ ತಂದೆಯ ಉದ್ಯೋಗವನ್ನೇ ಮುಂದುವರಿಸಿದರೆ ನಾನು ಅದನ್ನು ಕಲಿಯಲು ಯಾವ ಶಾಲೆಗೂ ಹೋಗಬೇಕಾಗಿಲ್ಲ. ನನ್ನ ಉದರನಿರ್ವಹಣೆಗೆ ಯಾವ ಭಯವಿಲ್ಲದಿರುವುದರಿಂದ ನನ್ನ ಮಾನಸಿಕ ಶಕ್ತಿಯನ್ನು ನಾನು ಆಧ್ಯಾತ್ಮಿಕ ಕ್ಷೇತ್ರದಲ್ಲಿ ಉಪಯೋಗಿಸಬಹುದು. ಐಹಿಕ ಸುಖ ಮತ್ತು ನಿಜವಾದ ಆಧ್ಯಾತ್ಮಿಕ ಸಾಧನೆಗಳನ್ನು ಸಾಧಿಸಲು ವರ್ಣವು ಶ್ರೇಷ್ಠ ಉಪಾಯವಾಗಿದೆ. ನಾನು ಇತರ ಲೌಕಿಕ ಉದ್ಯೋಗಗಳ ಸಲುವಾಗಿ ನನ್ನ ಶಕ್ತಿಯನ್ನೆಲ್ಲ ಉಪಯೋಗಿಸಿದರೆ, ಒಂದು ಕ್ಷುಲ್ಲಕ ಸಂಗತಿಯ ಸಲುವಾಗಿ ಆತ್ಮೋದ್ಧಾರದ ನನ್ನ ಶಕ್ತಿಯನ್ನು ಮಾರಿಕೊಂಡಂತೇ ಆಗುತ್ತದೆ.

ಪ್ರಶ್ನೆ : ಆಧ್ಯಾತ್ಮಿಕ ಸಾಧನೆಯ ಸಲುವಾಗಿ ಶಕ್ತಿಯನ್ನು ಉಪಯೋಗಿಸುವ ಬಗ್ಗೆ ನೀವು ಹೇಳುತ್ತೀರಿ. ತಮ್ಮ ತಂದೆಯ ಉದ್ಯೋಗವನ್ನು ಅನುಸರಿಸುವ ಜನರಲ್ಲಿಯಾದರೂ ಇಂದು ಆಧ್ಯಾತ್ಮಿಕ ಸಂಸ್ಕೃತಿ ಎಲ್ಲಿದೆ? ಅವರ ವರ್ಣಧರ್ಮವೇ ಅದಕ್ಕೆ ಅಡ್ಡಿಯಾಗುತ್ತಿದೆ.

ಉತ್ತರ : ನಾವು ವರ್ಣದ ಸರಿಯಾದ ಕಲ್ಪನೆಯಿಂದ ವಿಚಾರ ಮಾಡುತ್ತಿಲ್ಲ. ವರ್ಣಧರ್ಮವು ಸರಿಯಾದ ರೀತಿಯಲ್ಲಿ ಆಚರಿಸಲ್ಪಡುವಾಗ ಆಧ್ಯಾತ್ಮಿಕ ಸಾಧನೆಗಾಗಿ ಸಾಕಷ್ಟು ಬಿಡುವು ದೊರೆಯುತ್ತಿತ್ತು. ಈಗಲಾದರೂ ನೀವು ದೂರದ ಹಳ್ಳಿಗಳಿಗೆ ಹೋಗಿ ಪಟ್ಟಣಿಗರಿಗಿಂತ ಅಲ್ಲಿ ಎಷ್ಟು ಹೆಚ್ಚು ಆಧ್ಯಾತ್ಮಿಕ ಸಂಸ್ಕೃತಿ ಇದೆ ಎಂಬುದನ್ನು ನೋಡಬಹುದು. ಇಂದು ನಮ್ಮಲ್ಲಿಯ ಕೇವಲ ಕೆಲವರಿಗೆ ಈಗ ಸಿಗುತ್ತಿರುವ ಬಿಡುವಿನ ವೇಳೆ ಕೋಟಿಗಟ್ಟಲೆ ಜನರಿಗೆ ಸಿಗುವಂತೆ ನಾವು ನಮ್ಮ ಜೀವನವನ್ನು ಮಾರ್ಪಡಿಸಬೇಕಾಗಿದೆ; ವರ್ಣದ ನಿಯಮವನ್ನು ಪಾಲಿಸದ ವಿನಾ ಇದನ್ನು ನಾವು ಸಾಧಿಸಲಾರೆವು.

(ಯಂಗ್ ಇಂಡಿಯಾ, 24–11–1927)

* * *

ಪ್ರಶ್ನೆ : ನೀವು ಕೇವಲ ಅಸ್ಪೃಶ್ಯತೆಯ ನಿವಾರಣೆಯನ್ನಷ್ಟೇ ಏಕೆ ಮಾಡಬೇಕೆನ್ನುವಿರಿ? ಇಡಿಯ ಜಾತಿ–ಪದ್ಧತಿಯನ್ನೇ ಏಕೆ ತೆಗೆದುಹಾಕಬಾರದು? ಜಾತಿ–ಜಾತಿಯಲ್ಲಿ ಮತ್ತು ಜಾತಿ–ಅಸ್ಪೃಶ್ಯತೆಯಲ್ಲಿ ಅಂತರವಿದ್ದರೆ ಅದು ಕೇವಲ ಅಂಶತಃ ಇದ್ದ ಅಂತರವಲ್ಲವೇ?

ಉತ್ತರ : ಭಾರತದಲ್ಲಿ ಅಸಂಖ್ಯ ಜಾತಿಗಳಿವೆ, ಜಾತಿಯು ಒಂದು ಸಾಮಾಜಿಕ ಸಂಸ್ಥೆಯಾಗಿದೆ. ಸರ್ ವಿಲಿಯಂ ವಿಲ್ಸನ್ ಹಂಟರ್ ಅವರು ಹೇಳಿದಂತೆ ಜಾತಿಗಳು ವ್ಯಾಪಾರಸ್ಥರ ಶ್ರೇಣಿಗಳಾಗಿವೆ. ಒಂದು ಕಾಲಕ್ಕೆ ಅವು ಬಹಳ ಉಪಯುಕ್ತವಾಗಿದ್ದವು. ಈಗಲೂ ಅವು ಸ್ವಲ್ಪಮಟ್ಟಿಗೆ ಉಪಯುಕ್ತವಿವೆ. ಆದರೆ ಜಾತಿಗಳಿಗೆ ಅನಾವಶ್ಯಕವಾದ ನಿರ್ಬಂಧಗಳು ಜೋಡಿಸಲ್ಪಟ್ಟಿವೆ; ಇವು, ನನ್ನ ಅಭಿಪ್ರಾಯದಲ್ಲಿ, ಯೋಗ್ಯವಾಗಿಲ್ಲ ಮತ್ತು ಕಾಲಾನುಕ್ರಮದಲ್ಲಿ ಹೋಗತಕ್ಕವುಗಳೇ ಆಗಿವೆ. ಜಾತಿಗಳಲ್ಲಿ ಅಪರಾಧದ ಅಂಶವೇನೂ ಇಲ್ಲ. ಅವು ಜನರ ಆಧ್ಯಾತ್ಮಿಕ ಪ್ರಗತಿಗೆ ಅಡ್ಡಿಯಾಗಿಲ್ಲ. ಆದ್ದರಿಂದ ಜಾತಿ–ಪದ್ಧತಿ ಮತ್ತು ಅಸ್ಪೃಶ್ಯತೆ ಇವುಗಳಲ್ಲಿಯ ಅಂತರವು ಅತಿಶಯವಾಗಿದೆ. ಒಬ್ಬ "ಅಸ್ಪೃಶ್ಯ"ನಿಗೆ ಸಮಾಜದಲ್ಲಿ ಯಾವ ಸ್ಥಾನವೂ ಇಲ್ಲ. ಅವನೊಬ್ಬ ಮನುಷ್ಯನೆಂದು ಸಮಾಜವು ಅವನನ್ನು ಕಾಣುತ್ತಿಲ್ಲ.

ಜಾತಿ-ಪದ್ಧತಿಯ ಬಗ್ಗೆ ಇನ್ನೊಂದು ಮಾತು ನೆನಪಿಡುವುದು ಅವಶ್ಯವಾಗಿದೆ. ನನ್ನ ದೃಷ್ಟಿಯಲ್ಲಿ ಅದು ವರ್ಣಾಶ್ರಮ ಧರ್ಮಕ್ಕಿಂತ ಭಿನ್ನವಾಗಿದೆ. ಜಾತಿ-ಪದ್ಧತಿಯು ಸಾಮಾಜಿಕ ಅವಶ್ಯಕತೆಯ ಪೂರೈಕೆಗಾಗಿ ಜನ್ಮತಾಳಿದ್ದರೆ ವರ್ಣಾಶ್ರಮವು ಹಿಂದೂ ಧರ್ಮಗ್ರಂಥಗಳನ್ನು ಅವಲಂಬಿಸಿ ನಿಂತಿದೆ. ಜಾತಿಗಳು ಅಸಂಖ್ಯವಾಗಿವೆ; ಆದರೆ ವರ್ಣಗಳು ಯಾವಾಗಲೂ ನಾಲ್ಕೇ ಆಗಿ ಉಳಿದಿವೆ. ವರ್ಣಾಶ್ರಮ ಧರ್ಮದಲ್ಲಿ ನಾನು ದೃಢವಾದ ನಂಬಿಗೆಯುಳ್ಳವನಾಗಿದ್ದೇನೆ. ಅದು ಹಿಂದೂ ಧರ್ಮವು ಮಾನವಕೋಟಿಗೆ ಕೊಟ್ಟ ಕಾಣಿಕೆ ಎಂದು ನಾನು ಧೈರ್ಯದಿಂದ ಹೇಳುತ್ತೇನೆ.

(ಹ. 11-2-1933)

* * *

ಅಸ್ಪೃಶ್ಯತೆಯ ಉಗಮವು ಜಾತಿ-ಪದ್ಧತಿಯಲ್ಲಿಲ್ಲ; ಆದರೆ ಮೇಲು-ಕೀಳು ಎಂಬ ಭಾವನೆಯಲ್ಲಿದೆ. ಈ ಭಾವನೆಯು ಹಿಂದೂ ಧರ್ಮದಲ್ಲಿ ಪ್ರವೇಶಿಸಿ ಅದನ್ನು ದುರ್ಬಲಗೊಳಿಸುತ್ತಿದೆ. ಆದ್ದರಿಂದ ಅಸ್ಪೃಶ್ಯತೆಯನ್ನು ನಿವಾರಿಸುವುದೆಂದರೆ ಸಮಾಜದಲ್ಲಿಯ ಮೇಲು-ಕೀಳು ಎಂಬ ತಾರತಮ್ಯ ಭಾವನೆಯನ್ನು ನಿವಾರಿಸಿದಂತೆಯೇ ಸರಿ. ಅಸ್ಪೃಶ್ಯತೆಯು ಇಲ್ಲದ ಮರುಕ್ಷಣವೇ, ಜಾತಿ-ಪದ್ಧತಿಯು ಪರಿಶುದ್ಧವಾಗಿ ನಿಜವಾದ ವರ್ಣಾಶ್ರಮ ಧರ್ಮವಾಗಿ ಮಾರ್ಪಾಟು ಹೊಂದುವುದು. ಈ ಚತುರ್ವರ್ಣಗಳು ಒಂದಕ್ಕೊಂದು ಪೂರಕವಾಗಿ, ಸಮಾನವಾಗಿ ಹಿಂದೂ ಧರ್ಮವೆಂಬ ದೇಹದ ನಾಲ್ಕು ಆವಶ್ಯಕ ಅಂಗಗಳಾಗಿ ಕೆಲಸ ಮಾಡುವವು.

(ಹ. 11-2-1933)

* * *

ಅಸ್ಪೃಶ್ಯತಾ ನಿವಾರಣೆ

ಅಸ್ಪೃಶ್ಯತೆಯು ಒಂದು ಅಪರಾಧವೆಂದು ನಂಬುತ್ತ ಸುಮ್ಮನೆ ಕುಳಿತರೆ ಆಗದು. ಒಂದು ಅಪರಾಧವು ನಡೆದಾಗ ಒಬ್ಬನು ಅದನ್ನು ಸುಮ್ಮನೆ ನೋಡುತ್ತಾ ಕುಳಿತರೆ ಅವನು ನಿಜವಾಗಿಯೂ–ಮತ್ತು ಕಾಯದೆಯ ದೃಷ್ಟಿಯಿಂದಲೂ–ಆ ಅಪರಾಧಕ್ಕೆ ಭಾಗಿಯಾಗುತ್ತಾನೆ. ಆದ್ದರಿಂದ ನೀವು ಎಲ್ಲ ನ್ಯಾಯಸಮ್ಮತವಾದ ರೀತಿಯಿಂದ ಚಳವಳಿಯನ್ನು ಪ್ರಾರಂಭಿಸಿ ಅದನ್ನು ಮುಂದುವರಿಸುತ್ತ ಹೋಗಬೇಕು.

ಈಗಾಗಲೇ ವಿಲಂಬವಾಗಿದ್ದರೂ ಅಸ್ಪೃಶ್ಯತಾ ನಿವಾರಣೆಯಂಥ ಸುಧಾರಣೆಯನ್ನು ವಿರೋಧಿಸುವ ಬ್ರಾಹ್ಮಣ ಪೂಜಾರಿಗಳನ್ನು ನಾನು ಜಾಗೃತಗೊಳಿಸಬಯಸುತ್ತೇನೆ. ಯಾರು ನಿಜವಾಗಿ ಧರ್ಮವನ್ನು ಸಂರಕ್ಷಿಸತಕ್ಕವರೋ ಅವರೇ ಅದರ ನಾಶಕ್ಕೆ ಕಾರಣರಾಗುತ್ತಿದ್ದಾರೆಂಬುದು ನಿಜವಾಗಿಯೂ ಶೋಚನೀಯವಾದ ಸಂಗತಿ. ನನ್ನ ಕಣ್ಮುಂದೆಯೇ ತ್ರಾವಣಕೋರದ ಮತ್ತು ಬೇರೆ ಸ್ಥಳಗಳಲ್ಲಿಯ ಬ್ರಾಹ್ಮಣ ಅರ್ಚಕರು, ತಮ್ಮ ಅಜ್ಞಾನದಿಂದಲೋ ಅಥವಾ ಬೇರೆ ಕಾರಣದಿಂದಲೋ, ತಾವು ರಕ್ಷಿಸತಕ್ಕ ಧರ್ಮವನ್ನು ನಾಶಪಡಿಸುತ್ತಿದ್ದಾರೆ. ಇಂಥ ಮಹದನ್ಯಾಯವನ್ನು ಉಳಿಸಲು ಉಪಯೋಗಿಸಿದ ಅವರ ಜ್ಞಾನವೆಲ್ಲ ವ್ಯರ್ಥವಾದುದೇ ಸರಿ. ಆದ್ದರಿಂದ ತೀರ ತಡವಾಗುವುದಕ್ಕಿಂತ ಮೊದಲೇ ಅವರು ಕಾಲವು ಬದಲಾಗುತ್ತಿದೆ ಎಂಬುದನ್ನು ಲಕ್ಷಿಸಿ ಸರಿಯಾದ ದಾರಿಯಿಂದ ನಡೆಯಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

(ಯಂಗ್ ಇಂಡಿಯಾ, 20–10–1927)

* * *

"ಅಸ್ಪೃಶ್ಯ"ರೆಂದು ಕರೆಯಿಸಿಕೊಳ್ಳುವ ಜನರು ನಿಮ್ಮನ್ನು ತಿರಸ್ಕರಿಸಬಾರದೆಂದು ನಾನು ಹೇಗೆ ಬಯಸುವೆನೋ ಹಾಗೆಯೇ ನೀವಾದರೂ ಅವರ ಬಗೆಗೆ ದ್ವೇಷವನ್ನು ತಾಳಬಾರದೆಂದು ನನ್ನ ಇಚ್ಛೆ. ನೀವು

ಹಿಂಸೆಯಿಂದ ನಿಮ್ಮ ಹಕ್ಕು-ಬಾಧ್ಯತೆಗಳನ್ನು ಪಡೆಯುವುದು ನನಗೆ ಸರಿ ಎನಿಸುವುದಿಲ್ಲ. ಇಂಥ ಹಿಂಸೆಗೆ ಜಗತ್ತಿನ ಅಭಿಮತವಾದರೂ ವಿರುದ್ಧವಾಗಿದೆ. ನಿಮ್ಮ ಉದ್ದೇಶ ಸಾಧನೆಗೆ ನೀವು ಹಿಂಸೆಯನ್ನು ಉಪಯೋಗಿಸಿದರೆ ನೀವು ಸೋಲುವುದು ಖಂಡಿತ. ನಾನು ನಿಮ್ಮೊಡನೆ ವ್ಯವಹರಿಸುವಾಗ ಆಗಲಿ ಅಥವಾ ಬೇರೆಯವರೊಡನೆ ವ್ಯವಹರಿಸುವಾಗ ಆಗಲಿ ಮುಚ್ಚುಮರೆಯಿಂದ ವರ್ತಿಸುವುದಿಲ್ಲ. ನಿಮಗೆ ಯಾವುದೇ ಪ್ರಕಾರದ ಮೋಸಮಾಡಲು ನಾನು ಬಯಸುವುದಿಲ್ಲ. ಅಥವಾ ನಿಮಗೆ ಏನಾದರೂ ಆಶೆ ತೋರಿಸಿ ನಿಮ್ಮ ಸಹಾಯ ಪಡೆಯಲು ನಾನು ಇಚ್ಛಿಸುವುದಿಲ್ಲ. ಏನಾದರೊಂದು ರಾಜಕೀಯ ಗುರಿಯನ್ನು ಸಾಧಿಸಲು ನಿಮ್ಮನ್ನು ಉಪಯೋಗಿಸ ಬಯಸುವುದಿಲ್ಲ. ನನಗೆ ಅಸ್ಪೃಶ್ಯತಾ ನಿವಾರಣೆಯ ಪ್ರಶ್ನೆಯು ಸ್ವರಾಜ್ಯಕ್ಕಿಂತ ಕೂಡ ದೊಡ್ಡ ಪ್ರಶ್ನೆಯಾಗಿದೆ. ಅಸ್ಪೃಶ್ಯತೆಯನ್ನು ಕೊನೆಗೊಳಿಸಲು ನಾನು ಆತುರನಾಗಿದ್ದೇನೆ; ಏಕೆಂದರೆ ಇದು ನನ್ನ ದೃಷ್ಟಿಯಲ್ಲಿ ಹಿಂದೂಗಳು ಮಾಡಲೇಬೇಕಾದ ಪಾಪಕ್ಷಾಲನೆ, ತಪಸ್ಸು. ಹಿಂದೂ ಧರ್ಮವು ಅಸ್ಪೃಶ್ಯತೆಗೆ ಆಸ್ಪದ ಕೊಟ್ಟು ಅನ್ಯಾಯಮಾಡಿದೆ; ಅದರ ಪರಿಮಾರ್ಜನೆ ಮಾಡಲು ನಾನು ವೈಯಕ್ತಿಕವಾಗಿ ಪ್ರಾಯಶ್ಚಿತ್ತ ತೆಗೆದುಕೊಳ್ಳಬಯಸುವೆ.

ಹೀಗಿದ್ದ ಬಳಿಕ, ನನಗೆ ಇರುವ ಸಾಧನೆಗಳೆಂದರೆ ಅಹಿಂಸೆ ಮತ್ತು ಸತ್ಯ. ನಾನು ಒಂದು "ಅಸ್ಪೃಶ್ಯ" ಮಗುವನ್ನು ಸಂರಕ್ಷಿಸಲು ಸ್ವೀಕರಿಸಿದ್ದೇನೆ. ನಾನು ನನ್ನ ಹೆಂಡತಿಯನ್ನು ಸಂಪೂರ್ಣವಾಗಿ ನನ್ನ ದೃಷ್ಟಿಯವಳನ್ನಾಗಿ ಪರಿವರ್ತಿಸಲು ನನಗೆ ಸಾಧ್ಯವಾಗಿಲ್ಲವೆಂಬ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ನಾನು ಹೇಗೆ ಆ ಮಗುವನ್ನು ಪ್ರೀತಿಸುವೆನೋ ಹಾಗೆ ನನ್ನ ಹೆಂಡತಿ ಪ್ರೀತಿಸುವುದಿಲ್ಲ. ಆದರೆ ಕೋಪದಿಂದ ನಾನು ನನ್ನ ಹೆಂಡತಿಯನ್ನು ಪರಿವರ್ತಿಸಲಾರೆ; ಪ್ರೀತಿಯಿಂದ ಮಾತ್ರ ಅದು ಸಾಧ್ಯ. ನನ್ನ ಜನರು ಯಾರಾದರೂ ನಿಮಗೆ ಅನ್ಯಾಯ ಮಾಡಿದ್ದರೆ ನಾನು ನಿಮ್ಮ ಕ್ಷಮೆ ಬೇಡುವೆ. ನಾನು ಪುಣೆಯಲ್ಲಿದ್ದಾಗ "ಅಸ್ಪೃಶ್ಯ" ವರ್ಗದ ಕೆಲವು ಜನರು ನನಗೆ ಹೀಗೆ ಹೇಳಿದರು– "ಹಿಂದೂಗಳು ತಮ್ಮ ಧೋರಣೆಯನ್ನು ಬದಲಿಸದಿದ್ದರೆ ನಾವು ಒತ್ತಾಯ ಮಾಡಬೇಕಾಗುವುದು" ಎಂದು. ಒತ್ತಾಯದಿಂದ ಅಸ್ಪೃಶ್ಯತಾ ನಿವಾರಣೆ ಎಂದಾದರೂ ಆದೀತೆ? "ಅಸ್ಪೃಶ್ಯ"ರ ಸದ್ಯದ ಸ್ಥಿತಿಯ ಸುಧಾರಣೆಯು ಇಂಥ ರೀತಿಯಿಂದ ಸಾಧ್ಯವಾದೀತೆ? ನೀವಾಗಲಿ,

ನಾನಾಗಲಿ ಸಾಂಪ್ರದಾಯಿಕ ಹಿಂದೂಗಳ ಮನಸ್ಸನ್ನು ಪರಿವರ್ತಿಸಲು ಒಂದೇ ಉಪಾಯವೆಂದರೆ ಅವರಿಗೆ ತಿಳಿಸಿ ಹೇಳುವುದು ಮತ್ತು ಸರಿಯಾಗಿ ನಡೆದುಕೊಳ್ಳುವುದು. ಅವರಲ್ಲಿ ಪರಿವರ್ತನೆಯಾಗುವತನಕ ನೀವು ಶಾಂತರೀತಿಯಿಂದ ಸಹಿಸಬೇಕು. ನಾನು ಯಾವಾಗಲೂ ನಿಮ್ಮ ನಿಮ್ಮೊಡನೆ ಇದ್ದು ದುಃಖದಲ್ಲಿ ಭಾಗಿಯಾಗುವೆ. ಉಳಿದ ಜಾತಿಯವರಿಗೆ ಮುಕ್ತವಿರುವ ದೇವಾಲಯಗಳಲ್ಲಿ ಪೂಜೆ ಮಾಡಲು ನಿಮಗೂ ಅಧಿಕಾರವಿರಬೇಕು. ಉಳಿದ ಜಾತಿಯ ಮಕ್ಕಳು ಹೋಗುವ ಶಾಲೆಗೆ ನಿಮ್ಮ ಮಕ್ಕಳು ಹೋಗಲು ಯಾವ ಆತಂಕವೂ ಇರಕೂಡದು. 'ವಾಯಿಸ್‌ರಾಯ್'ನ ಸ್ಥಾನವನ್ನು ಕೂಡ ಒಳಕೊಂಡು ದೇಶದಲ್ಲಿಯ ಯಾವುದೇ ಉಚ್ಚ ಅಧಿಕಾರಸ್ಥಾನಕ್ಕೆ ನಿಮಗೂ ಅರ್ಹತೆ ಇರಬೇಕು. ಇದು ನನ್ನ ಅಸ್ಪೃಶ್ಯತಾ ನಿವಾರಣೆಯ ಕಲ್ಪನೆ.

ನನ್ನ ಧರ್ಮವು ತೋರಿದ ಮಾರ್ಗದಿಂದ ಮಾತ್ರ ನಾನು ನಿಮಗೆ ಸಹಾಯ ನೀಡುವೆ. ಪಾಶ್ಚಾತ್ಯ ರೀತಿಗಳನ್ನು ನಾನು ಅನುಸರಿಸಬಯಸುವುದಿಲ್ಲ; ಏಕೆಂದರೆ ಆ ರೀತಿಗಳಿಂದ ಹಿಂದೂ ಧರ್ಮವನ್ನು ರಕ್ಷಿಸಲಾರೆ. ನಿಮ್ಮದು ಪವಿತ್ರವಾದ ಗುರಿ. ಸೈತಾನನ ಮಾರ್ಗದಿಂದ ಯಾರಾದರೂ ಪವಿತ್ರವಾದ ಗುರಿಯನ್ನು ಸಾಧಿಸಬಹುದೇ? ಆದ್ದರಿಂದ ಪಾಶವೀಶಕ್ತಿಯಿಂದ ನಿಮ್ಮ ಸ್ಥಿತಿಯನ್ನು ಸುಧಾರಿಸುವ ವಿಚಾರವನ್ನು ಬಿಟ್ಟುಬಿಡಬೇಕೆಂದು ನಾನು ನಿಮ್ಮನ್ನು ಕೇಳಿಕೊಳ್ಳುತ್ತೇನೆ. ಪರಮಾತ್ಮನನ್ನು ನಮ್ಮ ಹೃದಯದಲ್ಲಿ ಪ್ರಾಂಜಲ ರೀತಿಯಿಂದ ಧ್ಯಾನಿಸಿದರೆ ಮೋಕ್ಷವು ದೊರೆಯುವುದೆಂದು ಭಗವದ್ಗೀತೆಯು ಬೋಧಿಸುತ್ತದೆ. ಧಾನ್ಯವೆಂದರೆ ಪರಮಾತ್ಮನ ಕೈಂಕರ್ಯ. ಪರಮಾತ್ಮನ ಕೈಂಕರ್ಯದಿಂದ ಪರಮಾನಂದಮಯ ಮೋಕ್ಷವೇ ದೊರೆಯುವುದಾದರೆ, ಅಸ್ಪೃಶ್ಯತಾ ನಿವಾರಣೆಯು ಎಷ್ಟು ಬೇಗ ದೊರೆತೀತು! ಪರಮಾತ್ಮನ ಕೈಂಕರ್ಯವೆಂದರೆ ನಮ್ಮ ಆತ್ಮಶುದ್ಧಿಯ ವೃದ್ಧಿ. ಪ್ರಾರ್ಥನೆಯಿಂದ ಆತ್ಮಶುದ್ಧಿ ಮಾಡಿಕೊಳ್ಳೋಣ; ಎಂದರೆ ನಾವು ಅಸ್ಪೃಶ್ಯತೆಯನ್ನು ನಿವಾರಿಸುತ್ತೇವಲ್ಲದೆ ಸ್ವರಾಜ್ಯವನ್ನೂ ಬೇಗ ಪಡೆಯುತ್ತೇವೆ.

(ಬೆಳಗಾವಿಯಲ್ಲಿ ಜರುಗಿದ ಅಸ್ಪೃಶ್ಯತಾ ನಿವಾರಣೆಯ ಸಮ್ಮೇಲನದಲ್ಲಿ ಮಾಡಿದ ಭಾಷಣದಿಂದ)

(ಯಂಗ್ ಇಂಡಿಯಾ, 22-1-1925)

ಸುಧಾರಣೆಯಂತಹ ವಿಷಯಗಳಲ್ಲಿ ಸರಕಾರವು ಮಾರ್ಗದರ್ಶನ ಮಾಡಲಾರದು. ತಾನು ಆಳುತ್ತಿರುವ ಜನತೆಯ ಇಚ್ಛೆಯನ್ನು ತಿಳಿದುಕೊಂಡು ಅದನ್ನು ಕಾರ್ಯಗತಮಾಡುವುದೇ ಸರಕಾರದ ಕರ್ತವ್ಯ. ಎಂಥ ನಿರಂಕುಶ ಪ್ರಭುತ್ವವುಳ್ಳ ಸರಕಾರವಾದರೂ ತನ್ನ ಜನತೆಯು ಅರಗಿಸಿಕೊಳ್ಳಲಾಗದ ಸುಧಾರಣೆಯನ್ನು ಕೈಕೊಳ್ಳಲು ಮತ್ತು ಮುಂದುವರಿಸಲು ಇಚ್ಛೆಯುಳ್ಳದ್ದಾಗಿದೆ ಎಂಬುದನ್ನು ತಿಳಿದು ಪೂರ್ಣ ಸಮಾಧಾನ ಹೊಂದುತ್ತಿದ್ದೆ. ಅದನ್ನು ನಿಶ್ಚಿತಮಾಡಿಕೊಂಡ ಮೇಲೆ ಪ್ರತಿಯೊಬ್ಬ ವ್ಯಕ್ತಿಗೆ ಮತ್ತು ಪ್ರತಿಯೊಂದು ಹಳ್ಳಿಗೆ ಈ ಸುಧಾರಣೆಯ ಸಂದೇಶವನ್ನು ಮುಟ್ಟಿಸುತ್ತಿದ್ದೆ. ಸುವ್ಯವಸ್ಥಿತವಾದ ಮತ್ತು ಸತತವಾದ ಚಳವಳಿಯು ಪ್ರಗತಿಯ ಜೀವಾಳವಾಗಿದೆ. ನಾನು ನಿಮ್ಮ ಸ್ಥಾನದಲ್ಲಿದ್ದರೆ ಈ ಸುಧಾರಣೆಯು ಪೂರ್ಣವಾಗುವವರೆಗೆ ಸರಕಾರವನ್ನು ಸುಮ್ಮನಿರಗೊಡುತ್ತಿದ್ದಿಲ್ಲ. ಹೀಗೆಂದ ಮಾತ್ರಕ್ಕೆ ಸರಕಾರವನ್ನು ಪೇಚಿನಲ್ಲಿ ತೊಡಕಿಸುತ್ತಿದ್ದೆನೆಂದು ಅರ್ಥವಲ್ಲ. ತನಗೇ ಬೇಕಾದ ಸುಧಾರಣೆಯನ್ನು ಮಾಡಬೇಕಾದರೂ, ಒಳ್ಳೆಯ ಸರಕಾರವು ಅದಕ್ಕಾಗಿ ತನ್ನ ಜನತೆಯ ಸಹಕಾರ ಮತ್ತು ಚಳವಳಿಗಳನ್ನು ಸ್ವಾಗತಿಸುತ್ತಿದೆ. ಸವರ್ಣ ಹಿಂದೂಗಳು ತಮ್ಮ ಇಚ್ಛೆಯನ್ನು ಒಕ್ಕೊರಳಿನಿಂದ ವ್ಯಕ್ತಪಡಿಸಿದರೆ ಅಸ್ಪೃಶ್ಯತೆಯು ಮಾಯವಾಗುವುದು ಎಂಬುದರಲ್ಲಿ ನನಗೆ ಎಳ್ಳಷ್ಟೂ ಸಂದೇಹವಿಲ್ಲ. ನಮ್ಮ ಆಲಸ್ಯ ಮತ್ತು ಮೈಗಳ್ಳತನವನ್ನು ಸರಕಾರದ ಮೇಲೆ ಆರೋಪಿಸುವುದು ಅನ್ಯಾಯದ ಮಾರ್ಗ.

(ಯಂಗ್ ಇಂಡಿಯಾ, 20-10-1927)

* * *

ನಾನು ಅಸ್ಪೃಶ್ಯತಾ ನಿವಾರಣೆಯ ಬಗೆಗೆ ನೂರಾರು ಸಾರ್ವಜನಿಕ ಸಭೆಗಳಲ್ಲಿ ಮಾತನಾಡಿದಾಗಲೆಲ್ಲ, ಒಂದೆರಡು ಅಪವಾದಗಳನ್ನು ಬಿಟ್ಟರೆ, ಈ ವಿಷಯವನ್ನು ಯಾರೂ ವಿರೋಧಿಸಿಲ್ಲ. ಅನೇಕ ಜನರು ಅಸ್ಪೃಶ್ಯತೆಯನ್ನು ಖಂಡಿಸುವ ನಿರ್ಣಯಗಳನ್ನು ಕೈಕೊಂಡು ಆ ಬಗ್ಗೆ ಪ್ರತಿಜ್ಞೆಯನ್ನು ಕೂಡ ಮಾಡಿದ್ದಾರೆ. ಅಸಂಖ್ಯ ಪ್ರಸಂಗಗಳಲ್ಲಿ ಅವರು ತಮ್ಮ ಪ್ರತಿಜ್ಞೆಗೆ ದೇವರನ್ನೇ ಸಾಕ್ಷಿಯಾಗಿ ಇಟ್ಟುಕೊಂಡಿದ್ದಾರೆ. ಮತ್ತು ಈ ಪ್ರತಿಜ್ಞೆಯನ್ನು ಪೂರ್ಣಗೊಳಿಸಲು ಶಕ್ತಿಯನ್ನು ಪಾಲಿಸುವ ಆತನನ್ನು ಬೇಡಿಕೊಂಡಿದ್ದಾರೆ.

ಲಕ್ಷಾವಧಿ ಸವರ್ಣ ಹಿಂದೂಗಳ ಕರ್ತವ್ಯದ ಸಲುವಾಗಿ ನಾನು ಉಪವಾಸ ಕೈಕೊಂಡೆ; ಮತ್ತು ಅವರ ಸಹಜವಾದ, ಪ್ರೀತಿಯಿಂದ ಕೇವಲ ಐದು ದಿನಗಳಲ್ಲಿ ದೊಡ್ಡ ಬದಲಾವಣೆಯಾಯಿತು ಹಾಗೂ "ಯರವಡಾ ಒಪ್ಪಂದ"ವು* ಅಸ್ತಿತ್ವದಲ್ಲಿ ಬಂದಿತು. ಆ ಒಪ್ಪಂದದ ನಿರ್ಣಯಗಳನ್ನು ಸವರ್ಣ ಹಿಂದೂಗಳು ಕಾರ್ಯಗತಗೊಳಿಸದಿದ್ದರೆ ಮತ್ತೆ ನಾನು ಉಪವಾಸ ಕೈಕೊಳ್ಳಬೇಕಾಗುವುದು. ಸರಕಾರವು ತನ್ನ ಪಾಲಿನ ಕೆಲಸವನ್ನು ಬಹುಮಟ್ಟಿಗೆ ಮಾಡಿ ಮುಗಿಸಿದೆ. ಯರವಡಾ ಒಪ್ಪಂದದ ನಿರ್ಣಯಗಳ ಬಹು ಭಾಗವನ್ನು ಸವರ್ಣ ಹಿಂದೂಗಳು ಕಾರ್ಯಗತಗೊಳಿಸಬೇಕಾಗಿದೆ. ಇದುವರೆಗೆ ಕೀಳಾಗಿ ತಿಳಿಯಲ್ಪಟ್ಟ ತಮ್ಮ ಬಂಧು-ಭಗಿನಿಯರನ್ನು ಹಿಂದೂಗಳು ಈಗ ಸಮಾನರೆಂದು ಸ್ವೀಕರಿಸಬೇಕು. ಅವರನ್ನು ದೇವಾಲಯಗಳಿಗೆ, ಮನೆಗಳಿಗೆ, ಶಾಲೆಗಳಿಗೆ ಆಮಂತ್ರಿಸಿ ಕರೆದೊಯ್ಯಬೇಕು. ಹಳ್ಳಗಳಲ್ಲಿಯ 'ಅಸ್ಪೃಶ್ಯ'ರು ಇನ್ನು ಮೇಲೆ ತಾವು ಮುಕ್ತರೆಂದೂ, ಉಳಿದೆಲ್ಲರಿಗೆ ಸಮಾನರೆಂದೂ, ಅದೇ ದೇವರನ್ನು ಪೂಜಿಸಬೇಕೆಂದೂ ಭಾವನೆಯುಂಟಾಗುವಂತೆ ಸವರ್ಣ ಹಿಂದೂಗಳು ಕಾರ್ಯರೂಪಕ್ಕಿಳಿಸುವ ಬಗ್ಗೆ ನಾನು ಹೊಣೆಗಾರನೆಂದು ಡಾ. ಅಂಬೇಡ್ಕರ್, ರಾವ್ ಬಹಾದ್ದೂರ ರಾಜಾ ಮೊದಲಾದವರಿಗೆ ತಿಳಿಸಿದ್ದೇನೆ.

---

* "ಯರವಡಾ ಒಪ್ಪಂದ"ವೆಂದರೆ "ಅಸ್ಪೃಶ್ಯ"ರ ಧುರೀಣರು ಮತ್ತು ಉಳಿದ ಹಿಂದೂ ಜನರ ಪ್ರತಿನಿಧಿಗಳು 1932ರ ಸೆಪ್ಟೆಂಬರ್ ತಿಂಗಳಲ್ಲಿ ಗಾಂಧೀಜಿಯವರ, ಯರವಡಾ ಜೇಲಿನಲ್ಲಿದ್ದಾಗ ಮಾಡಿದ ಒಂದು ಒಪ್ಪಂದ. ಬ್ರಿಟಿಷ್ ಸರಕಾರವು ಆಗ ಅಸ್ಪೃಶ್ಯರನ್ನು ಹಿಂದೂಗಳಿಗಿಂತ ಬೇರೆಯಾದ ಜಾತಿ ಎಂದು ಬೇರ್ಪಡಿಸಿ ಅವರಿಗೆ ಪ್ರತ್ಯೇಕ ಪ್ರಾತಿನಿಧ್ಯ ಕೊಡಬಯಸಿದ್ದಿತು. ಆಗ ಗಾಂಧೀಜಿಯವರು 'ಅಸ್ಪೃಶ್ಯ'ರು ಹೀಗೆ ಹಿಂದುಗಳಿಂದ ಬೇರ್ಪಡಿಸುವುದರ ವಿರುದ್ಧ ಆಮರಣ ಉಪವಾಸ ಕೈಕೊಂಡರು. ತತ್ಪರಿಣಾಮವಾಗಿ ಹಿಂದೂ ಹಾಗೂ 'ಅಸ್ಪೃಶ್ಯ'ರ ಧುರೀಣರು ಗಾಂಧೀಜಿಯವರ ಸಮಕ್ಷಮ ಸಭೆ ಸೇರಿ ಈ "ಯರವಡಾ ಒಪ್ಪಂದ"ಕ್ಕೆ ಸಹಿ ಮಾಡಿದರು. ಆಗ ಎರಡೂ ಪಕ್ಷಗಳ ಸಂಯುಕ್ತ ಬೇಡಿಕೆಗೆ ಬ್ರಿಟಿಷ್ ಪ್ರಧಾನ ಮಂತ್ರಿಗಳು ಒಪ್ಪಲೇಬೇಕಾಯಿತು. ಗಾಂಧೀಜಿಯವರ ಉಪವಾಸದ ಪರಿಣಾಮವಾಗಿ ಅಸ್ಪೃಶ್ಯತಾ ನಿವಾರಣೆಗಾಗಿ ಸವರ್ಣ ಹಿಂದೂಗಳು ಎಲ್ಲ ಪ್ರಯತ್ನ ಮಾಡಬೇಕೆಂದೂ ನಿಶ್ಚಯಿಸಲಾಯಿತು. ಈ ನಿರ್ಣಯದ ಪರಿಣಾಮವಾಗಿ ಕೆಲಕಾಲದ ನಂತರ "ಹರಿಜನಸೇವಕ ಸಂಘ"ವು ಜನ್ಮತಾಳಿತು.

ನನ್ನ ಉಪವಾಸವು-ಅದು ಕೈಕೊಳ್ಳಲ್ಪಟ್ಟರೆ ಈ ಸುಧಾರಣೆಯನ್ನೇ ವಿರೋಧಿಸುವವರನ್ನು ಒತ್ತಾಯಪಡಿಸುವುದಕ್ಕಾಗಿ ಅಲ್ಲ; ಆದರೆ ಯಾರು ಅಸ್ಪೃಶ್ಯತೆಯನ್ನು ನಿವಾರಿಸಲು ಪ್ರತಿಜ್ಞೆಯನ್ನು ಕೈಕೊಂಡಿದ್ದರೋ ಅಂಥವರನ್ನು ಕೆಲಸಕ್ಕಾಗಿ ಎಚ್ಚರಿಸಲು ಮಾತ್ರ ಅವರು ತಮ್ಮ ಪ್ರತಿಜ್ಞೆಯನ್ನು ಭಂಗ ಮಾಡಿದರೆ ಅಥವಾ ಅವರು ಅದರಂತೆ ನಡೆಯಲು ಮೊದಲೇ ಇಚ್ಛೆಯಿಲ್ಲದವರಾಗಿದ್ದರೆ, ನನಗೆ ಜೀವನದಲ್ಲಿ ಆಸ್ಥೆಯೇ ಉಳಿಯುವುದಿಲ್ಲ. ನನ್ನ ದೃಷ್ಟಿಯಲ್ಲಿ, ಆತ್ಮಶುದ್ಧಿಗಾಗಿ ಮತ್ತು ಪರರ ಶುದ್ಧಿಗಾಗಿ ಉಪವಾಸಮಾಡುವುದು ಪ್ರಾಚೀನ ಕಾಲದಿಂದಲೂ ಇದ್ದದ್ದೇ; ಮಾನವನು ಪರಮಾತ್ಮನಲ್ಲಿ ವಿಶ್ವಾಸವಿಡುವವರೆಗೆ ಉಳಿಯತಕ್ಕದ್ದೇ ಆಗಿದೆ. ಉಪವಾಸವು ನೊಂದ ಹೃದಯವು ಪರಮಾತ್ಮನಿಗೆ ಮಾಡಿಕೊಂಡ ಪ್ರಾರ್ಥನೆ, ನನ್ನ ಅಂತರ್ವಾಣಿಯ ಪ್ರೇರಣೆಯಿಂದಲೇ ನಾನು ಉಪವಾಸ ಕೈಕೊಳ್ಳುವೆ; ಮತ್ತು ಸವರ್ಣ ಹಿಂದುಗಳು ತಿಳಿದೂ 'ಯರವಡಾ ಒಪ್ಪಂದ'ದ ನಿರ್ಣಯಗಳನ್ನು ಕಾರ್ಯರೂಪಕ್ಕಿಳಿಸಲು ಒಪ್ಪದಿದ್ದರೆ ಮಾತ್ರ ನಾನು ಉಪವಾಸ ಕೈಕೊಳ್ಳಬೇಕಾಗುವುದು.

–("ನನ್ನ ಆತ್ಮದ ವ್ಯಥೆ" (1933), 4–11–1932, ಪು.2–4)

* * *

ಧರ್ಮದ ವಿಷಯದಲ್ಲಿ ಒತ್ತಾಯವು ಸಲ್ಲದು; ಇಷ್ಟೇ ಅಲ್ಲ, ಯಾವುದೇ ವಿಷಯದಲ್ಲಿ ಒತ್ತಾಯವು ಸಲ್ಲದು. ಯಾವುದೇ ಜಾತಿ, ಪಂಥ, ಅಥವಾ ದೇಶದ ವ್ಯಕ್ತಿಯಿರಲಿ ಅವನ ವಿರುದ್ಧ ಯಾವುದೇ ಪ್ರಕಾರದ ಹಿಂಸೆಯು ಯೋಗ್ಯವಲ್ಲವೆಂಬ ನನ್ನ ಮತವು ಜನತೆಗೆ ಗೊತ್ತಿದೆ. ಆದ್ದರಿಂದ ಅಸ್ಪೃಶ್ಯತಾ ನಿವಾರಣೆಯ ಕಾರ್ಯದಲ್ಲಿ ತೊಡಗಿರುವವರು ನಾನು ಮತ್ತೊಮ್ಮೆ ಉಪವಾಸ ಪ್ರಾರಂಭಿಸಬಾರದೆಂದು ಸಲ್ಲದ ಉಪಾಯಗಳನ್ನು ಕೈಕೊಳ್ಳಬಾರದೆಂದು ನಾನು ಕೇಳಿಕೊಳ್ಳುತ್ತೇನೆ. ಹಾಗೆ ಅವರು ಮಾಡಿದ್ದೇ ಆದರೆ ನನ್ನ ಮರಣವನ್ನು ತ್ವರೆಗೊಳಿಸುವರು. ಯಾವ ಆಂದೋಲನದ ಸಲುವಾಗಿ ಪರಮಾತ್ಮನು ಆ ನನ್ನ ಚಿಕ್ಕ ಉಪವಾಸವನ್ನು ಪ್ರೇರಿಸಿದ್ದನೋ ಅಂಥ ಆಂದೋಲನವು ಅಧಃಪತನ ಹೊಂದಿದರೆ ನನಗೆ ಜೀವನ್ಮರಣ ಉಂಟಾದಂತೆಯೇ ಸರಿ. ಹರಿಜನರ ಅಥವಾ ಹಿಂದೂ ಧರ್ಮ ಉನ್ನತಿಯ ಕೆಲಸವು ಅವ್ಯವಸ್ಥಿತವಾದ ಜನರಿಂದ ಆಗದು. ಜಗತ್ತಿನಲ್ಲಿ ಅಲ್ಲದಿದ್ದರೂ ಭಾರತದಲ್ಲಿ ಇದು ಅತಿ ದೊಡ್ಡ ಧಾರ್ಮಿಕ

ಸುಧಾರಣೆಯ ಆಂದೋಲನವಾಗಿದೆ. ಇದರಲ್ಲಿ ಸುಮಾರು ನಾಲ್ಕು ಕೋಟಿ ಮಾನವಜೀವಿಗಳ ಕಲ್ಯಾಣದ ಪ್ರಶ್ನೆಯಡಗಿದೆ. ಈ ಸುಧಾರಣೆಯನ್ನು ಒಪ್ಪದ ಸಾಂಪ್ರದಾಯಿಕ ಜನರನ್ನು ನಾವು ವಿನಯದಿಂದಲೇ ಕಾಣಬೇಕು. ನಾವು ಅವರನ್ನು ಪ್ರೀತಿ, ಸ್ವಾರ್ಥತ್ಯಾಗ, ಪೂರ್ಣ ಆತ್ಮಸಂಯಮಗಳಿಂದ ಗೆಲ್ಲಬೇಕು. ನಮ್ಮ ಜೀವನದ ಪಾವಿತ್ರ್ಯವು ಅವರ ಹೃದಯದ ಮೇಲೆ ಪರಿಣಾಮ ಮಾಡಬೇಕು. ವಿರೋಧಿಗಳನ್ನು ನಮ್ಮ ಮಾರ್ಗಕ್ಕೆ ಒಪ್ಪುವಂತೆ ಮಾಡುವ ಸತ್ಯ ಮತ್ತು ಪ್ರೀತಿಗಳಲ್ಲಿ ನಾವು ವಿಶ್ವಾಸವನ್ನಿಡಬೇಕು.

ಅನೇಕ ವರ್ಷಗಳ ಈ ಅನ್ಯಾಯದಿಂದ ನಾಲ್ಕು ಕೋಟಿ ಮಾನವಜೀವಿಗಳನ್ನು ಪಾರುಮಾಡುವುದು ಕೇವಲ ಬಾಹ್ಯಾಡಂಬರಗಳಿಂದ ಸಾಧ್ಯವಿಲ್ಲ. ಇದಕ್ಕಾಗಿ ವಿಧಾಯಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗುವುದು. ಉದಾತ್ತ ಧಾರ್ಮಿಕ ಉದ್ದೇಶಗಳಿಂದ ಪ್ರೇರಿತವಾದ ಸಾವಿರಾರು ಪುರುಷರ, ಸ್ತ್ರೀಯರ, ಬಾಲಕ-ಬಾಲಕಿಯರ ಏಕೀಕೃತ ಶಕ್ತಿಯು ಈ ಮಹಾಕಾರ್ಯಕ್ಕೆ ಅವಶ್ಯವಾಗಿದೆ. ಆದ್ದರಿಂದ ನಾನು ಈ ಆಂದೋಲನದ ಕೇವಲ ಧಾರ್ಮಿಕ ಸ್ವರೂಪವನ್ನು ಒಪ್ಪದೆ ಇರುವವರಿಗೆ ಇದರಿಂದ ದಯವಿಟ್ಟು ನಿವೃತ್ತರಾಗಬೇಕೆಂದು ವಿನಯಪೂರ್ವಕ ಕೇಳಿಕೊಳ್ಳುತ್ತೇನೆ. ಯಾರಿಗೆ ವಿಶ್ವಾಸ ಮತ್ತು ಉತ್ಸಾಹಗಳು ಇವೆಯೋ ಅವರು ಕೆಲವರಿರಲಿ ಅಥವಾ ಬಹಳ ಜನರಿರಲಿ ಈ ಆಂದೋಲನವನ್ನು ಮುಂದುವರಿಸಲಿ. ಅಸ್ಪೃಶ್ಯತಾ ನಿವಾರಣೆಯಿಂದ ದೊಡ್ಡ ರಾಜಕೀಯ ಪರಿಣಾಮಗಳಾಗಬಹುದು; ಆದರೆ ಇದು ರಾಜಕೀಯ ಚಳವಳಿಯಲ್ಲ. ಇದು ಕೇವಲ ಹಿಂದೂ ಧರ್ಮವನ್ನು ಪರಿಶುದ್ಧಗೊಳಿಸುವ ಆಂದೋಲನವಾಗಿದೆ. ಮತ್ತು ಇಂಥ ಪರಿಶುದ್ಧಿಯು ಅತ್ಯಂತ ಶುದ್ಧವಾದ ಸಾಧನಗಳಿಂದ ಮಾತ್ರ ಉಂಟಾಗತಕ್ಕದ್ದು. ಪರಮಾತ್ಮನ ದಯೆಯಿಂದ, ಸಾವಿರಾರು ಅಲ್ಲದಿದ್ದರೂ, ನೂರಾರು ಇಂಥ ವ್ಯಕ್ತಿಗಳಾದರೂ ಭಾರತದ ಎಲ್ಲ ಎಡೆಗಳಲ್ಲಿ ಕಾರ್ಯನಿರತರಾಗಿದ್ದಾರೆ. ತಾಳ್ಮೆಯಿಲ್ಲದ ಸಂಶಯಾತ್ಮರು ದೂರ ನಿಂತು ಪರೀಕ್ಷಿಸಲಿ. ಆದರೆ ಅವರು ಒಳ್ಳೆಯ ಉದ್ದೇಶದಿಂದ ಬಂದು ಅವಸರದಿಂದ ಮತ್ತು ಸರಿಯಾದ ವಿಚಾರವಿಲ್ಲದೆ ಕೆಲಸ ಮಾಡಲು ಪ್ರಾರಂಭಿಸಿ ಈ ಆಂದೋಲನವನ್ನು ಕೆಡಿಸುವುದು ಬೇಡ.

("ನನ್ನ ಆತ್ಮದ ವ್ಯಥೆ", (1933), 7-11-1932, ಪು. 19-20)

ಮದ್ರಾಸದಲ್ಲಿ ಸನಾತನಿಗಳ ಸಭೆಯೊಂದರಲ್ಲಿ ಶ್ರೀ ಎ. ಎ. ಶ್ರೀನಿವಾಸ ಅಯ್ಯಂಗಾರರು ಮಾಡಿದ ಭಾಷಣದ ಪತ್ರಿಕೆಯ ವರದಿಯೊಂದನ್ನು ಗಾಂಧೀಜಿಯವರಿಗೆ ತೋರಿಸಲಾಯಿತು. ಆ ಭಾಷಣದಲ್ಲಿಯ ಈ ಭಾಗದೆಡೆಗೆ ಅವರ ಲಕ್ಷ್ಯವನ್ನು ಸೆಳೆಯಲಾಯಿತು.

"ದೇವಾಲಯ ಪ್ರವೇಶದ ಅಧ್ವರ್ಯುಗಳಾದ ಶ್ರೀ ಗಾಂಧಿಯವರು ಈ ಆಂದೋಲನವು ರಾಜಕೀಯವಲ್ಲವೆಂದೂ, ಅದು ಧಾರ್ಮಿಕ ಸ್ವರೂಪದ್ದೆಂದೂ ಸಾರಿದ್ದರು... ಆದರೆ ಭಾಷಣಕಾರರ ಅಭಿಪ್ರಾಯದಲ್ಲಿ ಇದು ಧಾರ್ಮಿಕ ಆಂದೋಲನವಾಗಿರದೆ ಒಂದು ದೊಡ್ಡ ರಾಜಕೀಯ ಚಳವಳಿಯಾಗಿದೆ. ಶ್ರೀ ಗಾಂಧಿಯವರ ರಾಜಕಾರಣಕ್ಕೆ ಸರಕಾರದ ವಿರುದ್ಧ ಸಂಯುಕ್ತ ವಿರೋಧಿ ಪಕ್ಷವನ್ನು ನಿರ್ಮಿಸಬೇಕಾಗಿದೆ. ಅದಕ್ಕಾಗಿ ಹರಿಜನರ ಸಹಾಯ ಬೇಕಾಗಿದೆ... ಸದ್ಯದ ಈ ದೇವಾಲಯ ಪ್ರವೇಶದ ಚಳವಳಿಯು ಕಾಂಗ್ರೆಸ್ಸಿಗೆ ಹೊಸ ಪಕ್ಷವನ್ನು ಸೇರಿಸಲು ಶ್ರೀ ಗಾಂಧಿ ಮತ್ತು ಅನುಯಾಯಿಗಳ ರಾಜಕೀಯ ಉಪಾಯವಾಗಿದೆ."

"ಶ್ರೀ ಅಯ್ಯಂಗಾರರು, ಒಬ್ಬ ನಿವೃತ್ತ ನ್ಯಾಯಾಧೀಶರು, ಹೀಗೆ ಜವಾಬ್ದಾರಿಯಿಲ್ಲದೆ ಮಾತನಾಡಿದುದನ್ನು ಕಂಡು ನನಗೆ ಸಖೇದಾಶ್ಚರ್ಯವಾಗಿದೆ."–ಎಂದರು ಗಾಂಧೀಜಿ. ಅವರು ಈ ಆಂದೋಲನದ ಇತಿಹಾಸವನ್ನು ಅವಲೋಕಿಸಿದ್ದರೆ ಗಾಂಧೀಜಿಯವರಿಗೆ ರಾಜಕಾರಣವೆಂದರೆ ಏನು ಎಂಬುದು ಗೊತ್ತಿರದ ಕಾಲದಿಂದಲೂ ಅಸ್ಪೃಶ್ಯತಾ ನಿವಾರಣೆಯು ಅವರಿಗೆ ಅತಿ ಮಹತ್ವದ ಪ್ರಶ್ನೆಯಾಗಿದ್ದಿತು ಎಂಬುದು ಅವರಿಗೆ ತಿಳಿಯುತ್ತಿತ್ತು. ಗಾಂಧೀಜಿಯವರು ಚಳವಳಿಯ ಧಾರ್ಮಿಕವಲ್ಲದೆ ರಾಜಕೀಯ ಸ್ವರೂಪಕ್ಕೆ ಮಹತ್ವ ಕೊಟ್ಟಿದ್ದರೆ ಅವರು ತಮ್ಮ ಕಾರ್ಯಕ್ರಮದಿಂದ ಜನಪ್ರಿಯವಲ್ಲದ ಈ ದೇವಾಲಯ ಪ್ರವೇಶದ ಅಂಶವನ್ನು ತೆಗೆದುಹಾಕುತ್ತಿದ್ದರು; ಕೇವಲ ಆರ್ಥಿಕ ಮತ್ತು ಶೈಕ್ಷಣಿಕ ಸ್ವರೂಪಕ್ಕೆ ಮಾತ್ರ ಮಹತ್ವ ಕೊಡುತ್ತಿದ್ದರು. ಆದರೆ ಅವರು ತಮ್ಮ ಜನಪ್ರಿಯತೆಯನ್ನು ಪಣಕ್ಕೆ ಹಚ್ಚಿ ದೇವಾಲಯ ಪ್ರವೇಶದ ಚಳವಳಿಯನ್ನೂ ಮುಂದುವರಿಸುತ್ತಿದ್ದಾರೆ. ಏಕೆಂದರೆ ಹರಿಜನರಿಗೆ ದೇವಾಲಯ ಪ್ರವೇಶವಿಲ್ಲದೆ ಹಿಂದೂ ಧರ್ಮದಿಂದ ಅಸ್ಪೃಶ್ಯತೆಯನ್ನು ನಿವಾರಿಸಿದಂತಾಗುವುದಿಲ್ಲವೆಂದು ಅವರು ನಂಬಿದ್ದಾರೆ.

ಗಾಂಧೀಜಿ ಮುಂದುವರಿದು ಹೀಗೆ ಹೇಳಿದರು:

'ಹರಿಜನರನ್ನು ಕೀಳಾಗಿ ಕಾಣದೆ ಅವರ ಆರ್ಥಿಕ ಮತ್ತು ಇತರ ಲೌಕಿಕ ಉನ್ನತಿಯನ್ನು ಮಾಡಬಯಸುವೆವೆಂದು ಹೇಳುವ ಶ್ರೀ ಅಯ್ಯಂಗಾರರಂಥ ಸನಾತನಿಗಳಿಗೆ ನಾನೊಂದು ಸೂಚನೆ ಮಾಡಬಯಸುತ್ತೇನೆ. ಅವರು "ಅಸ್ಪೃಶ್ಯ ಸೇವಕ ಸಂಘ"ವನ್ನು ಅದಕ್ಕೆ ಹಣ ಸಹಾಯಮಾಡಿ ಹರಿಜನರ ಲೌಕಿಕ ಹಿತರಕ್ಷಣೆಯ ಕಾರ್ಯವನ್ನು ಮಾಡಲಿ,–ಮತ್ತು ಈ ದೇವಾಲಯ ಪ್ರವೇಶದ ಚಳವಳಿಯನ್ನು ನನಗೆ ಮತ್ತು ನನ್ನಂತೆಯೇ ವಿಚಾರವುಳ್ಳ ಇತರರಿಗೆ ಬಿಟ್ಟುಕೊಡಲಿ. ಆ ಸಂಘದಲ್ಲಿ ಕೆಲವೇ ಕಾಂಗ್ರೆಸಿಗರಿದ್ದಾರೆಂಬುದು ಶ್ರೀ ಅಯ್ಯಂಗಾರರಿಗೆ ಗೊತ್ತಿರಬಹುದು. ಅದರಲ್ಲಿ ಅನೇಕ ಪ್ರಮುಖ 'ಲಿಬರಲ್' ಪಕ್ಷದವರಿದ್ದಾರೆ. ನಿಜವಾಗಿಯೂ ಸನಾತನಿಗಳು ಆ ಸಂಘಕ್ಕೆ ಹಣ ಮತ್ತು ಕಾರ್ಯಕರ್ತರನ್ನು ಒದಗಿಸಿ ಆ ಸಂಘವನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು ಅದರ ಉಪಯೋಗವನ್ನು ಹೆಚ್ಚಿಸಬಹುದು. ಇದು ಅವರಿಗೆ ಒಪ್ಪಿಗೆಯಾಗದಿದ್ದರೆ ಮತ್ತೊಂದು ಸಂಸ್ಥೆಯನ್ನೇ ಸ್ಥಾಪಿಸಿ, ಭಾರತದಲ್ಲೆಲ್ಲ ಅದರ ಶಾಖೆಗಳನ್ನು ಹರಡಿ, ಹರಿಜನರ ಹೃದಯವನ್ನೂ ಕೃತಜ್ಞತೆಯನ್ನೂ ಸಂಪಾದಿಸಬಹುದು. ನಾನು ಮಾತ್ರ ದೇವಾಲಯ ಪ್ರವೇಶದ ಆಂದೋಲನವನ್ನು ಮುಂದುವರಿಸುತ್ತೇನೆ. ಮತ್ತು ಅದು ಹೇಗೆ ಒಂದೇ ಏಟಿಗೆ ಹರಿಜನರನ್ನೂ, ಸವರ್ಣ ಹಿಂದೂಗಳನ್ನೂ ಉದ್ಧಾರಮಾಡುವುದೆಂಬುದನ್ನೂ, ಪರಿಶುದ್ಧಗೊಳಿಸುವುದೆಂಬುದನ್ನೂ, ಮತ್ತು ಸಹಜವಾಗಿಯೇ ಹರಿಜನರ ಲೌಕಿಕ ಹಿತವನ್ನೂ ಉಂಟುಮಾಡುವುದೆಂಬುದನ್ನೂ ತೋರಿಸುವೆ.

("ನನ್ನ ಆತ್ಮದ ವ್ಯಥೆ" (1933), 27–1–1933; ಪುಟ 142–143)

* * *

ದೇವಾಲಯ ಪ್ರವೇಶ

ಅಸ್ಪೃಶ್ಯತಾ ನಿವಾರಣೆಯ ಆಂದೋಲನವು ದಿನದಿನಕ್ಕೆ ಹೆಚ್ಚು ಪ್ರಗತಿಯನ್ನು ಸಾಧಿಸುತ್ತದೆ. ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ಅಖಿಲ ಭಾರತದ ಪ್ರತಿನಿಧಿಗಳಾದ ಹಿಂದೂ ಧುರೀಣರು ಸಭೆ ಸೇರಿ ಅಸ್ಪೃಶ್ಯತೆಯನ್ನು ವಿರೋಧಿಸುವ ಗೊತ್ತುವಳಿಯನ್ನು ಸ್ವೀಕರಿಸಿದರು. ಸಾಧ್ಯವಾದರೆ ಈ ಬ್ರಿಟಿಷ್ ಆಡಳಿತೆಯಲ್ಲಿಯೇ ಅಥವಾ ಅದಾಗದಿದ್ದರೆ ಭಾರತಕ್ಕೆ ಸ್ವಾತಂತ್ರ್ಯ ದೊರೆತ ಮೇಲೆ ಕಾಯಿದೆಯಿಂದ ಅಸ್ಪೃಶ್ಯತೆಯನ್ನು ನಿವಾರಿಸುವ ಬಗ್ಗೆ ಪ್ರತಿಜ್ಞೆ ಮಾಡಿದರು.

* * *

ನಿವಾರಿಸಲ್ಪಡಬೇಕಾದ ಅಸ್ಪೃಶ್ಯತೆಯ ಗುರುತುಗಳಲ್ಲಿ ಹರಿಜನರಿಗೆ ದೇವಾಲಯ ಪ್ರವೇಶವಿಲ್ಲದಿರುವುದೂ ಒಂದಾಗಿದೆ. ಭಾರತದಲ್ಲಿ ಸ್ಥಾಪಿತವಾದ ಬ್ರಿಟಿಷ್ ನ್ಯಾಯಾಲಯಗಳು ಈ ಕೆಟ್ಟ ರೂಢಿಯನ್ನು ಲಕ್ಷಿಸಿದ್ದವು: "ಅಸ್ಪೃಶ್ಯ"ರು ಕೆಲವು ಕೃತಿಗಳನ್ನು ಮಾಡಿದರೆ, ಅವು 'ಬ್ರಿಟಿಷ್ ಇಂಡಿಯಾ ಪೀನಲ್ ಕೋಡಿ'ನ ಅನ್ವಯ ಅಪರಾಧವೆಂದು ಗಣಿಸಲ್ಪಡುತ್ತಿದ್ದವು. ಹೀಗಾದ್ದರಿಂದ 'ಅಸ್ಪೃಶ್ಯ'ನೊಬ್ಬನು ಹಿಂದೂ ದೇವಾಲಯವನ್ನು ಪ್ರವೇಶಿಸಿದರೆ ಅದು 'ಇಂಡಿಯನ್ ಪೀನಲ್ ಕೋಡಿ'ನ ಅನ್ವಯ ಅಪರಾಧವಾಗಿ ಅವನು ಶಿಕ್ಷೆಗೆ ಅರ್ಹನಾಗುತ್ತಿದ್ದನು.

ಆದ್ದರಿಂದ ದೇವಾಲಯ ಪ್ರವೇಶದ ಆಂದೋಲನವು ಮುಂದುವರಿಯುವುದಕ್ಕಿಂತ ಮೊದಲು ಈ ವಿಸಂಗತಿಯನ್ನು ನಿವಾರಿಸುವುದು ಅಗತ್ಯವಾಗಿದೆ. ಇದೇ ಕಾರಣದ ಸಲುವಾಗಿ ಕೇಂದ್ರ ವಿಧಾನಸಭೆಯಲ್ಲಿ ಎರಡು ಮಸೂದೆಗಳನ್ನು ಮಂಡಿಸುವ ಬಗ್ಗೆ ಶ್ರೀರಂಗ ಅಯ್ಯರ್ ಅವರು ನೋಟೀಸು ಕೊಟ್ಟಿದ್ದಾರೆ.

ಸನಾತನಿ ಹಿಂದೂಗಳ ಬಗ್ಗೆ ನನ್ನಲ್ಲಿ ಗೌರವಿರುವುದಾದರೂ, ಅವರು ಏಕೆ "ಧರ್ಮವು ಗಂಡಾಂತರ ಪರಿಸ್ಥಿತಿಯಲ್ಲಿದೆ" ಎಂದು ಕೂಗುವರೋ ನನಗೆ ತಿಳಿಯದು. ಈ ಎರಡೂ ಮಸೂದೆಗಳ ಪ್ರಕಾರ ಆಯಾ ದೇವಾಲಯಕ್ಕೆ ಹೋಗುವ ಜನರ ಬಹುಮತದ ವಿರುದ್ಧ ಹಿಂದೂ ದೇವಾಲಯವನ್ನು

ಹರಿಜನರಿಗೆ ಮುಕ್ತ ಮಾಡುವುದಿಲ್ಲ. ಎರಡನೆಯ ಮಸೂದೆಯಲ್ಲಿ ಸ್ಪಷ್ಟವಾಗಿ ಹಾಗೆಂದು ಹೇಳಲಾಗಿದೆ. ಮೊದಲನೆಯ ಮಸೂದೆಯಲ್ಲಿ ಯಾವುದೇ ಹರಿಜನರಿಗೆ ಒತ್ತಾಯದಿಂದ ದೇವಾಲಯ ಪ್ರವೇಶಿಸಲು ಬರುವುದಿಲ್ಲ. ಸುಧಾರಕರು ತಮ್ಮ ವಿರೋಧಿಕರಿಗೆ ಯಾವುದೇ ಬಗೆಯ ಒತ್ತಾಯಮಾಡಲು ಬಯಸುವುದಿಲ್ಲ.

ದೇವಾಲಯ ಪ್ರವೇಶವು ಹರಿಜನರಿಗೇ ಬೇಡವಾಗಿದೆಯೆಂದೂ, ಅವರಿಗೆ ಕೇವಲ ತಮ್ಮ ಆರ್ಥಿಕ ಮತ್ತು ರಾಜಕೀಯ ಸ್ಥಿತಿಯಲ್ಲಿ ಸುಧಾರಣೆ ಬೇಕಾಗಿದೆ ಎಂದೂ ಹೇಳಲಾಗುತ್ತಿದೆ. ಸುಧಾರಕರಿಗೂ ಅದೇ ಬೇಕಾಗಿದೆ. ಆದರೆ ಹರಿಜನರಿಗೆ ಧಾರ್ಮಿಕ ಸಮಾನತೆ ಕೊಡಲ್ಪಟ್ಟರೆ ಅವರ ಇತರ ಲೌಕಿಕ ಹಿತವು ತೀವ್ರವಾಗಿ ಆಗುವುದೆಂದು ಸುಧಾರಕರು ನಂಬಿದ್ದಾರೆ. ಹರಿಜನರಿಗೆ ದೇವಾಲಯ ಪ್ರವೇಶವೇ ಬೇಕಾಗಿಲ್ಲವೆಂಬ ಮಾತನ್ನು ಸುಧಾರಕನು ನಂಬಲು ಸಿದ್ಧನಿಲ್ಲ. ಆದರೆ ಹರಿಜನರು ಸವರ್ಣ ಹಿಂದೂಗಳ ಬಗ್ಗೆ ಮತ್ತು ಹಿಂದೂ ಧರ್ಮದ ಬಗ್ಗೆ ಬಹಳ ತಿರಸ್ಕಾರ ತಾಳಿದ್ದರಿಂದ ಅವರಿಂದ ಯಾವುದನ್ನೂ ಅಪೇಕ್ಷಿಸುವುದಿಲ್ಲವೆಂದು ಅವರು ಹೇಳುತ್ತಿರಬಹುದು. ಹರಿಜನರು ಬಹಳ ಅಸಂತುಷ್ಟರಾಗಿ ಹಿಂದೂ ಧಾರ್ಮಿಕ ವಾತಾವರಣದಿಂದ ದೂರವೇ ಉಳಿಯಲು ಬಯಸಬಹುದು. ಇದು ನಿಜವಾದಲ್ಲಿ ಆಮೇಲೆ ಹಿಂದೂಗಳು ಎಷ್ಟು ಪಶ್ಚಾತ್ತಾಪಪಟ್ಟರೂ ವ್ಯರ್ಥವಾಗಬಹುದು.

ಅಸ್ಪೃಶ್ಯತೆಯು ಹಿಂದೂ ಧರ್ಮದ ಕಲಂಕವೆಂದು ಭಾವಿಸುವ ಸವರ್ಣ ಹಿಂದೂಗಳು ಅಸ್ಪೃಶ್ಯತೆಯ ಪಾಪದ ಸಲುವಾಗಿ ಪ್ರಾಯಶ್ಚಿತ್ತ ತೆಗೆದುಕೊಳ್ಳಲೇಬೇಕು. ಆದ್ದರಿಂದ ಹರಿಜನರ ದೇವಾಲಯ ಪ್ರವೇಶ ಮಾಡಲು ಬಯಸಲಿ ಅಥವಾ ಬಯಸದಿರಲಿ, ಸವರ್ಣ ಹಿಂದೂಗಳು ತಮ್ಮ ದೇವಾಲಯಗಳನ್ನು ಉಳಿದ ಹಿಂದೂಗಳಿಗೆ ಯಾವ ಪ್ರಕಾರ ಮುಕ್ತವಿಟ್ಟಿರುವರೋ ಅದೇ ಪ್ರಕಾರ ಶೂದ್ರರಿಗಾಗಿ ತೆರೆದಿಡಲೇಬೇಕು. ಹರಿಜನರಿಗೆ ದೇವಾಲಯದಲ್ಲಿ ಪ್ರವೇಶ ಕೊಡದೆ ಇರುವುದು ತಾನು ಮುಂಬಯಿಯಲ್ಲಿ ಸೆಪ್ಟೆಂಬರ ತಿಂಗಳಲ್ಲಿ ಸ್ವೀಕರಿಸಿದ ಪ್ರತಿಜ್ಞೆಯ ಭಂಗವೆಂದು ಪ್ರತಿಯೊಬ್ಬ ಸ್ವಾಭಿಮಾನಿಯಾದ ಹಿಂದೂವು ಭಾವಿಸಬೇಕು. ಯಾರು ಆಗ ಹರಿಜನರಿಗಾಗಿ ದೇವಾಲಯಗಳನ್ನು ಮುಕ್ತವಾಗಿಸುವೆವೆಂದು ಜಗತ್ತಿಗೂ, ಪರಮಾತ್ಮನಿಗೂ ವಚನವನ್ನು ಕೊಟ್ಟರೋ ಅವರು ತಮ್ಮ ವಚನ ಪೂರ್ಣ

ಮಾಡುವುದಕ್ಕೆ ಅವಶ್ಯಬಿದ್ದರೆ, ತಮ್ಮದೆಲ್ಲವನ್ನೂ ತ್ಯಾಗ ಮಾಡಬೇಕು. ದೇವಾಲಯ ಪ್ರವೇಶವು ಒಂದು ಆಧ್ಯಾತ್ಮಿಕ ಕೃತಿಯಾಗಿದ್ದು ಅದು "ಅಸ್ಪೃಶ್ಯ"ರಿಗೆ ಸ್ವಾತಂತ್ರ್ಯದ ಸಂದೇಶ ಸಾರುವುದು ಜೊತೆಗೆ ದೇವರೆದುರು ತಾವು ಜಾತಿಬಾಹಿರರಲ್ಲವೆಂದು ಭರವಸೆ ಕೊಡಬಲ್ಲದು.

('ಹರಿಜನ' 11-2-1933)

ಇದೊಂದು ವಿಚಿತ್ರ ಪರಿಸ್ಥಿತಿಯಾಗಿದೆ; ದಕ್ಷಿಣ ಆಫ್ರಿಕೆಯಲ್ಲಿ ನಮ್ಮ ದೇಶಬಾಂಧವರನ್ನು ಅಯೋಗ್ಯವಾಗಿ ನಡೆಯಿಸಿಕೊಂಡರೆ ನಾವು ಅದನ್ನು ಸಹಿಸುವುದಿಲ್ಲ. ನಾವು ಸ್ವರಾಜ್ಯವನ್ನು ಸ್ಥಾಪಿಸಲು ಆತುರರಾಗಿದ್ದೇವೆ; ಆದರೆ ನಾವು ಹಿಂದೂಗಳು ನಮ್ಮ ಧರ್ಮದ ಅನುಯಾಯಿಗಳಲ್ಲಿ ಐದರಲ್ಲೊಂದು ಪಾಲು ಜನರನ್ನು ನಾಯಿಗಳಿಗಿಂತ ಕೀಳಾಗಿ ನಡೆಸಿಕೊಳ್ಳುವುದು ನಮಗೆ ವಿಚಿತ್ರವೆನಿಸುವುದಿಲ್ಲ! ನಾಯಿಗಳು ಕೂಡ ಅಸ್ಪೃಶ್ಯ ಪ್ರಾಣಿಗಳಲ್ಲ; ಇತ್ತೀಚಿನ ನಾವು ಕೆಲವರು ಮನೆಯಲ್ಲಿ ಅವುಗಳನ್ನು ನಮ್ಮ ಹತ್ತಿರವೇ ಪ್ರೀತಿಯಿಂದ ಕೂಡಿಸಿಕೊಳ್ಳುತ್ತೇವೆ.

ಈ ಅನ್ಯಾಯವನ್ನು ನಿವಾರಿಸಲು ಎಷ್ಟೋ ಪ್ರಯತ್ನ ನಡೆದುದೇನೋ ನಿಜ. ಆದರೆ ಹರಿಜನನೊಬ್ಬನು ದೇವಾಲಯವನ್ನು ಪ್ರವೇಶಿಸಿದರೆ ಅವನ ಕ್ರಿಮಿನಲ್ ಖಟ್ಲೆ ನಡೆಯುವಂತಹ ಸ್ಥಿತಿ ಇರುವವರೆಗೆ ಅಸ್ಪೃಶ್ಯತಾ ನಿವಾರಣೆಯ ಕೆಲಸ ಇದುವರೆಗೆ ಆದುದು ಅತ್ಯಲ್ಪವೆಂದೇ ಹೇಳಬೇಕು. ಹರಿಜನರಿಗೆ ಹಿಂದೂ ದೇವಾಲಯಗಳನ್ನು ಪ್ರವೇಶಿಸುವ ಹಕ್ಕು ದೊರೆಯಬೇಕು; ರಾಷ್ಟ್ರೀಯ ಶಾಲೆಗಳಿಗೆ ಅವರ ಮಕ್ಕಳು ನಿರ್ಭೀತಿಯಿಂದ ಬರುವ ಹಕ್ಕು ದೊರೆಯಬೇಕು. ದಕ್ಷಿಣ ಆಫ್ರಿಕೆಯಲ್ಲಿಯ ನಮ್ಮ ದೇಶಬಾಂಧವರಿಗೆ ಯುರೋಪಿಯನರು ಯಾವ ಹಕ್ಕು-ಬಾಧ್ಯತೆಗಳನ್ನು ಕೊಡಬೇಕೆಂದು ನಾವು ಕೇಳುತ್ತೇವೆಯೋ ಆ ಹಕ್ಕುಗಳನ್ನು ನಾವು ಹರಿಜನರಿಗೆ ಕೊಡಲೇಬೇಕು.

(ಯಂಗ್ ಇಂಡಿಯಾ, 24-1-1926)

* * *

ಒಬ್ಬ ನಿಷ್ಠಾವಂತ, ಆದರೆ ಅತ್ಯಾತುರವುಳ್ಳ, ಕಾರ್ಯಕರ್ತರು ಹರಿಜನರ ಸಲುವಾಗಿ ದೇವಾಲಯ ಮತ್ತು ಸಾರ್ವಜನಿಕ ಸ್ಥಳಗಳನ್ನು ಮುಕ್ತವಾಗಿಸಲು ಪ್ರಯತ್ನಿಸುತ್ತಿದ್ದಾರೆ. ಅವರು ತಮ್ಮ ಆತುರದಲ್ಲಿ ಹೀಗೆ ಬರೆಯುತ್ತಾರೆ:

"ಈ ಸಾಂಪ್ರದಾಯಿಕ ಹಿಂದೂಗಳು ಅಸ್ಪೃಶ್ಯತಾ ನಿವಾರಣೆಯ ಮಾರ್ಗದಲ್ಲಿ ಮುಂದುವರಿಯಲು ಪ್ರಾರಂಭಿಸುವರೆಂದು ನಾವು ನಿರೀಕ್ಷಿಸುವುದು ವ್ಯರ್ಥ. ಒತ್ತಾಯಮಾಡಿದ ವಿನಾ ಅವರು ಒಂದು ಹೆಜ್ಜೆ ಮುಂದುವರೆಯುವುದಿಲ್ಲ. ಅಸ್ಪೃಶ್ಯತೆಯನ್ನು ನಿವಾರಿಸಲು ಪ್ರಬಲವಾದ ಉಪಾಯಗಳನ್ನು ಕೈಕೊಳ್ಳಲೇಬೇಕು. ಆದ್ದರಿಂದ ಕಾರ್ಯಕರ್ತರು ಮತ್ತು ಹರಿಜನರು ದೇವಾಲಯಗಳ ದ್ವಾರದಲ್ಲಿ ನಿಂತು ಸಾಂಪ್ರದಾಯಿಕ ಹಿಂದೂಗಳು ಒಳಗೆ ಪ್ರವೇಶಿಸದಂತೆ ಸತ್ಯಾಗ್ರಹ ಹೂಡಿದರೆ ಯೋಗ್ಯವಾದೀತೆ? ಈ ಬಗ್ಗೆ ತಾವು ತಮ್ಮ ಅಭಿಪ್ರಾಯವನ್ನು ದಯವಿಟ್ಟು ತಿಳಿಸಬೇಕಾಗಿ ಬೇಡುತ್ತೇನೆ. ಮಾಡಿಕೊಂಡ ಬಿನ್ನಹಗಳೆಲ್ಲ ಅವರ ಮೇಲೆ ಏನೂ ಪರಿಣಾಮ ಮಾಡಲಿಲ್ಲ. ಹೀಗೆಯೇ ಬಿನ್ನಹಮಾಡುತ್ತ ವೇಳೆ ಕಳೆದರೆ, ನನ್ನ ನಮ್ರ ಅಭಿಪ್ರಾಯದಲ್ಲಿ, ಕೇವಲ ವ್ಯರ್ಥವಾಗಿ ಕಾಲ ಕಳೆದಂತಾಗುವುದು."

ಹೀಗೆ ದ್ವಾರಗಳಲ್ಲಿ ನಿಂತು ದಾರಿಯನ್ನು ಕಟ್ಟಿದರೆ ಅದು ಒತ್ತಾಯಮಾಡಿದಂತಾಗುವುದು. ಧಾರ್ಮಿಕ ಅಥವಾ ಇತರ ಯಾವುದೇ ಸುಧಾರಣೆಯಲ್ಲಿ ಒತ್ತಾಯಕ್ಕೆ ಅವಕಾಶವಿಲ್ಲ. ಅಸ್ಪೃಶ್ಯತಾ ನಿವಾರಣೆಯ ಆಂದೋಲನವು ಆತ್ಮಶುದ್ಧಿಯ ಆಂದೋಲನವಾಗಿದೆ. ಯಾವನೊಬ್ಬನ ಮನಸ್ಸಿನ ವಿರುದ್ಧ ನಾವು ಅವನನ್ನು ಪರಿಶುದ್ಧಗೊಳಿಸಲಾರೆವು. ಆದ್ದರಿಂದ, ಸಾಂಪ್ರದಾಯಿಕ ಜನರಿಗೆ ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ ನಾವು ಒತ್ತಾಯವನ್ನು ಮಾಡಕೂಡದು. ಅಸ್ಪೃಶ್ಯತಾ ನಿವಾರಣೆಯನ್ನು ಅವಶ್ಯವೆಂದು ಒಪ್ಪುವುದಕ್ಕಿಂತ ಮೊದಲು ನಮ್ಮಲ್ಲಿಯ ಅನೇಕರು ಈಗಿನ ಸಾಂಪ್ರದಾಯಿಕ ಹಿಂದೂಗಳಂತೆ ಇದ್ದೆವೆಂಬುದನ್ನು ನಾವು ಮರೆಯತಕ್ಕದ್ದಲ್ಲ. ಆಗ ನಾವು ಯಾರಾದರೂ ದೇವಾಲಯದ ಬಾಗಿಲುಗಳಲ್ಲಿ ನಿಂತು ನಮ್ಮ ದಾರಿಯನ್ನು ಕಟ್ಟಿದ್ದರೆ ಅದು ನಮ್ಮ ಮನಸ್ಸಿಗೆ ಬರುತ್ತಿದ್ದಿಲ್ಲ; ಏಕೆಂದರೆ ಆಗ ನಾವೂ ಕೂಡ ಹರಿಜನರು ದೇವಾಲಯ ಪ್ರವೇಶಿಸಬಾರದೆಂಬ ಅಭಿಪ್ರಾಯವುಳ್ಳವರಾಗಿದ್ದೆವು. ಅದರಂತೆಯೇ ದೇವಾಲಯಗಳಿಗೆ ಬರುವ ಸಾಂಪ್ರದಾಯಿಕ ಹಿಂದೂಗಳ ದಾರಿಯನ್ನು ನಾವು ಕಟ್ಟಬಾರದು.

"ಸತ್ಯಾಗ್ರಹ" ಎಂಬ ಶಬ್ದವು ಅನೇಕ ಸಲ ಬಹಳ ಸುಲಭವಾಗಿ ಉಪಯೋಗಿಸಲ್ಪಡುತ್ತದೆ. ಮತ್ತು ಹಿಂಸೆಯನ್ನು ಮುಚ್ಚುವುದಕ್ಕೂ ಅದು ಉಪಯೋಗಿಸಲ್ಪಡುತ್ತದೆ. ಆದರೆ ಆ ಶಬ್ದದ ಕರ್ತೃವೆಂದು ನಾನು ಹೇಳುವುದೇನೆಂದರೆ-ಅದು ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ ವಿಚಾರ, ಶಬ್ದ ಅಥವಾ ಕೃತಿಗಳಲ್ಲಿ ಯಾವುದೇ ಪ್ರಕಾರದ ಹಿಂಸೆಗೆ ಆಸ್ಪದ ಕೊಡುವುದಿಲ್ಲ. ಒಬ್ಬ ವಿರೋಧಕನಿಗೆ ಕೇಡನ್ನು ಬಯಸುವುದು ಅಥವಾ ಅವನಿಗೆ ನೋವನ್ನುಂಟುಮಾಡುವ ಉದ್ದೇಶದಿಂದಲೇ ಬಿರುಸು ಮಾತುಗಳನ್ನಾಡುವುದು ಸತ್ಯಾಗ್ರಹಕ್ಕೆ ವಿರುದ್ಧವಾಗಿದೆ. ಸತ್ಯಾಗ್ರಹದ ದೃಷ್ಟಿಯಲ್ಲಿ ಆ ಕೆಟ್ಟ ವಿಚಾರ ಅಥವಾ ಮಾತು, ಸಿಟ್ಟಿನ ಭರದಲ್ಲಿ ಹಿಂಸೆಯನ್ನಾಚರಿಸಿ ಮರುಕ್ಷಣವೇ ಪಶ್ಚಾತ್ತಾಪಪಟ್ಟು ಮರೆತುಬಿಟ್ಟ ಪ್ರತ್ಯಕ್ಷ ಹಿಂಸೆಗಿಂತ ಹೆಚ್ಚು ಭಯಾವಹವಾದುದು. ಸತ್ಯಾಗ್ರಹವು ಕೋಮಲವಾದುದು; ಅದು ಯಾರನ್ನೂ ನೋಯಿಸುವುದಿಲ್ಲ. ಅದು ಕೋಪ ಅಥವಾ ಮತ್ಸರದ ಪರಿಣಾಮವಾಗಿರಕೂಡದು. ಅದು "ಒತ್ತಾಯ"ದ ಕಲ್ಪನೆಗೆ ತೀರ ವಿರುದ್ಧವಾದುದಾಗಿದೆ. ಹಿಂಸೆಯ ಪೂರ್ಣ ವಿರುದ್ಧವಾದ ಕಲ್ಪನೆಯೆಂದರೆ ಸತ್ಯಾಗ್ರಹ.

ಹೀಗಿದ್ದರೂ ನನ್ನ ಸುದ್ದಿಗಾರರು ಹೇಳುವ "ಅಸ್ಪೃಶ್ಯತೆಯನ್ನು ನಿವಾರಿಸಲು ಪ್ರಬಲವಾದ ಉಪಾಯಗಳನ್ನು ಕೈಕೊಳ್ಳಲೇಬೇಕು" ಎಂಬ ಮಾತನ್ನು ನಾನು ಒಪ್ಪುತ್ತೇನೆ. ಆದರೆ ಈ ಉಪಾಯಗಳನ್ನು ನಾವು ನಮ್ಮ ಬಗೆಗೇ ಕೈಕೊಳ್ಳಬೇಕು. ಸಾಂಪ್ರದಾಯಿಕ ಹಿಂದೂಗಳು ತಾವು ಆಚರಿಸುವ ಅಸ್ಪೃಶ್ಯತೆಯು ಶಾಸ್ತ್ರಸಮ್ಮತವಾಗಿದೆಯೆಂದೂ, ಅದರ ನಿವಾರಣೆಯಿಂದ ತಮಗೂ, ಹಿಂದೂ ಧರ್ಮಕ್ಕೂ ದೊಡ್ಡ ಕೇಡು ಉಂಟಾಗುವುದೆಂದೂ ನಂಬಿರುತ್ತಾರೆ. ಅವರ ದೇವಾಲಯಗಳಿಗೆ ಹರಿಜನರ ಪ್ರವೇಶ ಅವಶ್ಯವೆಂದು ಅವರಿಗೆ ಒತ್ತಾಯ ಮಾಡುವುದರಿಂದ ಅವರು ತಮ್ಮ ನಂಬಿಗೆಯನ್ನು ಬದಲಿಸುವುದಿಲ್ಲವೆಂಬುದು ಸ್ಪಷ್ಟವಾಗಿದೆ. ಹರಿಜನರು ಹಿಂದೂ ದೇವಾಲಯಗಳನ್ನು ಪ್ರವೇಶಿಸುವುದೇ ಮುಖ್ಯವಾದ ವಿಷಯವಲ್ಲ; "ಆದರೆ ಹರಿಜನರಿಗೆ ದೇವಾಲಯದ ಪ್ರವೇಶ ಕೊಡದೆ ಇರುವುದು ಅನ್ಯಾಯ" ಎಂಬ ಮಾತನ್ನು ಒಪ್ಪುವಂತೆ ಸಾಂಪ್ರದಾಯಿಕರ ಮನಸ್ಸಿನ ಪರಿವರ್ತನೆ

ಮಾಡುವುದು ಅತ್ಯವಶ್ಯವಾಗಿದೆ. ಈ ಬಗೆಯ ಪರಿವರ್ತನೆ ಅವರ ಹೃದಯಕ್ಕೆ ನಾವು ಮಾಡಿಕೊಳ್ಳುವ ಪ್ರಾರ್ಥನೆಯಿಂದಲೇ ಸಾಧ್ಯ. ಇಂಥ ಪ್ರಾರ್ಥನೆಯು ಪ್ರಾರ್ಥಿಸುವವನ ಪ್ರಾರ್ಥನೆ, ಉಪವಾಸ ಮೊದಲಾದ ಆತ್ಮದಂಡನೆಯಿಂದ ಮಾಡಲ್ಪಡಬೇಕು; ಅರ್ಥಾತ್ ವೃದ್ಧಿಹೊಂದುತ್ತಿರುವ ಆತ್ಮಶುದ್ಧಿಯಿಂದ ಮಾಡಲ್ಪಡಬೇಕು; ಇಂಥ ಉಪಾಯವು ಎಂದೂ ವ್ಯರ್ಥವಾಗಿಲ್ಲ. ಸುಧಾರಕನು ತನ್ನ ಚಳವಳಿಯ ಉದ್ದೇಶದ ಸತ್ಯವನ್ನು ಗ್ರಹಿಸಿದವನಾಗಿರಬೇಕು. ಅಂದರೆ ಅವನು ತನ್ನ ವಿರೋಧಕನ ಬಗೆಗೆ ಅಸಂತುಷ್ಟನಾಗುವುದಿಲ್ಲ; ಅದರ ಬದಲು ತನ್ನ ಬಗೆಗೆ ಅಸಂತುಷ್ಟನಾಗುತ್ತಾನೆ. ಅವನು ಆಮರಣ ಉಪವಾಸವನ್ನು ಕೈಕೊಳ್ಳಲು ಸಿದ್ಧನಿರಬೇಕು. ಎಲ್ಲರಿಗೂ ಇದನ್ನು ಕೈಕೊಳ್ಳಲು ಹಕ್ಕೂ ಇಲ್ಲ, ಯೋಗ್ಯತೆಯೂ ಇರುವುದಿಲ್ಲ. ಪರಮಾತ್ಮನು ತನ್ನ ಭಕ್ತರಿಂದ ವಿನಮ್ರತೆಯನ್ನು ಅಪೇಕ್ಷಿಸುತ್ತಾನೆ. ಉಪವಾಸಗಳೂ ಕೂಡ ಒತ್ತಾಯದ ಸ್ವರೂಪ ಪಡೆಯಬಹುದು. ಆದರೆ ಮಾನವನ ಕೈಯಲ್ಲಿ ಸಿಕ್ಕು ದುರುಪಯೋಗ ಹೊಂದದ ವಸ್ತು ಜಗತ್ತಿನಲ್ಲಿ ಯಾವುದೂ ಇಲ್ಲ. ಮಾನವಜೀವಿಯು ಒಳ್ಳೆಯದು ಮತ್ತು ಕೆಟ್ಟದು-ಜೆಕಿಲ್ ಮತ್ತು ಹೈಡ್-ಇವುಗಳ ಮಿಶ್ರಣವಾಗಿದ್ದಾನೆ. ಆದರೆ ಆತ್ಮದಂಡನೆಯ ವಿಷಯದಲ್ಲಿ ಒಳ್ಳೆಯ ಸಾಧನದ ದುರುಪಯೋಗವಾಗುವುದು ಅತ್ಯಂತ ವಿರಳ.

(ಹರಿಜನ, 15-4-1933)

* * *

ದೇವಾಲಯ ಪ್ರವೇಶದ ಬಗೆಗೆ ಟೀಕೆಯು ವೃತ್ತಪತ್ರಿಕೆಗಳಲ್ಲಿ ಆಗಾಗ ಕಂಡುಬರುತ್ತದೆ. ಅಂಥ ಟೀಕೆಯು ಇಬ್ಬಗೆಯಾಗಿದೆ. ಒಂದು ಕಡೆಗೆ ಹರಿಜನರಿಂದ ಮತ್ತು ಇನ್ನೊಂದೆಡೆ ಸನಾತನಿ ಹಿಂದೂಗಳಿಂದ. ಕೆಲವು ಹರಿಜನರು ಹೇಳುತ್ತಾರೆ- "ನಮಗೆ ದೇವಾಲಯ ಪ್ರವೇಶ ಬೇಡ; ನಮ್ಮ ಸಲುವಾಗಿ ದೇವಾಲಯಗಳನ್ನು ಕಟ್ಟುವುದು ಬೇಡ; ನಮ್ಮ ಸಲುವಾಗಿ ನೀವು ಸಂಗ್ರಹಿಸಿದ್ದನ್ನೆಲ್ಲ ನಮ್ಮ ಆರ್ಥಿಕ ಉನ್ನತಿಯ ಸಲುವಾಗಿ ವಿನಿಯೋಗಿಸಿರಿ." ಕೆಲವು ಸನಾತನಿಗಳು ಹೀಗೆ ನುಡಿದಿದ್ದಾರೆ-

"ದೇವಾಲಯ ಪ್ರವೇಶದ ಪ್ರಶ್ನೆಯನ್ನೇ ಬಿಟ್ಟುಬಿಡಿರಿ. ದೇವಾಲಯದಲ್ಲಿ ಹರಿಜನರ ಒತ್ತಾಯ ಪ್ರವೇಶದಿಂದ ನಮ್ಮ ಮನಸ್ಸು ನೋಯಿಸುತ್ತಿದ್ದೀರಿ." ಆದರೆ ಇಬ್ಬರ ಅಭಿಪ್ರಾಯಗಳೂ ತಪ್ಪಾಗಿವೆ. ಹರಿಜನ ನಿಧಿಯ ಒಂದು ಕಾಸನ್ನು ಕೂಡ ದೇವಾಲಯ ನಿರ್ಮಾಣಕ್ಕಾಗಿ ವಿನಿಯೋಗಿಸಿಲ್ಲ ಮತ್ತು ವಿನಿಯೋಗಿಸುವುದಿಲ್ಲ. ಉಳಿದ ಹಿಂದೂಗಳಿಗೆ ಹೇಗೋ ಹಾಗೆಯೇ ಹರಿಜನರಿಗೂ ಸಾರ್ವಜನಿಕ ದೇವಾಲಯಗಳಿಗೆ ಪ್ರವೇಶ ದೊರೆಯುವಂತೆ ಮಾಡಲು ಪ್ರಯತ್ನ ನಡೆಯಿಸಲಾಗಿದೆ. ಆ ದೇವಾಲಯಗಳನ್ನು ಆಮೇಲೆ ಸಂದರ್ಶಿಸುವುದು. ಅಥವಾ ಬಿಡುವುದು ಹರಿಜನರಿಗೆ ಸೇರಿದ ಮಾತು. ಲಕ್ಷಾವಧಿ ಜನರು ದೇವಾಲಯಗಳೆಂದರೆ ಆಧ್ಯಾತ್ಮಿಕ ಸಂಪತ್ತಿನ ಕೋಶಗಳೆಂದು ನಂಬುತ್ತಾರೆ ಮತ್ತು ಇಂಥ ಜನರು ಅವುಗಳನ್ನು ತಮ್ಮ ಪ್ರಾಣದಷ್ಟೇ ಪ್ರಿಯವೆಂದೂ ಭಾವಿಸುತ್ತಾರೆ. ಸವರ್ಣ ಹಿಂದೂಗಳು, ನಿಜವಾಗಿಯೂ ಹರಿಜನರ ಬಗೆಗೆ ಪಶ್ಚಾತ್ತಾಪದ ಭಾವನೆಯುಳ್ಳವರಾಗಿದ್ದರೆ, ಇಂಥ ಆಧ್ಯಾತ್ಮಿಕ ಸಂಪತ್ತನ್ನು ಹರಿಜನರೊಂದಿಗೆ ಹಂಚಿಕೊಳ್ಳಬೇಕು. ದೇವಾಲಯಗಳನ್ನು ಮುಕ್ತಗೊಳಿಸುವುದರಿಂದ ಹರಿಜನರಿಗೆ ಅದೆಷ್ಟು ಆನಂದವಾಗುವುದು ಎಂಬುದು ನನಗೆ ಗೊತ್ತಿದೆ. ಕಳೆದ ವಾರವೇ ಸವರ್ಣ ಹಿಂದೂ ಮತ್ತು ಹರಿಜನರ ಜನಸಮುದಾಯದ ಎದುರಿನಲ್ಲಿ, ಧಾರವಾಡ ಮತ್ತು ಬೆಳಗಾವಿಗಳ ನಡುವೆ, ನಾನು ಮೂರು ದೇವಾಲಯಗಳನ್ನು ಹರಿಜನರಿಗಾಗಿ ಮುಕ್ತಗೊಳಿಸಿದೆ. ಟೀಕೆ ಮಾಡುವವರು ಆಗ ಅಲ್ಲಿ ಇದ್ದರೆ, ಮತ್ತು ದೇವರ ವಿಗ್ರಹಕ್ಕೆ ನಮಸ್ಕರಿಸಿ ಪ್ರಸಾದ ಸ್ವೀಕರಿಸುವಾಗ ಹರಿಜನರ ಮುಖದ ಮೇಲೆ ಎಷ್ಟು ಆನಂದ ಉಕ್ಕುತ್ತಿತ್ತು ಎಂಬುದನ್ನು ಕಣ್ಣಾರೆ ಕಂಡಿದ್ದರೆ ಅವರೆಂದೂ ಹೀಗೆ ಟೀಕೆ ಮಾಡುತ್ತಿದ್ದಿಲ್ಲ. ಹರಿಜನ ಟೀಕಾಕಾರರು ಅಲ್ಲಿ ಇದ್ದರೆ, ತಮ್ಮನ್ನು ಹೊರತುಪಡಿಸಿ, ಸಾಮಾನ್ಯವಾಗಿ ಹರಿಜನರು ದೇವಾಲಯ ಪ್ರವೇಶವನ್ನು ಬಯಸುತ್ತಿದ್ದಾರೆ ಎಂಬುದನ್ನು ತಿಳಿದುಕೊಳ್ಳುತ್ತಿದ್ದರು. ಹರಿಜನರಿಗಾಗಿ ಮುಕ್ತಗೊಳಿಸುವ ದೇವಾಲಯಗಳೆಲ್ಲ ಆ ದೇವಾಲಯಕ್ಕೆ ಬಂದು ಹೋಗುವ ಜನರ ಪೂರ್ಣ ಸಮ್ಮತಿಯನ್ನು ಪಡೆದು ಮತ್ತು ಅನೇಕ ಅಂಥ ಜನರ ಸಮಕ್ಷದಲ್ಲಿ ಮಾತ್ರ ಹರಿಜನರಿಗಾಗಿ ತೆರೆದಿಡಲ್ಪಡುತ್ತವೆ" ಎಂಬುದನ್ನು ಸನಾತನಿ–ಟೀಕಾಕಾರರು ಅರಿಯುತ್ತಿದ್ದರು.

ದೇವಾಲಯ ಪ್ರವೇಶದ ಆಂದೋಲನಕ್ಕೆ ಯಾವ ಆರ್ಥಿಕ ಸಹಾಯವೂ ಬೇಕಿಲ್ಲ. ಇದಕ್ಕೆ ದೇವಾಲಯದಲ್ಲಿ ವಿಶ್ವಾಸವುಳ್ಳ ಮತ್ತು ಸವರ್ಣ ಹಿಂದೂಗಳ ಮನಸ್ಸಿನ ಮೇಲೆ ಪರಿಣಾಮ ಮಾಡುವಷ್ಟು ವ್ಯಕ್ತಿತ್ವವುಳ್ಳ ಕೆಲವೇ ಕಾರ್ಯಕರ್ತರು ಆಂದೋಲನಕ್ಕೆ ಬೇಕಾಗಿದ್ದಾರೆ. ಆದ್ದರಿಂದ ಇದು ಶಾಂತರೀತಿಯಿಂದ ಮತ್ತು ಎಚ್ಚರಿಕೆಯಿಂದ ಮುಂದುವರಿಸಬೇಕಾದ ಆಂದೋಲನವಾಗಿದ್ದು ಅದೇ ರೀತಿಯಿಂದ ಕೆಲವು ನಡೆದಿದೆ. ದೇವಾಲಯಗಳು ಹರಿಜನರಿಗಾಗಿ ಪೂರ್ಣ ಮುಕ್ತವಾಗುವವರೆಗೆ ಅಸ್ಪೃಶ್ಯತಾ ನಿವಾರಣೆಯು ಪೂರ್ಣವಾಗುವುದಿಲ್ಲ.

ದೇವಾಲಯ ಪ್ರವೇಶಕ್ಕೆ ವಿರುದ್ಧವಾಗಿ ಹರಿಜನರ ಆರ್ಥಿಕ ಉನ್ನತಿಯ ಪ್ರಶ್ನೆಯನ್ನು ಇಡುವುದು ಸಂಪೂರ್ಣ ತಪ್ಪು. ದೇವಾಲಯ ಪ್ರವೇಶವು ಆರ್ಥಿಕ ಉನ್ನತಿಗೆ ಸಹಾಯಕವಾಗಿದೆ. ಏಕೆಂದರೆ, ಹರಿಜನರಿಗೆ ದೇವಾಲಯಗಳು ಮುಕ್ತವಾದುದುವೆಂದರೆ, ಉಳಿದವರಿಗೆ ಹೇಗೋ ಹಾಗೆಯೇ ಹರಿಜನರಿಗೂ ತಮ್ಮ ಆರ್ಥಿಕ ಸ್ಥಿತಿಯನ್ನು ಸುಧಾರಿಸುವ ಎಲ್ಲ ಮಾರ್ಗಗಳೂ ತಾವಾಗಿಯೇ ಮುಕ್ತವಾಗುವುದು. ಹರಿಜನರಿಗಾಗಿ ಸಂಗ್ರಹಿಸುವ ಹಣವು ಅವರ ಆರ್ಥಿಕ ಸ್ಥಿತಿಯ ಸುಧಾರಣೆಗಾಗಿಯೇ ಉಪಯೋಗಿಸಲ್ಪಡುವುದು.

(ಹರಿಜನ, 16–3–1934)

ನೀವು ದೇವಾಲಯಕ್ಕೆ ಹೋಗುವ ರೂಢಿಯವರಾಗಿದ್ದರೆ ಹೋಗುವಾಗ ನಿಮ್ಮೊಡನೆ ಹರಿಜನರನ್ನು ಕರೆದುಕೊಂಡು ಹೋಗಬೇಕು. ಆದರೆ ಹರಿಜನರೊಂದಿಗೆ ಇರುವ ನಿಮ್ಮನ್ನು ದೇವಾಲಯದ ಒಳಕ್ಕೆ ಬಿಡುವುದಿಲ್ಲವೆಂದು ಕಂಡುಬಂದರೆ ಆಗ ನೀವು, ನನ್ನಂತೆ ಅಸ್ಪೃಶ್ಯತೆಯು ಮಹಾಪಾಪವೆಂಬ ನಂಬಿಗೆಯುಳ್ಳವರಾಗಿದ್ದರೆ, ಒಂದು ಚೇಳನ್ನಾಗಲಿ, ಬೆಂಕಿಯನ್ನಾಗಲಿ ಹೇಗೆ ತಪ್ಪಿಸುವಿರೋ ಹಾಗೆ ಆ ದೇವಾಲಯದಿಂದ ದೂರವಿರಲು ಪ್ರಯತ್ನಿಸಬೇಕು. ಆಗ ನೀವೂ ನನ್ನಂತೆ ಆ ದೇವಾಲಯದಲ್ಲಿ ಪರಮಾತ್ಮನಿಲ್ಲವೆಂದು ಭಾವಿಸುವಿರಿ. ನಾನು ಉದಾಹರಣೆಗೆಂದು ಜಗತ್ತಿನಲ್ಲಿ ಅತ್ಯಂತ ಪ್ರಸಿದ್ಧವಾದ ಕಾಶೀವಿಶ್ವನಾಥ ದೇವಾಲಯವನ್ನೇ ತೆಗೆದುಕೊಳ್ಳುವೆ. ಆ ದೇವಾಲಯದಲ್ಲಿ ಇರುವೆನೆಂದು ಹೇಳುವ ದೇವರು ಜಗತ್ತಿಗೇ

ಒಡೆಯನೆಂದು ಹೆಸರಾಗಿರುವನು. ಆದರೆ ಸವರ್ಣ ಹಿಂದೂಗಳು ಅದೇ ವಿಶ್ವಾನಾಥಸ್ವಾಮಿಯ ಹೆಸರಿನಲ್ಲಿಯೇ ಇಂದು ಅಹಂಕಾರದಿಂದ ಹರಿಜನರಿಗೆ ಹೇಳುತ್ತಾರೆ– "ಈ ದೇವಾಲಯದಲ್ಲಿ ನೀವು ಬರಕೂಡದು!"

ನಾನು ಯಾವುದೇ ಸನಾತನಿ ಹಿಂದೂವಿನಷ್ಟೇ ಒಳ್ಳೆಯ ಹಿಂದೂವಿದ್ದೇನೆ. ಹಿಂದೂ ಧರ್ಮದ ಎಲ್ಲ ಉಪದೇಶಗಳನ್ನು ಸಾಧ್ಯವಾದಷ್ಟು ನನ್ನ ಜೀವನದಲ್ಲಿ, ನನಗೆ ಶಕ್ಯವಿದ್ದಮಟ್ಟಿಗೆ, ಆಚರಿಸಲು ಪ್ರಯತ್ನಿಸಿದ್ದೇನೆ. ನನ್ನ ಶಕ್ತಿ ಕಡಿಮೆ ಎಂದು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಅದರಿಂದ ಹಿಂದೂ ಧರ್ಮದ ಬಗೆಗೆ ಇರುವ ನನ್ನ ದೃಷ್ಟಿಯ ಮೇಲಾಗಲಿ, ಅದರ ಮೇಲಿನ ನನ್ನ ಪ್ರೀತಿಯ ಮೇಲಾಗಲಿ ಯಾವ ಪರಿಣಾಮವೂ ಆಗಿಲ್ಲ. ಆದರೆ, ನಾನು ಹಿಂದೂ ಧರ್ಮವನ್ನು ಪ್ರೀತಿಸುತ್ತಿದ್ದರೂ, ಒಂದು ಮಾತನ್ನು ಹೇಳಲು ಬಯಸುವೆ; ಕಾಶಿಯ ಆ ದೇವಾಲಯದ ದ್ವಾರಗಳು ಎಲ್ಲಿಯವರೆಗೆ ಒಬ್ಬ ಹರಿಜನನ ಮಟ್ಟಿಗೆ ಕೂಡ ಮುಚ್ಚಲ್ಪಟ್ಟಿವೆಯೋ ಅಲ್ಲಿಯವರೆಗೆ ಕಾಶೀವಿಶ್ವನಾಥನು ಆ ದೇವಾಲಯದಲ್ಲಿ ವಾಸಿಸುವುದಿಲ್ಲ. ಅಲ್ಲಿಯವರೆಗೆ ನಾನು ಆ ದೇವಾಲಯವು ಪವಿತ್ರವೆಂದು ಅದನ್ನು ಪ್ರವೇಶಿಸಲಾರೆ ಅಥವಾ ಅಲ್ಲಿ ಹೋಗಿ ಪೂಜೆ ಮಾಡಿದರೆ ನನ್ನ ಪಾಪಗಳ ನಾಶವಾಗುವವೆಂದೂ ನಾನು ನಂಬಲಾರೆ. ಕಾಶಿಯ ವಿಶ್ವನಾಥ ದೇವಾಲಯಕ್ಕೆ ಯಾವ ಮಾತು ಅನ್ವಯಿಸುವದೋ ಅದೇ ಮಾತು, ಹರಿಜನರ ಮಟ್ಟಿಗೆ ತನ್ನ ದ್ವಾರಗಳನ್ನು ಮುಚ್ಚುವ ಭಾರತದ ಎಲ್ಲ ದೇವಾಲಯಗಳಿಗೂ ಅನ್ವಯಿಸುತ್ತದೆ.

ಹರಿಜನರ ರಾಜಕೀಯ ಅಥವಾ ಆರ್ಥಿಕ ಸ್ಥಿತಿಯ ಸುಧಾರಣೆಯಾದೊಡನೆ ಅವರು ಹಿಂದೂ ಸಮಾಜದಲ್ಲಿ ಯೋಗ್ಯ ಸ್ಥಾನವನ್ನು ಪಡೆಯುವರೆಂದು ಯಾರಾದರೂ ನನಗೆ ಮನವರಿಕೆ ಮಾಡಿ ಕೊಟ್ಟರೂ ನಾನು ಹರಿಜನರ ಸಲುವಾಗಿ ದೇವಾಲಯಗಳನ್ನು ಮುಕ್ತಮಾಡಲು ಬಯಸುವೆ ಮತ್ತು ಅಸಮಾನತೆಯ ಎಲ್ಲ ಗುರುತುಗಳನ್ನೂ ಅಳಿಸಬಯಸುವೆ. ಏಕೆಂದರೆ, ಇದು ನಾವು ನಮ್ಮ ಬಂಧುಗಳಿಗೆ ಮಾಡಿದ ಅನ್ಯಾಯದ ಪ್ರಾಯಶ್ಚಿತ್ತದ ಪ್ರಶ್ನೆಯಾಗಿದೆ ಎಂದು ನನಗನಿಸುತ್ತದೆ.

<u>(ಕೆಂಗೇರಿಯಲ್ಲಿಯ ಸಮ್ಮೇಲನದ ಭಾಷಣದಿಂದ)</u>

(ಹರಿಜನ, 20–6–1936)

* * *

ಅಸ್ಪೃಶ್ಯತಾ ನಿವಾರಣೆಯು ಕಾರ್ಯದಲ್ಲಿ ತೊಡಗಿರುವ ನನಗೆ ಕೆಲವು ಕಾರ್ಯಕರ್ತರು ಹಿಂದೂ ಧರ್ಮದ ಸಾರವೇನು? ಎಂಬ ಪ್ರಶ್ನೆಯನ್ನು ಕೇಳಿದ್ದಾರೆ.

ನಾನು ಇದೀಗ ಉಚ್ಚರಿಸಲಿರುವ ಒಂದು ಮಂತ್ರವು ಹಿಂದೂ ಧರ್ಮದ ಸಾರವನ್ನೇ ಸಾರುತ್ತದೆಂದು ನಂಬಿದ್ದೇನೆ.

ನಿಮಲ್ಲನೇಕರಿಗೆ ಈಶೋಪನಿಷತ್ತಿನ ಪರಿಚಯವಿರಬಹುದು. ಅನೇಕ ವರ್ಷಗಳ ಹಿಂದೆ ಭಾಷಾಂತರ ಮತ್ತು ವಿವರಣೆಯೊಡನೆ ಆ ಮಂತ್ರವನ್ನು ನಾನು ಓದಿದೆ. ಯರವಡಾ ಜೇಲಿನಲ್ಲಿದ್ದಾಗ ನಾನು ಅದನ್ನು ಕಂಠಪಾಠ ಮಾಡಿದೆ. ಆದರೆ ಈಗ ಕೆಲವು ತಿಂಗಳುಗಳಲ್ಲಿ ಎಷ್ಟು ಅದು ನನ್ನನ್ನು ಆಕರ್ಷಿಸಿದೆಯೋ ಅಷ್ಟು ಹಿಂದೆ ಆಕರ್ಷಿಸಿರಲಿಲ್ಲ. ಎಲ್ಲ ಉಪನಿಷತ್ತುಗಳೂ ಇತರ ಧರ್ಮಗ್ರಂಥಗಳೂ ಒಂದು ವೇಳೆ ಒಮ್ಮೆಲೆ ಸುಟ್ಟು ಭಸ್ಮವಾದರೂ ಈಶೋಪನಿಷತ್ತಿನ ಮೊದಲನೆ ಮಂತ್ರವು ಹಿಂದೂಗಳ ಸ್ಮೃತಿಯಲ್ಲಿ ಉಳಿದರೆ, ಹಿಂದೂ ಧರ್ಮವು ಅಮರವಾಗಿ ಉಳಿಯುವುದು. ಆ ಶ್ಲೋಕ ಹೀಗಿದೆ:–

"ಈಶಾವಾಸ್ಯಮಿದಂ ಸರ್ವಂಯತ್ಕಿಂಚ ಜಗತ್ಯಾಂ ಜಗತ್,

ತ್ಯೇನ ತ್ಯಕ್ತೇನ ಭುಂಜೀಥಾಃ ಮಾಗೃಧಃ ಕಸ್ಯಸ್ವಿದ್ಧನಂ."

ಇದರ ಅರ್ಥವೇನೆಂದರೆ: ಪರಮಾತ್ಮನು ವಿಶ್ವದ ಎಲ್ಲ ವಸ್ತುಗಳಲ್ಲಿಯೂ ವ್ಯಾಪಿಸಿದ್ದಾನೆ. ಆದ್ದರಿಂದ ಪರಿತ್ಯಾಗಮಾಡಿ ಎಲ್ಲವನ್ನೂ ಅವನಿಗೆ ಅರ್ಪಿಸು. ಆಮೇಲೆ ನಿನ್ನ ಪಾಲಿಗೆ ಬಂದುದನ್ನು ಭೋಗಿಸು ಅಥವಾ ಉಪಯೋಗಿಸು. ಅನ್ಯರ ಸಂಪತ್ತನ್ನು ಎಂದಿಗೂ ಬಯಸಬೇಡ.

ಒಬ್ಬನೇ ಪರಮಾತ್ಮನು, ಸೃಷ್ಟಿಕರ್ತನು, ಎಲ್ಲ ಸೃಷ್ಟಿಯ ಪ್ರಭುವು ಇಡಿಯ ವಿಶ್ವವನ್ನೇ ವ್ಯಾಪಿಸಿದ್ದಾನೆ ಎಂಬ ಜ್ಞಾನಕ್ಕಿಂತ ಹೆಚ್ಚಿನದೇನನ್ನು ಒಬ್ಬ ಸಾಮಾನ್ಯ ಮನುಷ್ಯನು ತಿಳಿಯಲು ಬಯಸುತ್ತಾನೆ?

(ಹರಿಜನ, 30–1–1937)

* * *

ತ್ರಾವಣಕೋರದ ಮಹಾರಾಜರು ತಮ್ಮ ಸಂಸ್ಥಾನದಲ್ಲಿಯ ದೇವಾಲಯಗಳನ್ನು ಹರಿಜನರಿಗೆ ಮುಕ್ತಗೊಳಿಸಿದ್ದಾರೆ. ಇದರ ಬಗ್ಗೆ ನಾನು ಮಹಾರಾಜರನ್ನು ಅಭಿನಂದಿಸುತ್ತೇನೆ. ಮತ್ತು ನಿಮ್ಮ ಸಂತೋಷದಲ್ಲಿ ಪಾಲುಗೊಳ್ಳುತ್ತೇನೆ. ಈಶೋಪನಿಷತ್ತಿನ ಆ ಮಂತ್ರವನ್ನು ಮಹಾರಾಜರ ಘೋಷಣೆಯಿಂದ ಬದಲಾದ ನಮ್ಮ ಸ್ಥಿತಿಗೆ ಅನ್ವಯಿಸಲು ನಾನು ಬಯಸುತ್ತೇನೆ. ನಿನ್ನೆಯೇ ನಾವು ಹಿಂದೂ ಎಂದು ಕರೆದುಕೊಳ್ಳಲು ಅಯೋಗ್ಯರಾಗಿದ್ದೆವು. ಏಕೆಂದರೆ, ವಿಶ್ವದಲ್ಲಿಯ ಎಲ್ಲ ವಸ್ತುಗಳಲ್ಲಿ ಪರಮಾತ್ಮನು ಇರುವನೆಂದ ಬಳಿಕ,-ಅಂದರೆ ಬ್ರಾಹ್ಮಣ-ಭಂಗಿ, ಪಂಡಿತ-ಕಸಗುಡಿಸುವವ ಇವರೆಲ್ಲರಲ್ಲಿ ಅವನೇ ಇರುವನೆಂದ ಮೇಲೆ, ಆ ಮಂತ್ರದ ದೃಷ್ಟಿಯಲ್ಲಿ ಮೇಲು-ಕೀಳು ಎಂಬ ಭೇದಕ್ಕೆ ಅವಕಾಶವಿಲ್ಲ; ಎಲ್ಲರೂ ಸಮಾನರು. ಹೀಗಿರುವಾಗ ಒಬ್ಬ ಪುರುಷನಾಗಲಿ, ಸ್ತ್ರೀಯಾಗಲಿ ತಾನು ಉಳಿದವರಿಗಿಂತ ಶ್ರೇಷ್ಠ ಎಂಬ ಅಹಂಕಾರವನ್ನು ಹೇಗೆ ತಾಳಬಹುದು? ಈಶೋಪನಿಷತ್ತಿನ ಮಂತ್ರವನ್ನು ನಿಜವೆಂದು ನಂಬಿದರೆ, ಅವರ್ಣರೆಂದು ಕರೆಯಲ್ಪಡುವ ಜನರು ಪ್ರವೇಶಿಸಿದರೆ ದೇವಾಲಯಗಳು ಅಪವಿತ್ರವಾಗುವವೆಂದು ಯಾರಾದರೂ ನಂಬುತ್ತಿದ್ದರೆ ಅಂಥ ವ್ಯಕ್ತಿಯು ಮಹಾಪಾಪ ಮಾಡಿದಂತಾಗುತ್ತದೆಂದು ನಾನು ಸಾರುತ್ತೇನೆ.

ಆ ಮಂತ್ರವನ್ನು ನಮ್ಮ ಸ್ತ್ರೀ-ಪುರುಷ-ಬಾಲಕರು ತಮ್ಮ ಹೃದಯಮಂದಿರದಲ್ಲಿ ಪತ್ರಿಷ್ಠೆ ಮಾಡಿಕೊಳ್ಳಬೇಕೆಂದು ನನ್ನ ಇಚ್ಛೆ. ಇದು ಹಿಂದೂ ಧರ್ಮದ ಸಾರವನ್ನೊಳಗೊಂಡಿದ್ದರಿಂದ ಪ್ರತಿಯೊಂದು ದೇವಾಲಯದ ದ್ವಾರಗಳ ಮೇಲೆ ಬರೆಯಲ್ಪಡಬೇಕು. ಆ ದೇವಾಲಯಗಳಿಗೆ ಬರುವ ಯಾರನ್ನಾದರೂ ನಾವು ಪ್ರತಿಬಂಧಿಸಿದರೆ ಆ ಮಂತ್ರವನ್ನು ಹೆಜ್ಜೆಹೆಜ್ಜೆಗೂ ಅಲ್ಲಗಳೆದಂತಾಗುವುದು ಎಂದು ನಿಮಗೆ ಈಗ ಅನಿಸುವುದಿಲ್ಲವೇ?

(ಹರಿಜನ, 30-1-1937)

ಸಹಭೋಜನ ಮತ್ತು ಅಂತರ್ವಿವಾಹ

ಅಸ್ಪೃಶ್ಯತೆಯ ನಿವಾರಣೆಗೆ ಸಹಭೋಜನ ಮತ್ತು ಅಂತರ್ವಿವಾಹಗಳು ಅವಶ್ಯಕವೆ?

ಈ ಪ್ರಶ್ನೆಗೆ ನನ್ನ ಉತ್ತರ– 'ಇಲ್ಲ' ಮತ್ತು 'ಹೌದು'. 'ಇಲ್ಲ' ಏಕೆಂದರೆ ಅದು ಹರಿಜನಸೇವಕ ಸಂಘದ ಕಾರ್ಯಕ್ರಮದ ಅಂಗವಾಗಿಲ್ಲ. ಸಾಮಾನ್ಯವಾಗಿ ವಿವಾಹ ಮತ್ತು ಭೋಜನಗಳು ವ್ಯಕ್ತಿಗತ ವಿಷಯಗಳು. ಯಾರಿಗೇ ಆಗಲಿ, ಇನ್ನೊಬ್ಬನ ಮನಸ್ಸಿನ ವಿರುದ್ಧವಾಗಿ, ಒಬ್ಬ ಹುಡುಗಿಯನ್ನು ಹೆಂಡತಿಯನ್ನಾಗಿ ಸ್ವೀಕರಿಸೆಂದಾಗಲಿ ಅಥವಾ ಯಾರೊಟ್ಟನೊಡನೆ ಭೋಜನ ಮಾಡಬೇಕೆಂದಾಗಲಿ ಹೇಳುವ ಹಕ್ಕು ಇಲ್ಲ. ಆದರೆ, ಅದೇ ವೇಳೆಗೆ, ನನ್ನ ಉತ್ತರವು 'ಹೌದು' ಎಂದಿದೆ. ಏಕೆಂದರೆ, ಒಬ್ಬನು ಅಸ್ಪೃಶ್ಯತೆ ಅಥವಾ ಕೀಳುತನವೆಂಬ ಕಾರಣದಿಂದ ಇನ್ನೊಬ್ಬನಿಂದ ಸ್ಪರ್ಶಿತವಾದ ಆಹಾರವನ್ನು ಸೇವಿಸಲು ನಿರಾಕರಿಸಿದರೆ, ಅವನು ಅಸ್ಪೃಶ್ಯತೆಯನ್ನು ಆಚರಿಸಿದಂತೆಯೇ ಸರಿ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಸಹಭೋಜನ ಮತ್ತು ಅಂತರ್ವಿವಾಹಗಳ ನಿರೋಧಕ್ಕೆ ಅಸ್ಪೃಶ್ಯತೆಯು ಯಾವ ರೀತಿಯಿಂದಲೂ ಆಧಾರವಾಗಲಾರದು.

(ಹರಿಜನ, 23–3–1934)

* * *

[ಒಬ್ಬ ಸುದ್ದಿಗಾರರ ಒಂದು ಪ್ರಶ್ನೆಗೆ ಉತ್ತರವೀಯುತ್ತ ಗಾಂಧೀಜಿ ಹೀಗೆ ಬರೆದರು:]

ಸಹಭೋಜನದ ಬಗೆಗೆ ನಿರೋಧವು ವರ್ಣಧರ್ಮದ ಒಂದು ಭಾಗವಾಗಿಲ್ಲ. ಆದರೆ, ಸಹಭೋಜನವು ಹೇಗೆ ಆತ್ಮವಿಕಾಸಕ್ಕೆ ಅಡ್ಡಿಯಾಗುತ್ತದೆ ಎಂಬುದು ನನಗೆ ತಿಳಿಯದಾಗಿದೆ. ಇಲ್ಲಿ ಇಬ್ಬಗೆಯ ಗೊಂದಲವಿದೆ. ಮೊದಲನೆಯದಾಗಿ, ಅಸ್ಪೃಶ್ಯತೆಯ ಕಾರಣದಿಂದ ಸಹಭೋಜನವನ್ನು ನಿರೋಧಿಸುವುದು ಮತ್ತು ಆತ್ಮವಿಕಾಸದ ಕಾರಣದಿಂದ ಸಹಭೋಜನವನ್ನು ನಿರೋಧಿದುವುದು,–ಇವೆರಡೂ ಸಂಪೂರ್ಣ ಬೇರೆ

ಬೇರೆ ವಿಷಯಗಳು. ಮೊದಲನೆಯ ಪ್ರಕಾರದ ನಿರೋಧವು ಇಡಿಯ ಒಂದು ವರ್ಗವನ್ನು ಬಹಿಷ್ಕರಿಸುತ್ತದೆ; ಆದರೆ ಎರಡನೆಯದು, ಒಂದು ವಿಶಿಷ್ಟ ವರ್ಗದಲ್ಲಿ ಜನ್ಮತಾಳಿದ ಕಾರಣದಿಂದ ಯಾರನ್ನೂ ಬಹಿಷ್ಕರಿಸುವುದಿಲ್ಲ; ಆದರೆ ಕೆಲವು ವ್ಯಸನಗಳಿಗೆ ಅಂಟಿಕೊಂಡ ಕಾರಣಕ್ಕಾಗಿ ಕೆಲವರನ್ನು ಬಿಡಬಹುದು. ಹೀಗೆ, ಅಸ್ಪೃಶ್ಯತೆಯೇ ಕಾರಣವಾದ ನಿರೋಧವು, ಯಾವುದೇ ವ್ಯಕ್ತಿಯ ದುರ್ವ್ಯಸನಕ್ಕೆ ಸಂಬಂಧವಿಲ್ಲದೆ ಇರುವುದರಿಂದ, ಶಾಶ್ವತವಾಗಿ ಉಳಿಯುವುದು. ಆತ್ಮವಿಕಾಸದ ಕಾರಣದಿಂದ ಹುಟ್ಟಿದ ನಿರೋಧವು ಆ ವ್ಯಕ್ತಿಯು ದುರ್ವ್ಯಸನವನ್ನು ಬಿಟ್ಟೊಡನೆಯೆ ಮಾಯವಾಗುವುದು. ಆದ್ದರಿಂದ "ಯಂಗ್ ಇಂಡಿಯಾ"ದಲ್ಲಿಯ ನನ್ನ ಹಿಂದಿನ ಬರವಣಿಗೆಗೆ ಇಂದಿನ ನನ್ನ ನಿಲುಮೆಗೂ ಯಾವುದೇ ವಿಸಂಗತಿಯಿಲ್ಲ.

(ಹರಿಜನ, 13–4–1934)

* * *

ಸರ್ವಶಕ್ತನಾದ ಪರಮಾತ್ಮನ ಎದುರು, ನಾವು ಏನನ್ನು ತಿಂದಿದ್ದೇವೆ ಅಥವಾ ನಾವು ಯಾರಿಂದ ಸ್ಪರ್ಶಿಸಲ್ಪಟ್ಟಿದ್ದೇವೆ ಎಂಬುದರ ಮೇಲಿಂದ ನಮ್ಮ ಬೆಲೆ ಕಟ್ಟಲ್ಪಡುವುದಿಲ್ಲ; ಆದರೆ, ನಾವು ಎಷ್ಟು ಜನರಿಗೆ, ಯಾವ ರೀತಿಯಿಂದ ಸೇವೆ ಸಲ್ಲಿಸಿದ್ದೇವೆ ಎಂಬುದರ ಮೇಲಿಂದ ನಮ್ಮ ಯೋಗ್ಯತೆ ನಿರ್ಣಯಿಸಲ್ಪಡುವುದು. ಆಪತ್ತಿನಲ್ಲಿದ್ದ ಒಬ್ಬನೇ ಒಬ್ಬ ಮಾನವಜೀವಿಗೆ ನಾವು ಸಹಾಯ ಸಲ್ಲಿಸಿದರೂ, ಪರಮಾತ್ಮನ ಸಮ್ಮುಖದಲ್ಲಿ ನಮಗೆ ಅವನ ಅನುಗ್ರಹವುಂಟಾಗುವುದು. ಕೆಟ್ಟ ಸಂಪರ್ಕವನ್ನು ನಾವು ತ್ಯಜಿಸುವಂತೆ, ಕೆಟ್ಟ ಅಥವಾ ಮಲಿನವಾದ ಅಥವಾ ಉದ್ರೇಕಗೊಳಿಸುವ ಆಹಾರವನ್ನೂ ನಾವು ತ್ಯಜಿಸಬೇಕು. ಆದರೆ, ಈ ಆಚರಣೆಗಳಿಗೆ ಅವುಗಳ ಪ್ರಮಾಣ ಮೀರಿದ ಮಹತ್ವವನ್ನು ಕೊಡದೆ ಇರೋಣ. ನಾವು ಕೆಲವು ಆಹಾರ ತ್ಯಜಿಸಿದ್ದೇವೆಂಬುದನ್ನು ಮೋಸ, ಮಿಥ್ಯಾಚರಣ ಮೊದಲಾದ ದುರ್ಗುಣಗಳನ್ನು ಮುಚ್ಚಿಕೊಳ್ಳುವುದಕ್ಕೆ ಉಪಯೋಗಿಸಲಾರೆವು. ನಮ್ಮ ಆಧ್ಯಾತ್ಮಿಕ ಪ್ರಗತಿಗೆ ಅಡ್ಡಿಯಾಗುತ್ತದೆಂದು ನಾವು ಪತಿತನಾದ ಅಥವಾ ಮಲಿನವಾದ ಒಬ್ಬ ಬಂಧುವಿಗೆ ಸಹಾಯ ಸಲ್ಲಿಸದೆ ಇರಕೂಡದು.

(ಯಂಗ್ ಇಂಡಿಯಾ, 5–1–1922)

* * *

ಒಬ್ಬ ವಿದ್ಯಾವತಿಯಾದ ಹರಿಜನ ಕನ್ಯೆ ಸವರ್ಣ ಹಿಂದೂವನ್ನು ಮದುವೆಯಾದರೆ, ದಂಪತಿಗಳಿಬ್ಬರೂ ಹರಿಜನಸೇವೆಗೆ ಶ್ರಮಿಸಬೇಕು. ಭೋಗೇಚ್ಛೆ ಅಥವಾ ಮದುವೆಯ ಉದ್ದೇಶವಾಗಲೇ ಕೂಡದು. ಅದು ಯೋಗ್ಯವಾಗಲಾರದು; ನಾನೆಂದಿಗೂ ಅದನ್ನು ಪ್ರೋತ್ಸಾಹಿಸಲಾರೆ. ಸದುದ್ದೇಶದಿಂದಲೇ ಘಟಿಸಿದ ವಿವಾಹಗಳು ಅಯಶಸ್ವಿಯಾಗುವುದು ಸಾಧ್ಯ ಯಾರೂ ಅಂಥ ದುರ್ಘಟನೆಗಳನ್ನು ತಪ್ಪಿಸಲಾರರು. ಒಬ್ಬಳೇ ಒಬ್ಬಳು ಹರಿಜನ ಕನ್ಯೆ ಒಬ್ಬ ಉಚ್ಚಶೀಲವುಳ್ಳ ಸವರ್ಣ ಹಿಂದೂವನ್ನು ಮದುವೆಯಾದರೆ, ಅದು ಹರಿಜನ ಮತ್ತು ಸವರ್ಣ ಹಿಂದೂ ಇಬ್ಬರಿಗೂ ಒಳ್ಳೆಯದನ್ನು ಮಾಡುತ್ತದೆ. ಅವರು ಒಂದು ಒಳ್ಳೆಯ ಮಾದರಿಯನ್ನು ಹಾಕಿಕೊಡುತ್ತಾರೆ. ಮತ್ತು ಆ ಹರಿಜನ ಕನ್ಯೆ ನಿಜವಾಗಿಯೂ ಯೋಗ್ಯಳಾಗಿದ್ದರೆ, ಅವಳು ತನ್ನ ಮಾದರಿಯನ್ನೇ ಇತರರೂ ಅನುಕರಿಸುವಂತೆ ಮಾಡುತ್ತಾಳೆ. ಇಂಥ ವಿವಾಹಗಳ ಬಗೆಗೆ ಸಮಾಜದ ಹೆದರಿಕೆಯು ನಾಶವಾಗುತ್ತದೆ. ಇದರಲ್ಲಿ ಯಾವ ತಪ್ಪೂ ಇಲ್ಲವೆಂದು ಎಲ್ಲರಿಗೂ ತಾನಾಗಿಯೇ ಕಂಡುಬರುತ್ತದೆ. ಇಂಥ ಸಂಬಂಧದಿಂದ ಜನಿಸಿದ ಮಕ್ಕಳು ಒಳ್ಳೆಯವರಾದರೆ, ಅವರು ಅಸ್ಪೃಶ್ಯತಾ ನಿವಾರಣೆಯ ಕೆಲಸಕ್ಕೆ ಸಹಾಯ ಮಾಡುವರು. ಪ್ರತಿಯೊಂದು ಸುಧಾರಣೆಯೂ ಬಸವನ ಹುಳದ ಪ್ರಸಿದ್ಧವಾದ ಮಂದಗತಿಯಿಂದಲೇ ಮುಂದುವರಿಯುತ್ತದೆ. ಪ್ರಗತಿಯು ಸಾವಕಾಶವಾಗಿದೆ ಎಂದು ಅಸಂತೋಷ ಹೊಂದುವುದು ಸುಧಾರಣೆಯ ರೀತಿಯ ಅಜ್ಞಾನವನ್ನು ಎತ್ತಿ ತೋರಿಸುತ್ತದೆ.

ಸವರ್ಣ ಹಿಂದೂ ಕನ್ಯೆಯರು ಹರಿಜನ ವರಗಳನ್ನು ಆರಿಸಿಕೊಳ್ಳುವುದು ನಿಜವಾಗಿಯೂ ಅಪೇಕ್ಷಣೀಯ. ಆದರೆ ಇದು ಅತ್ಯುತ್ತಮವೆಂದು ಹೇಳಲು ನಾನು ಹಿಂಜರಿಯುವೆ. ಏಕೆಂದರೆ, ಇದರಿಂದ ಸ್ತ್ರೀಯರು ಪುರುಷರಿಗಿಂತ ಕೀಳು ಎಂದು ಅರ್ಥವಾದೀತು. ಈ ಕಾರಣದಿಂದ ಈಗ, ಸವರ್ಣ ಹಿಂದೂ ಕನ್ಯೆ ಹರಿಜನನೊಬ್ಬನನ್ನು ಮದುವೆಮಾಡಿಕೊಳ್ಳುವುದು ಹರಿಜನ ಕನ್ಯೆ ಸವರ್ಣ ಹಿಂದೂವನ್ನು ಲಗ್ನ ಮಾಡಿಕೊಳ್ಳುವುದಕ್ಕಿಂತ ಉತ್ತಮವೆಂದು ನಾನು ಒಪ್ಪುತ್ತೇನೆ. ನನ್ನ ಪ್ರಭಾವದಲ್ಲಿ ಬರುವ ಎಲ್ಲ ಸವರ್ಣ ಹಿಂದೂ ಕನ್ನೆಯರನ್ನು ಹರಿಜನ ಪತಿಯನ್ನು ಆರಿಸಲು ಒಪ್ಪಿಸುತ್ತೇನೆ. ನನ್ನ ಅನುಭವದಿಂದ ಇದು ಅತ್ಯಂತ ಕಠಿಣವೆಂಬುದು ನನಗೆ ಗೊತ್ತಿದೆ.

ಹಳೆಯ ನಂಬಿಗೆಗಳನ್ನು ಬಿಡುವುದು ಕಷ್ಟ. ಇಂಥ ನಂಬಿಗೆಗಳನ್ನು ಕಂಡು ತಿರಸ್ಕಾರದಿಂದ ನಕ್ಕುಬಿಡುವುದೂ ಸಾಧ್ಯವಿಲ್ಲ. ನಾವು ಅವುಗಳನ್ನು ತಾಳ್ಮೆಯಿಂದ ಜಯಿಸಬೇಕು. ಒಬ್ಬ ಹುಡುಗಿಯು ಹರಿಜನನೊಬ್ಬನನ್ನು ಮದುವೆಯಾಗಿ ಅಷ್ಟರಿಂದಲೇ ತನ್ನ ಕರ್ತವ್ಯ ಮುಗಿಯಿತೆಂದು ಭಾವಿಸಿ, ಅನಂತರ ಭೋಗಮಗ್ನಳಾದರೆ, ಅದು ಎಲ್ಲಕ್ಕಿಂತಲೂ ಅನರ್ಥಕಾರಿ. ವಧೂವರರಲ್ಲಿ ಎಷ್ಟುಮಟ್ಟಿಗೆ ಸೇವಾಬುದ್ಧಿಯನ್ನು ಹುಟ್ಟಿಸುತ್ತದೆ ಎಂಬುದೇ ಪ್ರತಿಯೊಂದು ವಿವಾಹದ ಅಂತಿಮ ಪರೀಕ್ಷೆ. ಪ್ರತಿಯೊಂದು ಮಿಶ್ರವಿವಾಹವೂ ಅಂಥ ವಿವಾಹಗಳ ಬಗೆಗೆ ಇರುವ ಕಲಂಕವನ್ನು ಹೆಚ್ಚು ಕಡಿಮೆ ಪ್ರಮಾಣದಲ್ಲಿ, ನಿವಾರಿಸಲು ಪ್ರಯತ್ನಿಸುತ್ತದೆ. ಅಂತ್ಯದಲ್ಲಿ ಒಂದೇ ಜಾತಿ ಉಳಿಯುತ್ತದೆ– 'ಭಂಗಿ' ಎಂಬ ಸುಂದರವಾದ ಹೆಸರಿನಿಂದ ಕರೆಯಲ್ಪಡುವಂಥದು–ಅರ್ಥಾತ್ ಸುಧಾರಕ ಅಥವಾ ಎಲ್ಲ ಕೊಳೆಯನ್ನು ತೆಗೆದುಹಾಕುವ ಜನರ ಜಾತಿ. ಅಂಥ ಸುದಿನ ಬೇಗನೆ ಉದಯವಾಗಲೆಂದು ಎಲ್ಲರೂ ಪ್ರಾರ್ಥಿಸೋಣ.

* * *

ಕೇವಲ ವ್ಯಕ್ತಪಡಿಸುವುದರಿಂದಲೇ ನನ್ನ ಶ್ರೇಷ್ಠ ಇಚ್ಛೆಗಳೂ ಕೂಡ ಕಾರ್ಯರೂಪಕ್ಕಿಳಿಯಲಾರವೆಂಬುದನ್ನು ನನ್ನ ಸುದ್ದಿಗಾರನು ಅರಿಯಬೇಕು. ಇದುವರೆಗೂ ನಾನು ಹರಿಜನ ಕನ್ಯೆಯೊಬ್ಬಳನ್ನೂ ಸವರ್ಣ ಹಿಂದೂವಿಗೆ ಮದುವೆ ಮಾಡಿಕೊಡುವುದರಲ್ಲಿ ಯಶಸ್ವಿಯಾಗಿಲ್ಲ. ತನ್ನ ತಂದೆಯ ಆಶೆಯಂತೆ, ಆತನು ಆರಿಸಿದ ಹರಿಜನನೊಬ್ಬನನ್ನು ಮದುವೆಯಾಗಲು ಬಯಸುವ ಸವರ್ಣ ಹಿಂದೂ ಕನ್ಯೆಯೊಬ್ಬಳು ನನ್ನ ಜೊತೆಗೆ ಇದ್ದಾಳೆ. ಆ ಹುಡುಗನು ಈಗ ಸೇವಾಗ್ರಾಮದಲ್ಲಿ ಶಿಕ್ಷಣ ಪಡೆಯುತ್ತಿದ್ದಾನೆ. ಪರಮಾತ್ಮನ ಇಚ್ಛೆಯಿದ್ದರೆ, ಕೆಲಕಾಲದ ನಂತರ ಇಬ್ಬರ ವಿವಾಹವೂ ಜರುಗುವುದು.

(ಹರಿಜನ, 7–7–1946)

* * *

ಧರ್ಮಾಂತರ

ಹಿಂದೂ ಧರ್ಮವನ್ನು ಬಿಟ್ಟು ಇಸ್ಲಾಂ ಅಥವಾ ಕ್ರಿಶ್ಚನ್ ಧರ್ಮಕ್ಕೆ ಒಟ್ಟಾಗಿಯೇ ಮತಾಂತರ ಹೊಂದುವುದು ಹರಿಜನರಿಗೆ ಸೂಚಿಸಲಾದ ಪರಿಹಾರಗಳಲ್ಲಿ ಒಂದಾಗಿದೆ. ಒಂದು ಧರ್ಮವನ್ನು ಬಿಟ್ಟುಕೊಡುವುದರಿಂದ ಐಹಿಕ ಉನ್ನತಿ ಆಗುತ್ತಿದ್ದರೆ, ನಾನು ಹಿಂದು ಮುಂದು ನೋಡದೆ ಹಾಗೆ ಸೂಚಿಸುತ್ತಿದ್ದೆ. ಆದರೆ ಧರ್ಮವು ಹೃದಯಕ್ಕೆ ಸಂಬಂಧಿಸಿದುದು. ಎಷ್ಟೇ ದೈಹಿಕ ಅನಾನುಕೂಲವುಂಟಾದರೂ ಸ್ವಧರ್ಮವನ್ನು ತ್ಯಜಿಸಕೂಡದು. ಪಂಚಮರನ್ನು ಇಂಥ ಅಮಾನುಷ ರೀತಿಯಿಂದ ನಡೆಸಿಕೊಳ್ಳುವುದು ಹಿಂದೂ ಧರ್ಮದ ಒಂದು ಅಂಗವೇ ಆಗಿದ್ದರೆ, ಧರ್ಮವನ್ನು ಒಂದು ಕುರುಡು ನಂಬಿಗೆಯನ್ನಾಗಿ ಪರಿಗಣಿಸದ ನನ್ನಂಥವರಿಗೂ ಮತ್ತು ಇತರರಿಗೂ ಅದನ್ನು ತ್ಯಜಿಸಿ, ಅದರ ಪವಿತ್ರ ಹೆಸರಿನಲ್ಲಿ ನಡೆಯುವ ಎಲ್ಲ ಕೆಡುಕನ್ನು ಕ್ಷಮಿಸಿಬಿಡುವುದು ಒಂದು ಪ್ರಧಾನ ಕರ್ತವ್ಯವಾಗುತ್ತಿದ್ದಿತು. ಆದರೆ, ಅಸ್ಪೃಶ್ಯತೆಯು ಹಿಂದೂ ಧರ್ಮದ ಒಂದು ಅಂಗವಾಗಿಲ್ಲ ಎಂದು ನಾನು ನಂಬಿದ್ದೇನೆ. ನಮ್ಮ ಎಲ್ಲ ಪ್ರಯತ್ನಗಳಿಂದಲೂ ನಿವಾರಿಸಲ್ಪಡಬೇಕಾದ ಮೇಲಿನ ಅವಶ್ಯಕ ಬೆಳವಣಿಗೆ ಅದು. ಹಿಂದೂ ಧರ್ಮದಿಂದ ಈ ಕಲಂಕವನ್ನು ತೆಗೆದುಹಾಕಲು ಸ್ಥಿರಸಂಕಲ್ಪ ಮಾಡಿರುವ ಅಸಂಖ್ಯ ಹಿಂದೂ ಸುಧಾರಕರಿದ್ದಾರೆ. ಆದ್ದರಿಂದ, ಧರ್ಮಾಂತರವು ಯಾವ ರೀತಿಯಲ್ಲಿಯೂ ಒಂದು ಪರಿಹಾರವಲ್ಲವೆಂದು ನನ್ನ ಅಭಿಪ್ರಾಯ.

(ಯಂಗ್ ಇಂಡಿಯಾ, 27–10–1920)

* * *

ಧರ್ಮಾಂತರದ ಹೆದರಿಕೆಯನ್ನು ತೋರಿಸುವವರಿಗೆ 'ಧರ್ಮವೆಂದರೇನು?' ಎಂಬುದರ ಅರ್ಥವೇ ತಿಳಿದಿಲ್ಲವೆಂದು ನನ್ನ ನಮ್ರ ಅಭಿಪ್ರಾಯ. ಧರ್ಮವು ಜನನದಿಂದ ಮರಣದವರೆಗೆ ಇರುವಂತಹದು. ಒಬ್ಬನು ತನ್ನ ಬಟ್ಟೆಗಳನ್ನು ಬದಲಾಯಿಸುವಂತೆ ಧರ್ಮವನ್ನು ಬದಲಾಯಿಸಲಾರನು. ಅದು ಮರಣಾನಂತರವೂ ಇರುತ್ತದೆ. ಇತರರ ಪ್ರೀತ್ಯರ್ಥವಾಗಿ ಒಬ್ಬನು

ಒಂದು ಧರ್ಮವನ್ನು ಅನುಸರಿಸುವುದಿಲ್ಲ. ಅವನು ಅದನ್ನು ತನಗೆ ಬೇಕಾಗಿ ಅನುಸರಿಸುತ್ತಾನೆ. ವಿಶ್ವಾಸವುಳ್ಳ ಪತಿ ಇತರ ಯಾವ ಸ್ತ್ರೀಯನ್ನೂ ಪ್ರೀತಿಸದಷ್ಟು ತನ್ನ ಪತ್ನಿಯನ್ನು ಪ್ರೀತಿಸುತ್ತಾನೆ. ಒಂದು ವೇಳೆಗೆ ಅವಳು ಸತೀಧರ್ಮದಲ್ಲಿ ತಪ್ಪಿದರೂ, ಪತಿಯು ತನ್ನ ಧರ್ಮವನ್ನು ಬಿಡುವುದಿಲ್ಲ. ಇಬ್ಬರ ಸಂಬಂಧ ರಕ್ತಸಂಬಂಧವನ್ನು ಮೀರಿದುದು. ಹಾಗೆಯೇ ಧರ್ಮದ ಸಂಬಂಧವೂ ಇದೆ. ಅದು ಹೃದಯಕ್ಕೆ ಸಂಬಂಧಿಸಿದ್ದಾಗಿದೆ. ತಾವೇ ಶ್ರೇಷ್ಠರೆಂದು ಭಾವಿಸಿಕೊಳ್ಳುವ ಹಿಂದೂಗಳಿಂದ ಚಿತ್ರಹಿಂಸೆಗೊಳಗಾದರೂ ತನ್ನ ಹಿಂದೂ ಧರ್ಮವನ್ನು ಅನುಸರಿಸುವ "ಅಸ್ಪೃಶ್ಯ"ನು ಅವರಿಗಿಂತ ಉತ್ತಮ ಹಿಂದೂವಾಗಿದ್ದಾನೆ. ತಾವೇ ಶ್ರೇಷ್ಠರೆಂದು ಭಾವಿಸಿಕೊಳ್ಳುವವರು ತಮ್ಮ ಕರ್ಮದಿಂದಲೇ ಹಿಂದೂಧರ್ಮದ ನಿರಾಕರಣೆ ಮಾಡುತ್ತಾರೆ. ಆದುದರಿಂದ, ಹಿಂದೂಧರ್ಮವನ್ನು ತ್ಯಜಿಸುವೆವೆಂಬ ಬೆದರಿಕೆ ಹಾಕುವವರು ತಮ್ಮ ಧರ್ಮಕ್ಕೆ ದ್ರೋಹ ಬಗೆಯುತ್ತಿದ್ದಾರೆಂದು ನನ್ನ ಅಭಿಪ್ರಾಯ.

(ಯಂಗ್ ಇಂಡಿಯಾ, 4–6–1925)

* * *

ಸವರ್ಣ ಹಿಂದೂಗಳ ಚಿತ್ರಹಿಂಸೆಗೊಳಗಾಗಿ, ಅವರಿಂದ ಎಂದಾದರೂ ಸಹಾಯ ಪಡೆಯಬಹುದೆಂಬ ಆಶೆಯೆಲ್ಲ ನಿರಾಶೆಯಾಗಿ, ಬಡ ಹರಿಜನರು ಕ್ರಿಶ್ಚನ್ ಧರ್ಮದ ಆಶ್ರಯವನ್ನು ಪಡೆಯಲಿಚ್ಛಿಸಿದರೆ ನನಗೇನೂ ಆಶ್ಚರ್ಯವಾಗಬೇಕಾದುದಿಲ್ಲ. ಈ ದುಃಖವನ್ನು ಪ್ರಬಲ ಶಕ್ತಿಯನ್ನಾಗಿ ಪರಿವರ್ತಿಸಲು ನಾವು ಅಸಮರ್ಥರಾದರೆ ಅದು ನಿಷ್ಪ್ರಯೋಜನಕ್ಕಿಂತ ಕೀಳು. ದೈಹಿಕ ಕ್ಲೇಶಕ್ಕೆ ಗುರಿಯಾಗಿ ಆದ ಧರ್ಮಾಂತರವು ಅಂತರಾತ್ಮನ ಒಪ್ಪಿಗೆಯಿಂದ ಆದ ಧರ್ಮಾಂತರವಲ್ಲ. ಆದರೆ, ತಮ್ಮ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಬೇಕೆಂಬ ದೃಷ್ಟಿಯಿಂದಲೂ ಚಿತ್ರಹಿಂಸೆಯಿಂದ ರಕ್ಷಣೆ ಹೊಂದಬೇಕೆಂಬ ದೃಷ್ಟಿಯಿಂದಲೂ ಹರಿಜನರು ತಮ್ಮ ಧರ್ಮವನ್ನು ಬದಲಾಯಿಸಿದರೆ, ಅದಕ್ಕಾಗಿ ನಾವು ಗೊಣಗುಟ್ಟಬೇಕಾಗಿಲ್ಲ.

ಧರ್ಮಾಂತರದ ಕಾರಣಕ್ಕಾಗಿ ನಾವು ದುಃಖಪಡಬೇಕು. ಇದಕ್ಕೆ ಸವರ್ಣ ಹಿಂದೂಗಳು ಕಾರಣವೆಂಬುದನ್ನು ಅರಿತು, ಹಾಗೆ ಒಪ್ಪಿಕೊಳ್ಳೋಣ. ಅವರು

ಈ ಸೂಚನೆಗೆ ಕಿವಿಗೊಡುವರೆ? ಧರ್ಮಾಂತರಗಳು ರೋಗದ ಒಂದು ಸಣ್ಣ ಪರಿಣಾಮ ಮಾತ್ರ ಕಾರಣವನ್ನು ತೆಗೆದುಹಾಕಿದರೆ, ಧರ್ಮಾಂತರಗಳೂ ಇನ್ನೂ ಇತರ ಕೆಟ್ಟ ಪರಿಣಾಮಗಳೂ ತಾವಾಗಿಯೇ ನಿಲ್ಲುವವು.

(ಹರಿಜನ, 22–3–1935)

ತಮ್ಮ ಮತದವರೇ ಎಂದು ನಟಿಸುವ ಕೆಲವರು ತಮಗೆ ದೇವಾಲಯ ಪ್ರವೇಶ ಮಾಡಲು ಪ್ರತಿಬಂಧಿಸುವರೆಂಬ ಕಾರಣದಿಂದ, ತಮ್ಮ ಧರ್ಮವನ್ನೇ ತ್ಯಜಿಸುವೆವೆಂದು ಬೆದರಿಕೆ ಹಾಕುವುದರಲ್ಲಿ ಏನೂ ಧಾರ್ಮಿಕ ಭಾವನೆ ಇಲ್ಲ. ಅಂಥ ಜನರು ಧಾರ್ಮಿಕ ಚೈತನ್ಯದಿಂದ ಪ್ರೇರಿತರಾದವರೆಂದು ಹೇಳಲು ಸಾಧ್ಯವಿಲ್ಲ. ದೇವಾಲಯಗಳು ಪೂಜಾಗೃಹಗಳು. ನಂಬಿಕೆ ಇರುವವರಿಗೆಲ್ಲ ಅವು ಇದ್ದೇ ಇರುತ್ತವೆ. ಧರ್ಮದ ಹೆಸರಿನಲ್ಲಿ ಹಿಂಸಾಕೃತ್ಯ ನಡೆಯುವುದು ಕೇವಲ ಇಂದಿನದಲ್ಲ. ಅದು ಹಿಂಸೆಗೆ ಗುರಿಯಾದವರನ್ನು ಪರೀಕ್ಷಿಸಿ ಶುದ್ಧ ಮಾಡುತ್ತದೆ. ಅವರ ಧರ್ಮನಿಷ್ಠೆಯನ್ನು ಸ್ಥಾಪಿಸುತ್ತದೆ. ಹರಿಜನರು ತಾಳ್ಮೆಯಿಂದ ಹಿಂಸೆಯನ್ನು ಸಹಿಸಿಕೊಂಡರೆ ಅಂತ್ಯದಲ್ಲಿ ಅವರಿಗೆ ವಿಜಯ ಕಟ್ಟಿಟ್ಟದ್ದು.

ತಮಗೆ ದೇವಾಲಯ ಪ್ರವೇಶದ ಹಕ್ಕು ನಿರಾಕರಿಸಲ್ಪಟ್ಟಿದೆಯೆಂಬ ಕಾರಣದಿಂದ, ಅನಾದಿಕಾಲದಿಂದಲೂ ಅವರು ದೂರಿಡದೆ ಅನುಸರಿಸುತ್ತ ಬಂದಿರುವ ಧರ್ಮವನ್ನು ತ್ಯಜಿಸುತ್ತೇವೆಂಬ ಬೆದರಿಕೆಯು ಸಾಧುವಾಗಲಾರದು. ಹರಿಜನರು ಹಿಂದೂಕುಲವನ್ನು ತ್ಯಜಿಸಿದರೆ ಬಹುಶಃ ಸನಾತನಿಗಳು ಲಕ್ಷಿಸದೆ ಇರಬಹುದು. ಹೋರಾಟ ನಡೆಸಲು ತಮಗೆ ಕಾರಣವೇ ಇಲ್ಲವಾದಾಗ, ಸುಧಾರಕರಿಗೆ ದಿಕ್ಕು ತೋಚದಂತಾಗುತ್ತದೆ. ಸುದೈವದಿಂದ, ಚಿತ್ರಹಿಂಸೆಗೊಳಗಾದರೂ ತಮ್ಮ ಧರ್ಮದಲ್ಲಿ ಅಚಲನಿಷ್ಠೆಯುಳ್ಳ ಹತ್ತಾರು ಸಹಸ್ರ ಹರಿಜನರಿದ್ದಾರೆ.

ಧರ್ಮವು ಪ್ರಾಮುಖ್ಯವಾಗಿ ವೈಯಕ್ತಿಕ ವಿಷಯ. ಅದು ವ್ಯಕ್ತಿಗೂ ಅವನ ಪರಮಾತ್ಮನಿಗೂ ಸಂಬಂಧಿಸಿದ್ದಾಗಿದೆ. ಅದನ್ನು ಎಂದಿಗೂ ಕೊಡಕೊಳ್ಳುವ ವಿಷಯವನ್ನಾಗಿ ಮಾಡಬಾರದು.

(ಹರಿಜನ, 29–3–1935)

* * *

ಶಿಕ್ಷಣ ಮತ್ತು ಇತರ ಸುಧಾರಣೆಗಳು

ಸ್ವರಾಜ್ಯವನ್ನು ಪಡೆಯುವುದರ ಸಲುವಾಗಿ ಅಸ್ತಿತ್ವದಲ್ಲಿ ಬಂದ ರಾಷ್ಟ್ರೀಯ ಶಾಲೆಗಳು ರಾಷ್ಟ್ರದ ಎದುರಿಗಿರುವ ಕರ್ತವ್ಯ ಹಾಗೂ ಕಾರ್ಯಕ್ರಮದಲ್ಲಿ ಅನುಗುಣವಾಗಿ ಕೆಲಸ ಮಾಡಬೇಕು. ಆದ್ದರಿಂದ 'ಅಸ್ಪೃಶ್ಯ'ರನ್ನು ಸುಶಿಕ್ಷಿತರನ್ನಾಗಿ ಮಾಡುವ ಮತ್ತು ಶಾಲೆಗಳಿಂದ ಅಸ್ಪೃಶ್ಯತೆಯ ಶಾಪವನ್ನು ದೂರಗೊಳಿಸುವ ಕಾರ್ಯವನ್ನು ರಾಷ್ಟ್ರೀಯ ಶಾಲೆಗಳು ಕೈಕೊಳ್ಳಬೇಕು. ತಾತ್ವಿಕವಾಗಿ ರಾಷ್ಟ್ರೀಯ ಶಾಲೆಗಳಲ್ಲಿ 'ಅಸ್ಪೃಶ್ಯ'ರಿಗೆ ಪ್ರವೇಶವಿದ್ದರೂ, ಕೆಲವೇ ಶಾಲೆಗಳಲ್ಲಿ ಮಾತ್ರ ಪತ್ಯಕ್ಷವಾಗಿ 'ಅಸ್ಪೃಶ್ಯ' ವಿದ್ಯಾರ್ಥಿಗಳು ಇದ್ದಾರೆ. 'ಅಸ್ಪೃಶ್ಯ' ವಿದ್ಯಾರ್ಥಿಗಳೊಡನೆ ತಮ್ಮ ತಮ್ಮ ಬಾಲಕರು ಬೆರೆತುಕೊಳ್ಳಬಾರದೆಂದು ಬಯಸುವ ಪಾಲಕರು, ಬೇಕಾದರೆ, ತಮ್ಮ ಬಾಲಕರನ್ನು ಆ ಶಾಲೆಯಿಂದ ಹಿಂತೆಗೆದುಕೊಳ್ಳಬಹುದು. ಶಾಲೆಗಳಲ್ಲಿ 'ಅಸ್ಪೃಶ್ಯ ಬಾಲಕರಿಗೆ ಪ್ರವೇಶ ಕೊಡತಕ್ಕದ್ದಲ್ಲ' ಎಂಬ ನಿಯಮವೇನಾದರೂ ಇದ್ದರೆ, ಅಂಥ ಶಾಲೆಗಳನ್ನು ಮುಚ್ಚುವ ಧೈರ್ಯವನ್ನು ಮಾಡಬೇಕೆಂದು ನಾನು ಶಿಕ್ಷಕರಿಗೆ ಹೇಳುತ್ತೇನೆ. ಕೆಲವು 'ಅಸ್ಪೃಶ್ಯ' ವಿದ್ಯಾರ್ಥಿಗಳು ಶಾಲೆಯನ್ನು ಪ್ರವೇಶಿಸಿದರೆ ಅದನ್ನು ಹೇಗಾದರೂ ಸಹಿಸುವುದು ಮಾತ್ರವಲ್ಲ; ಆದರೆ ಶಾಲೆಗಳಿಗೆ ಅವರು ಬರುವಂತೆ ನಮ್ಮ ಪ್ರೀತಿಯಿಂದ ಅವರನ್ನು ಆಕರ್ಷಿಸಬೇಕು. ಪಾಲಕರು ತಮ್ಮ ಮಕ್ಕಳನ್ನು ಕಳಿಸಲಿ ಎಂದು ಶಿಕ್ಷಕರು ನಿರೀಕ್ಷೆಮಾಡುತ್ತ ಕೂಡದೆ, ಹಾಗೆ ಮಾಡಲು ಪಾಲಕರ ಮನವೊಲಿಸಬೇಕು. ಒಬ್ಬ ರಾಷ್ಟ್ರೀಯ ಶಿಕ್ಷಕನು, ತನ್ನ ಕ್ಷೇತ್ರದಲ್ಲಿ, ಸ್ವರಾಜ್ಯದ ಸಲುವಾಗಿ ದುಡಿಯುವ ಕಾರ್ಯಕರ್ತನಂತೆ ಕೆಲಸಮಾಡಬೇಕು. ಅವನು ತನ್ನ ಶಾಲೆಯ ವಿದ್ಯಾರ್ಥಿಗಳನ್ನು ಕೇವಲ ಶಾಲೆಯಲ್ಲಿ ಮಾತ್ರ ಬಲ್ಲವನಾಗಿರದೆ ಪ್ರತಿಯೊಬ್ಬನ ಪೂರ್ವಾಪರವನ್ನು ಬಲ್ಲವನಾಗಿರಬೇಕು. ಅವನು ಆ ವಿದ್ಯಾರ್ಥಿಗಳ ಪಾಲಕರನ್ನೂ ಬಲ್ಲವನಾಗಿದ್ದು ತನ್ನ ಶಾಲೆಗೆ ಏಕೆ ಮಕ್ಕಳನ್ನು ಕಳಿಸುವುದಿಲ್ಲ ಎಂಬುದನ್ನು ಅರಿತವನಾಗಿರಬೇಕು. ಈ ಎಲ್ಲ ಕೆಲಸವನ್ನು ನಿರ್ವಾಹವಿಲ್ಲದೆ ಮಾಡದೆ ಪ್ರೀತಿಯಿಂದ, ಮನಃಪೂರ್ವಕವಾಗಿ ಮಾಡಬೇಕು. ಹೀಗೆ ಮಾಡಿದಾಗ

ಮಾತ್ರ, ಕಾಂಗ್ರೆಸಿನ ನಿರ್ಣಯದ ಅರ್ಥದ ಪ್ರಕಾರ, ಶಾಲೆಗಳು ರಾಷ್ಟ್ರೀಯ ಮನೋವೃತ್ತಿಯ ಸಂಸ್ಥೆಗಳಾಗುವುವು.

(ಶಿಕ್ಷಕರ ಸಮ್ಮೇಲನದಲ್ಲಿಯ ಭಾಷಣದಿಂದ)

(ಯಂಗ್ ಇಂಡಿಯಾ, 7–8–1924)

ಅಸ್ಪೃಶ್ಯತಾ ನಿವಾರಣೆಯಲ್ಲಿ ಆಸ್ಥೆಯುಳ್ಳವರಿಗೆಲ್ಲ ಹರಿಜನರಿಗೆ ಉಚ್ಚಶಿಕ್ಷಣ ಕೊಡುವ ಬಗ್ಗೆ ಶ್ರೀ ಡೇವಿಡ್‌ರು ತಯಾರಿಸಿದ ಯೋಜನೆಯ ಪರಿಚಯವಿರಬಹುದು. ಆ ಯೋಜನೆಯ ಪ್ರಕಾರ ಸವರ್ಣ ಹಿಂದೂಗಳ ಸಹಾಯದಿಂದ ಅನೇಕ ಯೋಗ್ಯ ಹರಿಜನ ವಿದ್ಯಾರ್ಥಿಗಳು ನಮ್ಮ ದೇಶದಲ್ಲಿ ದೊರೆಯುವ ಅತ್ಯುಚ್ಚ ಶಿಕ್ಷಣ ಪಡೆಯುವರು. ಶ್ರೀ ಡೆವಿಡ್‌ರು ಅದನ್ನು ಹೀಗೆ ವಿವರಿಸಿದ್ದಾರೆ:– "ಭಾರತದಲ್ಲಿ ಎಲ್ಲೆಡೆಗೆ ಸಿರಿವಂತ ಸವರ್ಣ ಹಿಂದೂಗಳು ಪ್ರತಿಯೊಬ್ಬರು ಒಬ್ಬ ಯೋಗ್ಯ ಹರಿಜನ ವಿದ್ಯಾರ್ಥಿಯ ಶಿಕ್ಷಣದ ಖರ್ಚನ್ನು, ಐದುವರ್ಷಗಳವರೆಗೆ ವಹಿಸಬೇಕು. ಆರಿಸಲ್ಪಟ್ಟ ವಿದ್ಯಾರ್ಥಿಗಳಿಗೆ ಶಿಷ್ಯ ವೇತನವನ್ನು ಕೊಡಬೇಕು–ಇದು ಆ ವಿದ್ಯಾರ್ಥಿಯ ಫೀ ಪುಸ್ತಕ ಮತ್ತು ಅನ್ನ–ವಸತಿಗಳ ವೆಚ್ಚಕ್ಕೆ ಸಾಲುವಷ್ಟಿರಬೇಕು. ಪ್ರತಿಯೊಬ್ಬ ಹರಿಜನ ವಿದ್ಯಾರ್ಥಿಗೆ ವರ್ಷಕ್ಕೆ ರೂ. 500 ಕಾಲೇಜು ಶಿಕ್ಷಣಕ್ಕೆ ಮತ್ತು ಅದರ ಅರ್ಧದಷ್ಟು ಹಣ ಶಾಲೆಯಲ್ಲಿಯ ಶಿಕ್ಷಣಕ್ಕೆ–ಹೀಗೆ ಉದಾರಹಸ್ತದಿಂದ ಸಹಾಯಮಾಡಬೇಕು. ಹರಿಜನ ವಿದ್ಯಾರ್ಥಿಗಳಲ್ಲಿ ಸ್ವಾಭಿಮಾನವನ್ನು ಬೆಳೆಸುವುದರ ಸಲುವಾಗಿ ಹೀಗೆ ಪಡೆದ ಸಹಾಯವನ್ನು ಅವನು ಒಳ್ಳೆಯ ಆರ್ಥಿಕ ಸ್ಥಿತಿಯನ್ನು ಪಡೆದ ಕೂಡಲೆ, ಮರಳಿ ಕೊಡಬೇಕು. ಇದಕ್ಕಾಗಿ ಪ್ರತಿಯೊಂದು ಪ್ರಾಂತದಲ್ಲಿ ಸಮಿತಿ ಅಥವಾ ಸಮಿತಿಗಳು ರಚಿಸಲ್ಪಡಬೇಕು. ಈ ಯೋಜನೆಯು ಕಾರ್ಯಗತವಾದರೆ, ಕೆಲವು ಕಾಲದಲ್ಲಿಯೇ ಹರಿಜನರಲ್ಲಿ ವಕೀಲರು, ಶಿಕ್ಷಕರು, ಡಾಕ್ಟರರು, ಇಂಜನಿಯರುಗಳು ಆಗುತ್ತಾರೆ. ಇಂಥ ಜನರ ಸಂಖ್ಯೆ ಹೆಚ್ಚಾದಂತೆ, ಹರಿಜನರ ಸಾಮಾಜಿಕ ಸ್ಥಾನ–ಮಾನಗಳು ಹೆಚ್ಚುವವು... ಎಂಥ ಸನಾತನಿ ಹಿಂದೂವೂ ಇದು ಯೋಗ್ಯವೆಂದು ಒಪ್ಪದೆ ಇರಲಾರನು. "ಅಸ್ಪೃಶ್ಯ"ರ ಬಗೆಗೆ ತಮ್ಮ ಸಹಾನುಭೂತಿಯನ್ನು ಸಕ್ರಿಯವಾಗಿ ವ್ಯಕ್ತಗೊಳಿಸಲು ಸವರ್ಣ ಹಿಂದೂಗಳಿಗೆ ಇದೊಂದು ಸುಸಂಧಿಯಾಗಿದೆ.

ಶ್ರೀ ಡೇವಿಡ್‌ರ ಜೊತೆಗೆ ನಾನೂ ಈ ಯೋಜನೆ ಸವರ್ಣ ಹಿಂದೂಗಳಿಗೆ ಸಮ್ಮತವಾಗುವುದೆಂದೂ, ಜನರಿಂದ ಇದಕ್ಕೆ ಉದಾರ ಸಹಾಯ ದೊರೆವುದೆಂದೂ ನಂಬುತ್ತೇನೆ.

(ಹರಿಜನ, 25–2–1933)

* * *

ಪ್ರಶ್ನೆ : ಹರಿಜನರು ಈಗ ಮಾಡುತ್ತಿರುವ ಉದ್ಯೋಗಗಳಿಂದ ಅವರು "ಅಸ್ಪೃಶ್ಯ"ರೆಂದು ತಿಳಿಯಲ್ಪಡುತ್ತಾರೆ. ಆದ್ದರಿಂದ ಅವರು ತಮ್ಮ ಉದ್ಯೋಗಗಳನ್ನು ಬಿಟ್ಟುಬಿಡಬೇಕೆ?

ಉತ್ತರ : "ಅಸ್ಪೃಶ್ಯರು" ತಮ್ಮ ಉದ್ಯೋಗ – ವ್ಯಾಪಾರಗಳನ್ನು ಬಿಟ್ಟುಬಿಡಬೇಕೆಂದು ನಾನು ಉಪದೇಶಿಸುವುದಿಲ್ಲ.

("ನನ್ನ ಆತ್ಮದ ವ್ಯಥೆ" (1933) ಪು. 42)

* * *

ಅಸ್ಪೃಶ್ಯತೆಯು ಪೂರ್ಣವಾಗಿ ನಿವಾರಿಸಲ್ಪಟ್ಟ ಮೇಲೆ, ಯೋಗ್ಯ ಪಗಾರ ಕೊಟ್ಟು ಸರಿಯಾದ ರೀತಿಯಿಂದ ಭಂಗೀ ಜನರನ್ನು ನಡೆಯಿಸಿಕೊಂಡರೆ ಅವರು ಸ್ವಚ್ಛಗೊಳಿಸುವ ಕೆಲಸವನ್ನು ಮಾಡಲು ಒಪ್ಪಲಿಕ್ಕಿಲ್ಲವೆಂಬ ಹೆದರಿಕೆ ನನಗಿಲ್ಲ. ಜಗತ್ತಿನ ಇತರ ಭಾಗಗಳಲ್ಲಿಯೂ ಯೋಗ್ಯ ರೀತಿಯಿಂದ ಸ್ವಚ್ಛಗೊಳಿಸುವ ಕಾರ್ಯವು ಮಾಡಲ್ಪಡುತ್ತಿದೆ. ಅಸ್ಪೃಶ್ಯತೆಯ ಕಲಂಕವು ನಿವಾರಿತವಾದ ಮೇಲೆ ಒಂದು ವೇಳೆ ಭಂಗೀಜನರು ನಮ್ಮ ಮನೆ ಊರುಗಳನ್ನು ಶುಚಿಗೊಳಿಸುವ ಕಾರ್ಯವನ್ನು ಮಾಡಲು ನಿರಾಕರಿಸಿದರೆ, ಅದನ್ನು ನಾವೇ ಮಾಡಲು ಸಿದ್ಧರಿರಬೇಕು. ಬೇರೆಯವರ ಸಲುವಾಗಿ ಶುಚಿಗೊಳಿಸುವ ಕಾರ್ಯವನ್ನು ಮಾಡುವುದು ಪಾಪ ಅಥವಾ ನಾಚಿಕೆಯ ಕೆಲಸವಲ್ಲ ಎಂಬುದೇ ಅಸ್ಪೃಶ್ಯ ನಿವಾರಣೆಯ ಅರ್ಥ. ತಾಯಿಯು ತನ್ನ ಮಗುವನ್ನು ಸ್ವಚ್ಛಗೊಳಿಸುವುದಿಲ್ಲವೆ? ಅಥವಾ ವೇತನ ಪಡೆಯುವ ದಾಯಿಯು ತನ್ನ ರೋಗಿಯನ್ನು ಶುಚಿಗೊಳಿಸುವುದಿಲ್ಲವೆ?

(ಯಂಗ್ ಇಂಡಿಯಾ, 22–6–1921)

(ಗಾಂಧೀಜಿಯವರು ಅಹಮದಾಬಾದಿನಲ್ಲಿ ದಲಿತವರ್ಗಗಳ ಸಮ್ಮೇಲನದಲ್ಲಿ ಮಾತನಾಡುತ್ತ, "ಅಸ್ಪೃಶ್ಯರನ್ನುದ್ದೇಶಿಸಿ" ಭಾಷಣ ಮಾಡಿದರು. ಅದರ ಕೆಲಭಾಗವನ್ನು ಕೆಳಗೆ ಕೊಟ್ಟಿದೆ.)

ನೀವು ಹಿಂದೂ ಸಮಾಜವನ್ನು ಸ್ವಚ್ಛಗೊಳಿಸುತ್ತಿದ್ದೀರಿ ಎಂಬುದನ್ನು ನೀವು ಅರಿಯಬೇಕು. ಆದ್ದರಿಂದ ನೀವು ನಿಮ್ಮ ಜೀವನವನ್ನು ಪವಿತ್ರಗೊಳಿಸಬೇಕು. ನೀವು ಸ್ವಚ್ಛತೆಯ ರೀತಿಯನ್ನು ಕಲಿಯಬೇಕು. ಅಂದರೆ ಯಾರೂ ನಿಮ್ಮೆಡೆಗೆ ಬೆರಳುಮಾಡಿ ತೋರಿಸಲಾರರು. ಸಾಬೂನಿನಿಂದಾಗಲಿ ಬೇರೆ ಪದಾರ್ಥಗಳಿಂದಾಗಲಿ ನಿಮ್ಮ ದೇಹವನ್ನು ಶುಚಿಯಾಗಿ ಇಡಬೇಕು. ನಿಮ್ಮಲ್ಲಿ ಕೆಲವರು ಮದ್ಯಪಾನ, ಜೂಜು ಮೊದಲಾದ ಚಟಗಳಿಗೆ ಅಂಟಿಕೊಂಡಿದ್ದೀರಿ; ಅವುಗಳನ್ನು ತ್ಯಜಿಸಿರಿ. ನೀವು ಬ್ರಾಹ್ಮಣರ ಕಡೆಗೆ ಬೆರಳುಮಾಡಿ ಹೇಳಬಹುದು– "ಈ ದುಶ್ಚಟಗಳು ಅವರಲ್ಲಿಯೂ ಇವೆ!" ಎಂದು. ಆದರೆ ಅವರು ದಲಿತರೆಂದು ತಿಳಿಯಲ್ಪಟ್ಟಿಲ್ಲ; ಆದರೆ ನೀವು ಹಾಗೆ ತಿಳಿಯಲ್ಪಟ್ಟಿರುವಿರಿ. ನಿಮ್ಮ ಮೇಲೆ ಕರುಣೆದೋರಿ ಸವರ್ಣ ಹಿಂದೂಗಳು ನಿಮ್ಮನ್ನು ಸಮಾನರೆಂದು ತಿಳಿಯಬೇಕು–ಎಂದು ನೀವು ಕೇಳಿಕೊಳ್ಳಬಾರದು. ಅವರು ತಮಗೆ ಬೇಕಾದರೆ, ತಮ್ಮ ಹಿತದ ದೃಷ್ಟಿಯಿಂದಲೇ, ಹಾಗೆ ಮಾಡುವರು. ನೀವು ನಿಮ್ಮ ಪಾವಿತ್ರ್ಯ ಮತ್ತು ಸ್ವಚ್ಛತೆಗಳಿಂದ ಅವರು ಲಜ್ಜೆಪಟ್ಟುಗೊಳ್ಳುವಂತೆ ಮಾಡಬೇಕು.

* * *

ನೀವು ಹಿಂದೂಗಳೆಂದು ಹೇಳಿಕೊಳ್ಳುವಿರಿ; ನೀವು ಭಾಗವತವನ್ನು ಓದುವಿರಿ; ಸವರ್ಣ ಹಿಂದೂಗಳು ನಿಮ್ಮನ್ನು ಕೀಳಾಗಿ ಕಾಣುತ್ತಿದ್ದರೆ ಅದು ಹಿಂದೂ ಧರ್ಮದ ದೋಷವಲ್ಲ. ಅದು ಸವರ್ಣ ಹಿಂದೂಗಳ ಅಪರಾಧ. ನೀವು ನೂಲುವುದನ್ನೂ ನೇಯುವುದನ್ನೂ ಕಲಿಯಬೇಕು. ಅವುಗಳನ್ನು ಉದ್ಯೋಗಗಳೆಂದು ನೀವು ಸ್ವೀಕರಿಸಿದರೆ, ನಿಮಗೆ ದಾರಿದ್ರ್ಯದ ಅಂಜಿಕೆಯಿಲ್ಲ.

ಎಂಜಲನ್ನು–ಅದು ಎಷ್ಟು ಸ್ವಚ್ಛವೆಂದು ಹೇಳಲ್ಪಟ್ಟರೂ ನೀವು ಸ್ವೀಕರಿಸುವುದನ್ನು ನಿಲ್ಲಿಸಬೇಕು. ವಿನಯಪೂರ್ವಕವಾಗಿ ಕೊಟ್ಟ ಒಳ್ಳೆಯ ಕಾಳನ್ನು ನೀವು ಸ್ವೀಕರಿಸಬಹುದು. ನಾನು ಹೇಳಿದ್ದನ್ನೆಲ್ಲ ನೀವು ಮಾಡಲು

ಸಮರ್ಥರಾದರೆ, ನಾಲ್ಕೈದು ತಿಂಗಳಲ್ಲಿ ಅಲ್ಲ, ಆದರೆ ನಾಲ್ಕೈದು ದಿನಗಳಲ್ಲಿ ನೀವು ವಿಮೋಚನೆಯನ್ನು ಪಡೆಯುವಿರಿ.

ಹಿಂದೂಗಳು ಸ್ವಾಭಾವಿಕವಾಗಿಯೇ ಪಾಪಕರ್ಮಿಗಳಾಗಿಲ್ಲ; ಅವರು ಅಜ್ಞಾನದಲ್ಲಿ ಸಿಕ್ಕು ತೊಳಲಾಡುತ್ತಿದ್ದಾರೆ. ಇದೇ ವರ್ಷದಲ್ಲಿ ಅಸ್ಪೃಶ್ಯತೆಯು ನಾಶಹೊಂದಲೇಬೇಕು. "ಅಸ್ಪೃಶ್ಯ"ರ ವಿಮೋಚನೆ ಮತ್ತು ಗೋವುಗಳ ರಕ್ಷಣೆ- ಇವೆರಡೇ ಪ್ರಬಲ ಇಚ್ಛೆಗಳು ನನ್ನನ್ನು ಜೀವಂತವಾಗಿ ಇಟ್ಟಿವೆ. ಈ ಎರಡೂ ಇಚ್ಛೆಗಳು ಈಡೇರಿದೊಡನೆ ಸ್ವರಾಜ್ಯವು ಉದಯಿಸುವುದು. ಅದರಲ್ಲಿಯೇ ನನ್ನ ಮೋಕ್ಷವಿದೆ. ನಿಮ್ಮ ಬಿಡುಗಡೆಗಾಗಿ ಕೆಲಸ ಮಾಡುವ ಶಕ್ತಿಯನ್ನು ಪರಮಾತ್ಮನು ನಿಮಗೆ ದಯಪಾಲಿಸಲಿ.

(ಯಂಗ್ ಇಂಡಿಯಾ, 4–5–1921)

ಹರಿಜನ ಸೇವಕರಿಗೆ ಹಿತೋಕ್ತಿಗಳು

ಈ ಆಂದೋಲನವು ಧಾರ್ಮಿಕವಾಗಿದ್ದು, ಹಿಂದೂ ಧರ್ಮವನ್ನು ಪವಿತ್ರಗೊಳಿಸಿ ಅದನ್ನು ರಕ್ಷಿಸುವ ಉದ್ದೇಶವುಳ್ಳದಾಗಿದ್ದರೆ, ಅದು ಮುಂದುವರಿಯಬೇಕಾದದ್ದು ಕೇವಲ ಮತ್ತು ಪೂರ್ಣವಾದ ಸತ್ಯದಿಂದ ಮಾತ್ರ. ಸತ್ಯವು ಧರ್ಮದ ಅಡಿಗಲ್ಲಾಗಿದೆ. ಸತ್ಯವೇ ದೇವರು; ಎಂದ ಬಳಿಕ ಧರ್ಮದಲ್ಲಿ ಅಸತ್ಯಕ್ಕೆ ಅವಕಾಶವೇ ಇಲ್ಲ. ಪ್ರತಿಯೊಬ್ಬ ಹರಿಜನ ಸೇವಕನು ಈ ಮೂಲತತ್ವವನ್ನು ತನ್ನ ಹೃದಯಫಲಕದ ಮೇಲೆ ಬರೆದಿಟ್ಟುಕೊಳ್ಳಲಿ. ಅತಿಶಯೋಕ್ತಿಯೂ ಒಂದು ಪ್ರಕಾರದ ಅಸತ್ಯವೆಂಬುದನ್ನು ಹರಿಜನ ಸೇವಕರು ಅರಿಯಲಿ. ನಾನು ಮತ್ತೆ ಉಪವಾಸ ಪ್ರಾರಂಭಿಸಬಾರದೆಂದು ಹರಿಜನರಿಗಾಗಿ ತೆರೆಯಲ್ಪಟ್ಟ ದೇವಾಲಯ, ಬಾವಿಗಳ ಸಂಖ್ಯೆಯನ್ನು ಹೆಚ್ಚಿಸುವ ಪ್ರವೃತ್ತಿ ಕಂಡುಬರುತ್ತದೆ. ಇದೊಂದು ನನಗೆ ನಿರಾಶೆ ಹುಟ್ಟಿಸುವ ಮಾತಾಗಿದೆ; ಮತ್ತು ಈ ಮಹಾ ಆಂದೋಲನ ಬಗೆಗೆ ಅಗೌರವದ ಕಲ್ಪನೆಯನ್ನು ಹುಟ್ಟಿಸುತ್ತದೆ. ಜನರಿಗೆ ಯಾವುದೇ ರೀತಿಯಿಂದ ಒತ್ತಾಯ ತರುವುದು ನನ್ನ ಉಪವಾಸದ ಉದ್ದೇಶವಾಗಿರಲಿಲ್ಲ. ಹಿಂದೂಗಳು ವಿಚಾರಮಾಡಿ ಕಾರ್ಯಪ್ರವೃತ್ತರಾಗಲೆಂಬುದು ನನ್ನ ಉಪವಾಸದ ಉದ್ದೇಶವಾಗಿತ್ತು. ಸತ್ಯವು ಕಠೋರವಾಗಿದೆ; ಬೇಕಾದಷ್ಟು ಬೆಲೆಯುಳ್ಳ ವ್ಯಕ್ತಿಯ ಅಥವಾ ವ್ಯಕ್ತಿಗಳ ಜೀವಕ್ಕಿಂತ ಅದು ಹೆಚ್ಚು ಬೆಲೆಯುಳ್ಳದ್ದೆಂದೂ ತಿಳಿಯಲೇಬೇಕು. ಲಕ್ಷಗಟ್ಟಲೆ ಜೀವಿಗಳನ್ನು ಬಲಿಕೊಟ್ಟಾದರೂ ಸತ್ಯವು ಬಾಳಬೇಕು. ಅನೇಕರು ಹಿಂದೂ ಧರ್ಮದ ಅವಿಭಾಜ್ಯ ಅಂಗವೆಂದು ನಂಬಿದ ಅಸ್ಪೃಶ್ಯತೆಯ ವಿರುದ್ಧ ನಡೆದಿರುವ ಈ ದೊಡ್ಡ ಧಾರ್ಮಿಕ ಆಂದೋಲವು ಯಶಸ್ವಿಯಾಗಲು ಕೇವಲ ಸತ್ಯ ಮತ್ತು ಅಜೇಯ ವಿಶ್ವಾಸಗಳು ಅವಶ್ಯವಾಗಿರುತ್ತವೆ. ಸುಧಾರಕರು ಅಸ್ಪೃಶ್ಯತೆಯನ್ನೇ ಹಿಂದೂ ಧರ್ಮದ ಒಂದು ದೊಡ್ಡ ಕಲಂಕವೆಂದೂ, ಮಹಾ ಅಸತ್ಯವೆಂದೂ ಭಾವಿಸಿದ್ದಾರೆ. ಹೀಗಿದ್ದ ಮೇಲೆ, ಸತ್ಯ ಮತ್ತು ಕರುಣೆಗಳಿಂದಲೇ ಅದನ್ನು ಸೋಲಿಸುವುದು ಸಾಧ್ಯ.

(ಹರಿಜನ, 18–3–1933)

* * *

ಅಸ್ಪೃಶ್ಯತೆಯನ್ನು ನಿವಾರಿಸಲು ನೀವು ಏನು ಮಾಡುವಿರಿ? "ಅಸ್ಪೃಶ್ಯತೆಯು ಹಿಂದೂ ಧರ್ಮದ ಒಂದು ದೊಡ್ಡ ಕಲಂಕ" ಎಂದು ಸಾರುವುದರಿಂದ ನೀವು ಕೃತಕೃತ್ಯರಾದಿರಿ ಎಂದು ಭಾವಿಸಿದರೆ, ಅದು ಹಾಸ್ಯಾಸ್ಪದವಾದ ಮಾತು. ಉತ್ಸಾಹದ ಭರದಲ್ಲಿ ನೀವು ಒಬ್ಬ ಹರಿಜನನ ಹತ್ತಿರ ಹೋಗಿ, ಅವನನ್ನು ಸ್ಪರ್ಶಿಸಿ ಅಪ್ಪಿಕೊಂಡರೆ, ಹಾಗೂ ಅನಂತರ ಅವನನ್ನು ಮರೆತು ಬಿಟ್ಟರೆ ಅದೂ ಸಾಲದು. ನೀವು ಪ್ರತಿ ದಿನವೂ ಹರಿಜನ ಕೇರಿಗೆ ಹೋಗಿ, ನಿಮ್ಮ ವಿಶ್ವಾಸದ ಗುರುತೆಂದು ಅನೇಕ ಹರಿಜನರನ್ನು ಸ್ಪರ್ಶಿಸಿದರೂ ನಿಮ್ಮ ಕರ್ತವ್ಯ ಮುಗಿಯಲಿಲ್ಲ.

ನಿಮ್ಮನ್ನು ನೋಡುವ ಹರಿಜನರಿಗೆ ತಮ್ಮೆಲ್ಲರ ಭಾಗ್ಯೋದಯದ ದಿನ ಉದಯಿಸಿದೆ ಎಂಬ ಭಾವನೆ ಉಂಟಾಗುವಂತೆ ನೀವು ನಿಮ್ಮ ಪ್ರತಿ ನಿತ್ಯದ ಜೀವನವನ್ನು ನಿಯಂತ್ರಿಸಿಕೊಳ್ಳುವುದು ನಿಮ್ಮ ಕರ್ತವ್ಯವಾಗಿದೆ.

(ಕೆಂಗೇರಿಯಲ್ಲಿಯ ಸಮ್ಮೇಳನದಲ್ಲಿಯ ಭಾಷಣದಿಂದ)

(ಹರಿಜನ, 20–6–1936)

* * *

ಹರಿಜನ ಸೇವೆಯೆ ಆಗಲಿ, ಅಥವಾ ದೀನ, ದರಿದ್ರ, ಅಸಹಾಯಕ ಸೇವೆಯೆ ಆಗಲಿ, ಪರಿಣಾಮಕಾರಿಯಾಗಬೇಕಾದರೆ ಆ ಸೇವಕನ ಚಾರಿತ್ರ್ಯವು ಪರಿಶುದ್ಧವಾಗಿರುವುದು ಅವಶ್ಯ. ಅದು ಇಲ್ಲದೆ, ಶ್ರೇಷ್ಠ ಬುದ್ಧಿಶಕ್ತಿಯಾಗಲಿ ಅಥವಾ ದಕ್ಷ ಆಡಳಿತೆಯ ಶಕ್ತಿಯಾಗಲಿ ಉಪಯೋಗ ಬೀಳಲಾರದು. ಅಷ್ಟೇ ಅಲ್ಲ ಅವು ಬಾಧಕವಾಗಬಹುದು; ಅದೇ ಶುದ್ಧ ಚಾರಿತ್ರ್ಯ ಮತ್ತು ಸೇವಾಪ್ರಿಯತೆಗಳು ಇಂಥ ಬುದ್ಧಿಯ ಮತ್ತು ಆಡಳಿತೆಯ ಶಕ್ತಿಗಳನ್ನು ಉತ್ಪಾದಿಸುತ್ತವೆ.

* * *

ಸಾರ್ವಜನಿಕ ಕಾರ್ಯಕರ್ತನ ಚಾರಿತ್ರ್ಯವನ್ನು ಸಂಪೂರ್ಣವಾಗಿ ಅಲಕ್ಷಿಸಿಬಿಟ್ಟು, ಅವನೊಬ್ಬ ಆಡಳಿತೆಯ ಯಂತ್ರದಲ್ಲಿಯ ಒಂದು ಭಾಗವೆನ್ನುವಂತೆ ಅವನನ್ನು ಕಾಣುವುದು ಇಂದಿನ ಸಾರ್ವಜನಿಕ ಜೀವನದ ಪ್ರವೃತ್ತಿಯಾಗಿದೆ. ಚಾರಿತ್ರ್ಯವು ಆಯಾ ವ್ಯಕ್ತಿಯ ಖಾಸಗೀ ವಿಷಯವೆಂದು

ಹೇಳಲಾಗುತ್ತಿದೆ. ಇಂಥ ಪ್ರವೃತ್ತಿಯು ಅನೇಕಸಲ ಕಂಡುಬಂದರೂ, ನಾನು ಮಾತ್ರ ಇದನ್ನು ಸ್ವೀಕರಿಸುವುದೂ ಒತ್ತಟ್ಟಿಗಿರಲಿ, ಮೆಚ್ಚಿಯೂ ಇಲ್ಲ. ಸಮಾಜಸೇವಕನ ಚಾರಿತ್ರ್ಯಕ್ಕೆ ಎಳ್ಳಷ್ಟೂ ಮಹತ್ವ ಕೊಡದೆ ಇದ್ದ ಸಂಸ್ಥೆಗಳ ಸ್ಥಿತಿಯು ಏನಾಗಿದೆಯೆಂಬುದು ನನಗೆ ಗೊತ್ತಿದೆ. ಅದೇನೆ ಇದ್ದರೂ, ಲಕ್ಷಾವಧಿ ಮೂಕಜೀವಿಗಳ ಕಲ್ಯಾಣದ ಕಾರ್ಯವನ್ನು ಕೈಕೊಂಡ "ಹರಿಜನ ಸೇವಕ ಸಂಘ"ದ ಸೇವಕರ ಬಗೆಗೆ ಮಾತ್ರ ನಾನು ಈಗ ಹೇಳುತ್ತೇನೆ. ಇಂಥ ಸೇವೆಯನ್ನು ಕೈಕೊಂಡವರಲ್ಲಿ ಪರಿಶುದ್ಧವಾದ ಚಾರಿತ್ರ್ಯವಿರುವುದು ಅತ್ಯಂತ ಅವಶ್ಯ ಎಂಬ ಮಾತಿನ ಬಗೆಗೆ ನನ್ನಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಹರಿಜನ ಸೇವೆಯಲ್ಲಿ ಅಥವಾ ಖಾದಿ ಮತ್ತು ಗ್ರಾಮೋದ್ಯೋಗಿಗಳಲ್ಲಿ ತೊಡಗಿದ ಕಾರ್ಯಕರ್ತರು ಯಾವ ಪಾಪವನ್ನೂ ಅರಿಯದ, ಸುಧಾರಣೆಯನ್ನು ಹೊಂದದ, ಅಶಿಕ್ಷಿತ ಸ್ತ್ರೀ–ಪುರುಷರ ಅತಿನಿಕಟವರ್ತಿಗಳಾಗಿ ಕೆಲಸ ಮಾಡುವ ಪ್ರಸಂಗಗಳು ಬರುತ್ತವೆ. ಆದ್ದರಿಂದ ಇಂಥ ಕಾರ್ಯಕರ್ತರಿಗೆ ಚಾರಿತ್ರ್ಯವಿಲ್ಲದಿದ್ದರೆ, ಅವರು ಅಯಶಸ್ವಿಯಾಗುವರಲ್ಲದೆ, ತಾವು ಕೆಲಸ ಮಾಡುವ ಕ್ಷೇತ್ರದಲ್ಲಿ, ಆ ಕೆಲಸದ ಹೆಸರನ್ನೂ ಕೊನೆಯವರೆಗೆ ಕೆಡಿಸುವರು. ನಾನು ಇಂಥ ಘಟನೆಗಳ ಅನುಭವದಿಂದ ಬರೆಯುತ್ತಿದ್ದೇನೆ. ಆದರೆ, ಇಂಥ ಸೇವೆಯಲ್ಲಿ ತೊಡಗಿದ ಕಾರ್ಯಕರ್ತರ ಸಂಖ್ಯೆಗೆ ಹೋಲಿಸಿದರೆ ಅಂಥ ದುರ್ಘಟನೆಗಳು ಕಡಿಮೆ ಎನ್ನಬೇಕು. ಆದರೆ ಇಂಥ ಕೆಲಸ ಕೈಕೊಳ್ಳುವ ಸಂಸ್ಥೆಗಳು ಮತ್ತು ಕಾರ್ಯಕರ್ತರು ಈ ಉದಾಹರಣೆಗಳಿಂದ ಎಚ್ಚರಹೊಂದಿ ಪಾಠ ಕಲಿಯುವುದು ಅವಶ್ಯವಾಗಿದೆ. ಈ ವಿಷಯದಲ್ಲಿ ಕಾರ್ಯಕರ್ತರು ಎಷ್ಟು ಜಾಗರೂಕರಾಗಿದ್ದರೂ ಮತ್ತು ಎಷ್ಟು ಶ್ರಮವಹಿಸಿದರೂ ಅದು ಕಡಿಮೆಯೇ ಸರಿ.

(ಹರಿಜನ, 7–11–1936)

* * *

ಪ್ರಶ್ನೆ : ತನ್ನ ಕಾರ್ಯವು ಪರಿಣಾಮಕಾರಿಯಾಗಲು ಹರಿಜನ ಸೇವಕನಿಗಿರಬೇಕಾದ ಅರ್ಹತೆಗಳು ಯಾವುವು?

ಉತ್ತರ : ಪ್ರತಿಯೊಬ್ಬ ಸೇವಕನು ಹಿಂದೂ ಧರ್ಮವನ್ನು ಪರಿಶುದ್ಧಗೊಳಿಸಲು ಅತ್ಯಾಸಕ್ತಿಯುಳ್ಳವನಾಗಿರಬೇಕು, ಮತ್ತು ಆ ಪ್ರಯತ್ನದಲ್ಲಿ ತನ್ನ ಪ್ರಾಣವನ್ನು ಅರ್ಪಿಸಲು ಸಿದ್ಧನಿರಬೇಕು. ಹಿಂದೂ ಧರ್ಮದ ಕಲಂಕವನ್ನು ನಿವಾರಿಸಲು ಇಂಥ ಸೇವಕನು ತನ್ನ ಬಂಧು-ಬಳಗದವರ ಸಂಬಂಧ, ಸಾಮಾಜಿಕ ಗೌರವ, ತನ್ನ ಪ್ರಾಣವನ್ನೂ ಕೂಡ-ತ್ಯಾಗಮಾಡಲು ಸಿದ್ಧನಿರಬೇಕು. ಅವನು ಈ ಕೆಲಸಕ್ಕಾಗಿ ಲಾಭ ಅಥವಾ ಬಹುಮಾನವನ್ನು ಅಪೇಕ್ಷಿಸದೆ, ಸ್ನಾನ, ಪ್ರಾರ್ಥನೆಗಳಂತೆ ತನ್ನ ಜೀವನದ ಅವಶ್ಯಕ ಕರ್ತವ್ಯವೆಂದು ಭಾವಿಸಬೇಕು. ಇಷ್ಟು ಮಟ್ಟಿಗೆ ಅವನಲ್ಲಿ ಕೆಲಸದ ಆಸಕ್ತಿಯಿದ್ದರೆ, ಅವನು ಅನುಸರಿಸಬೇಕಾದ ಮಾರ್ಗವು ಅವನೆದುರು ತಾನಾಗಿಯೇ ಸ್ಪಷ್ಟವಾಗುವುದು. ಹೀಗೆ, ಹರಿಜನರು ಹೊಟ್ಟೆಗೆ ಆಹಾರವಿಲ್ಲದೆ ಬಳಲುತ್ತಿದ್ದರೆ, ಅವರಿಗಿಂತ ಮೊದಲು ತಾನು ಉಪವಾಸ ಮಾಡುವನು; ಹರಿಜನರಿಗೆ ದೊರಕದ ಅನುಕೂಲತೆಗಳನ್ನು ತಾನೆಂದೂ ಉಪಯೋಗಿಸನು; ಪ್ರತಿ ದಿನವೂ ಅವರೊಡನೆ ಹೆಚ್ಚೆಚ್ಚು ಒಂದಾಗುವನು. ರಾಜಕೀಯ ಪರಿಣಾಮಗಳನ್ನು ಲಕ್ಷಿಸದೆ ಈ ಎಲ್ಲ ಕಾರ್ಯವು ಮಾಡಲ್ಪಡಬೇಕು. ಈ ಕಾರ್ಯದ ಏಕಮೇವ ಉದ್ದೇಶವೆಂದರೆ ಹಿಂದೂ ಧರ್ಮವನ್ನು ಪರಿಶುದ್ಧವಾಗಿಯೂ, ಜೀವಂತವಾಗಿಯೂ ಇಡುವುದೇ ಆಗಿದೆ.

(ಹರಿಜನ, 1-2-1942)

* * *

ಗಾಂಧೀಜಿ ಅವರ ಜೀವನ ಘಟನಾವಳಿಗಳು

ಪೋರಬಂದರದಲ್ಲಿ ಜನನ	2.10.1869
ಕಸ್ತೂರ್‌ಬಾರೊಂದಿಗೆ ವಿವಾಹ	1881
ಮೆಟ್ರಕ್ಯುಲೇಶನ್ ಉತ್ತೀರ್ಣರಾದದ್ದು	1887
ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ಪ್ರಯಾಣ	1888
ಬ್ಯಾರಿಸ್ಟರರಾಗಿ ದಾಖಲಾತಿ	1891
ಮರಳಿ ಭಾರತಕ್ಕೆ	1891
ದಕ್ಷಿಣ ಆಫ್ರಿಕಾಕ್ಕೆ ಹಡಗಿನಲ್ಲಿ ಪ್ರಯಾಣ	1893
ಭಾರತ ಸಂದರ್ಶನ	1896
	ಮತ್ತು 1901
ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಪಾಲ್ಗೊಂಡಿದ್ದು	1901
ಇಂಡಿಯನ್ ಒಪಿನಿಯನ್ ಪತ್ರಿಕೆಯ ಪ್ರಾರಂಭ	1903
ಫೀನಿಕ್ಸ್ ಆಶ್ರಮ ಸ್ಥಾಪನೆ	1904
ಬೋರ್ ಯುದ್ಧ ಮತ್ತು ಜೂಲು ದಂಗೆಯಲ್ಲಿ	
ಇಂಡಿಯನ್ ಅಂಬುಲೆನ್ಸ್ ಕೋರ್ ನೇತೃತ್ವ	1899
	ಮತ್ತು 1906
ಬ್ರಹ್ಮಚರ್ಯ ವ್ರತ ಸ್ವೀಕಾರ	1906
ಇಂಗ್ಲೆಂಡಿಗೆ ಪ್ರಯಾಣ	1906
	ಮತ್ತು 1909
ದಕ್ಷಿಣ ಆಫ್ರಿಕಾದಲ್ಲಿ ಪ್ರಥಮ ಜೈಲುವಾಸ	1908
ಟಾಲ್‌ಸ್ಟಾಯ್ ಆಶ್ರಮ ಸ್ಥಾಪನೆ	1910
ದಕ್ಷಿಣ ಆಫ್ರಿಕಾದಲ್ಲಿ ಚಾರಿತ್ರಿಕ ಸತ್ಯಾಗ್ರಹ ಆರಂಭ	1913
ಭಾರತಕ್ಕೆ ಆಗಮನ	1915

ಸಾಬರಮತಿ ಆಶ್ರಮ ಸ್ಥಾಪನೆ	1915
ಖೇಡಾದಲ್ಲಿ ಕರನಿರಾಕರಣೆ ಚಳುವಳಿ	1918
ಜಲಿಯನ್ ವಾಲಾಬಾಗ್ ಹತ್ಯಾಕಾಂಡ	1919
ಯಂಗ್ ಇಂಡಿಯಾ, ನವಜೀವನ ಪತ್ರಿಕೆಗಳ ಆರಂಭ	1919
ಅಸಹಕಾರ ಆಂದೋಲನ	1921
ಭಾರತದಲ್ಲಿ ಪ್ರಥಮ ಜೈಲುವಾಸ	1922
ಖಾದಿ ಪ್ರವಾಸ	1927
ಉಪ್ಪಿನ ಸತ್ಯಾಗ್ರಹ ಮತ್ತು ದಾಂಡೀಯಾತ್ರೆ	1930
ಯೂರೋಪು ಸಂದರ್ಶನ ಮತ್ತು ದುಂಡು ಮೇಜಿನ ಪರಿಷತ್ತು	1931
ಸೇವಾಗ್ರಾಮ ಆಶ್ರಮ ಸ್ಥಾಪನೆ	1933
ಹರಿಜನ ಯಾತ್ರೆ	1933
ಹರಿಜನ ಸಾಪ್ತಾಹಿಕ ಪ್ರಾರಂಭ	1933
ನಯೀ ತಾಲೀಂ ಶಿಕ್ಷಣ ಪದ್ಧತಿ ಪ್ರಾರಂಭ	1937
"ಭಾರತ ಬಿಟ್ಟು ತೊಲಗಿ" ಚಳುವಳಿ	1942
ಕೊನೆಯ ಬಾರಿಗೆ ಆಗಾಖಾನ್ ಅರಮನೆಯಲ್ಲಿ ಸೆರೆವಾಸ	1942–44
ಹಂತಕನ ಗುಂಡೇಟಗೆ ಬಲಿ	30–1–1948

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಪ್ರಕಟಣೆಗಳು

1.	ಆರೋಗ್ಯ ರಹಸ್ಯ	10–00
2.	ಕರ್ನಾಟಕದಲ್ಲಿ ಗಾಂಧೀ	5–00
3.	ರಾಮನಾಮ	6–00
4.	ಗಾಂಧೀ ಬಳಗದ ವಿದೇಶಿಯರು	40–00
5.	ಆರೋಗ್ಯ	8–00
6.	ಪ್ರಾರ್ಥನೆ	8–00
7.	ಸತ್ಯಾಗ್ರಹ	8–00
8.	ಮಹಿಳೆಯರಿಗಾಗಿ	8–00
9.	ಪಂಚಾಯತ್ ರಾಜ್	12–00
10.	ಆದರ್ಶಗಳು	12–00
11.	ನಮ್ಮ ಗಾಂಧೀ ತಾತ	25–00
12.	ದೇವನಗರಿಯಲ್ಲಿ ಗಾಂಧೀ ಧ್ವನಿ	2–00
13.	ನಮ್ಮ ಗಾಂಧೀ ತಾತ	15–00
14.	ಹೋರಾಟ ಶ್ರೀ	40–00
15.	ಮಹಾತ್ಮ ಗಾಂಧೀಜಿಯವರ ಮೈಲಿಗಲ್ಲು	3–00
16.	ಗಾಂಧೀಜಿ ಜೀವನ ಚರಿತ್ರೆ	25–00
17.	ಕುವೆಂಪು ಕಂಡ ಗಾಂಧೀ	25–00
18.	ಉಪ್ಪಿನ ಸತ್ಯಾಗ್ರಹ	5–00
19.	ಹಿಂದ್ ಸ್ವರಾಜ್	50–00
20.	ಗಾಂಧೀ ಮತ್ತು ಆಧ್ಯಾತ್ಮಿಕ ಜೀವನ	25–00
21.	ನನ್ನ ಕನಸಿನ ಭಾರತ	30–00
22.	ಹಿಂದೂ ಧರ್ಮ	25–00
23.	ಮಹಿಳೆಯರು	30–00
24.	ಸ್ವಾತಂತ್ರ್ಯ	25–00
25.	ಅಸ್ಪೃಶ್ಯತೆ	30–00
26.	ಒಳ್ಳೆಯ ಜೀವನ	25–00
27.	ಪ್ರಾರ್ಥನೆ	25–00
28.	ಗಾಂಧೀ ಮತ್ತು ಕರ್ನಾಟಕ	200–00
29.	ಸತ್ಯ	30–00
30.	ವಿದ್ಯಾರ್ಥಿಗಳಿಗಾಗಿ	30–00
31.	ಸರ್ವೋದಯ	30–00

32. ಖಾದಿ ಗ್ರಾಮೋದ್ಯೋಗ 30-00
33. ನನ್ನ ಬಾಲ್ಯದ ನೆನಪುಗಳು 30-00
34. ಗ್ರಾಮರಾಜ್ಯ ಆಡಳಿತ 5-00
35. ನನ್ನ ಕನಸಿನ ಸ್ವರಾಜ್ಯ 5-00
36. ಗಾಂಧೀ ಮತ್ತು ಹಾಸ್ಯ 20-00
37. ನನ್ನ ಆದರ್ಶಗ್ರಾಮ 5-00
38. ಮಹಾತ್ಮ ಗಾಂಧೀ ವಿಚಾರಗಳು ಹಾಗೂ ವ್ಯವಸ್ಥಾಪನ ಪದ್ಧತಿ 48-00
39. ಸತ್ಯಾಗ್ರಹಿ 40-00
40. ಗ್ರಾಮದಾನ ಗ್ರಾಮ ಸ್ವರಾಜ್ಯ 25-00
41. ಗಾಂಧೀಜಿಯವರ ಪ್ರಾತ: ಸಾಯಂ ಪ್ರಾರ್ಥನೆ ಮತ್ತು ಭಜನೆ
42. ಉಪ್ಪಿನ ಸತ್ಯಾಗ್ರಹ ಮತ್ತು ಮೈಲಾರ ಮಹಾದೇವ 5-00
43. ಸತ್ಯಾಗ್ರಹ 5-00
44. ಹಿಂದ್ ಸ್ವರಾಜ್ 5-00
45. ಆರೋಗ್ಯ 5-00
46. ಮಹಾತ್ಮ ಗಾಂಧಿ ಪ್ರಸ್ತುತತೆ 10-00
47. ಬಹುರೂಪಿ ಗಾಂಧಿ 10-00
48. ನಂದಿ ಗಿರಿಧಾಮದಲ್ಲಿ ಮಹಾತ್ಮ ಗಾಂಧಿ 30-00
49. ಕೃತಯುಗಿ ವಿನೋಬಾ ಭಾವೆ 15-00
50. ಮೋಹನ ತರಂಗ 40-00
51. ನಮ್ಮ ಗಾಂಧಿ ತಾತ 5-00
52. ಗೀತಾ ಪ್ರವಚನ 80-00
53. ಜೆ.ಪಿ. ಜೀವನ ಹಾದಿ 45-00
54. ಗಣ್ಯರು ಕಂಡಂತೆ ಗಾಂಧಿ 20.0
55. ಗೀತಾಮಾತೆ 80.00
56. Temple & Mosque 10-00
57. Rastrapita Mahatma Gandhi 25-00
58. Swarajya of Dreams 5-00
59. Gandhi My Grand Father 5-00
60. Grand Pa Gandhi 5-00
61. Relevance of Gandhi 20-00
62. Vinoba age of the sage 20.00

ಕರ್ನಾಟಕದಲ್ಲಿ ಗಾಂಧೀಜಿ ಬೇಟಿ ನೀಡಿದ ಸ್ಥಳಗಳು

● ಬೆಂಗಳೂರು	ದಿ. 08-05-1915
● ಬೆಳಗಾವಿ	ದಿ. 27-04-1916 ರಿಂದ ದಿ. 01-05-1916 ರವರೆಗೆ
● ಬಿಜಾಪುರ	ದಿ. 05-05-1918 ರಿಂದ ದಿ. 06-05-1918 ರವರೆಗೆ
● ಕಾಸರಗೋಡು	ದಿ. 19-08-1920
● ಮಂಗಳೂರು	ದಿ. 20-08-1920
● ಬೆಂಗಳೂರು	ದಿ. 21-08-1920
● ನಿಪ್ಪಾಣಿ, ಚಿಕ್ಕೋಡಿ, ಹುಕ್ಕೇರಿ ಸಂಕೇಶ್ವರ, ಬೆಳಗಾವಿ	ದಿ. 08-11-1920
● ಬೆಳಗಾವಿ ಶಹಾಪುರ ಖಾನಾಪುರ, ನಂದಗಢ ಹಳ್ಯಾಳ	ದಿ. 09-11-1920
● ಧಾರವಾಡ	ದಿ. 10-11-1920
● ಹುಬ್ಬಳ್ಳಿ, ಗದಗ	ದಿ. 11-11-1920
● ಸಾಂಗಲಿ	ದಿ. 12-11-1920
● ಬಾಗಲಕೋಟೆ	ದಿ. 27-05-1921
● ಬಿಜಾಪುರ, ಸೊಲ್ಲಾಪುರ	ದಿ. 28-05-1921
● ಬಳ್ಳಾರಿ	ದಿ. 30-05-1921
● ಬೆಳಗಾವಿ	ದಿ. 21-12-1924 ರಿಂದ ದಿ. 30-12-1924 ರವರೆಗೆ
● ಗುಲ್ಬರ್ಗಾ	ದಿ. 22-02-1927
● ನಿಪ್ಪಾಣಿ	ದಿ. 28-03-1927 ರಿಂದ ದಿ. 30-12-1924 ರವರೆಗೆ

• ಬೆಳಗಾವಿ	ದಿ. 19–04–1027 ರಿಂದ ದಿ. 20–004–1927ರವರೆಗೆ
• ಬೆಂಗಳೂರು	ದಿ. 06–06–1927 ರಿಂದ ದಿ. 13–07–1927 ರವರೆಗೆ
• ತುಮಕೂರು	ದಿ. 14–07–1927
• ತುಮಕೂರು, ಮಧುಗಿರಿ	ದಿ. 15–07–1927
• ತುಮಕೂರು	ದಿ. 16–07–1927
• ಬೆಂಗಳೂರು	ದಿ. 17–07–1927
• ಬೆಂಗಳೂರು	ದಿ. 18–07–1927
• ಕೃಷ್ಣರಾಜಸಾಗರ, ಯಡತೊರೆ ಶ್ರೀರಂಗಪಟ್ಟಣ	ದಿ. 19–07–1927
• ಮೈಸೂರು	ದಿ. 22–07–1927
• ಬೆಂಗಳೂರು	ದಿ. 12–07–1927 ರಿಂದ ದಿ. 30–07–1927 ರವರೆಗೆ
• ಕ್ಲೊಸ್‌ಪೇಟೆ (ರಾಮನಗರ)	ದಿ. 31–07–1927
• ಕಾನಕನಹಳ್ಳಿ (ಕನಕಪುರ)	
• ಬೆಂಗಳೂರು	ದಿ. 01–08–1927
• ಅರಸೀಕರೆ, ಹಾಸನ	ದಿ. 02–08–1927
• ಹಾಸನ	ದಿ. 03–08–1927
• ಹಾಸನ, ಹೊಳೆನರಸೀಪುರ	ದಿ. 04–08–1927
• ಬೆಂಗಳೂರು	ದಿ. 05–08–1927 ರಿಂದ ದಿ. 11–08–1927 ರವರೆಗೆ
• ದಾವಣಗೆರೆ	ದಿ. 12–08–1927
• ಹರಿಹರ, ಹೊನ್ನಾಳಿ ಮಲೆಬೆನ್ನೂರು	ದಿ. 13–08–1927
• ಶಿವಮೊಗ್ಗ	ದಿ. 15–08–1927

• ಆಯನೂರು, ಕುಂಸಿ, ಸಾಗರ ಶಿವಮೊಗ್ಗ, ತೀರ್ಥಹಳ್ಳಿ ಮಂದಗದ್ದೆ, ರಾಜನೂರು	ದಿ. 17-08-1927
• ಶಿವಮೊಗ್ಗ	ದಿ. 15-08-1927
• ಭದ್ರಾವತಿ, ತರೀಕೆರೆ	ದಿ. 18-08-1927
• ಬೀರೂರು, ಕಡೂರು	
• ಚಿಕ್ಕಮಗಳೂರು	ದಿ. 19-08-1927
• ಬೇಲೂರು, ಹಳೇಬೀಡು	ದಿ. 20-08-1927
• ಅರಸೀಕರೆ	
• ತಿಪಟೂರು	ದಿ. 21-08-1927
• ಬೆಂಗಳೂರು	ದಿ. 22-08-1927
• ಬೆಂಗಳೂರು	ದಿ. 23-08-1927
• ಹೊಸೂರು, ಸೂಳಗಿರಿ ಕೃಷ್ಣಗಿರಿ	ದಿ. 24-08-1927
• ಬೆಂಗಳೂರು	ದಿ. 25-08-1927 ರಿಂದ ದಿ. 30-08-1927 ರವರೆಗೆ
• ಹಿಂದೂಪುರ, ವಿಧುರಾಶ್ವಥ ಗೌರಿಬಿದನೂರು ದೊಡ್ಡಬಳ್ಳಾಪುರ, ತುಮಕೂರು ತ್ಯಾಮಗೊಂಡ್ಲು, ನೆಲಮಂಗಲ ಬೆಂಗಳೂರು, ಮೈಸೂರು	ದಿ. 04-01-1934
• ತಗಡೂರು, ಬದನವಾಳ ನಂಜನಗೂಡು, ಮೈಸೂರು	ದಿ. 05-01-1934
• ಮಂಡ್ಯ, ರಾಮನಗರ ಕನಕಪುರ, ಬಿಡದಿ, ಕೆಂಗೇರಿ	ದಿ. 06-01-1934
• ಬೆಂಗಳೂರು	ದಿ. 07-01-1934 ರಿಂದ ದಿ. 09-01-1934 ರವರೆಗೆ

- ಪೊನ್ನಂಪೇಟೆ, ಹುದಿಕೇರಿ ದಿ. 22-02-1934
- ವಿರಾಜಪೇಟೆ, ಬೆಳ್ಳೂರು ದಿ. 23-02-1934
- ಸೋಮವಾರ ಪೇಟೆ
- ಗುಂಡುಕಟ್ಟೆ
- ಮಡಿಕೇರಿ, ಸಂಪಾಜೆ, ಸುಳ್ಯ ದಿ. 24-02-1934
- ಪುತ್ತೂರು, ಉಪ್ಪಿನಂಗಡಿ
- ವಿಠಲಗಬ್ಬ, ಕಲ್ಲಡ್ಕ, ಪಾಣೆ
- ಮಂಗಳೂರು, ಬಂಟ್ವಾಳ
- ಮಂಗಳೂರು
- ಮಂಗಳೂರು, ಗುರುಪುರ, ಬಜ್ಪೆ ದಿ. 25-02-1934
  ಯಳ್ಳೂರು, ಕಟೀಲು, ಕಿನ್ನಗೋಳಿ
  ಮೂಲ್ಕಿ, ಪಡುಬಿದ್ರಿ, ಕಾಟಪಾಡಿ
  ಗುರುಪುರ, ಉದಯಪುರ
  ಉಡುಪಿ, ಬ್ರಹ್ಮಾವರ, ಸಿದ್ದಾಪುರ
- ಕುಂದಾಪುರ ದಿ. 26-02-1934
- ಕುಂದಾಪುರ, ಭಟ್ಕಳ ದಿ. 27-02-1934
  ಹೊನ್ನಾವರ, ಕಾರವಾರ
- ಕಾರವಾರ, ಕುಮುಟಾ, ಅಂಕೋಲ ದಿ. 28-02-1934
  ಚಂದಿಯಾ, ಶಿರಸಿ
- ಸಿರಸಿ, ಸಿದ್ದಾಪುರ, ದಾಸನಕೊಪ್ಪ ದಿ. 01-03-1934
  ಇಸಲೂರು, ಏಕಾಂಬಿ, ಆಲೂರು
  ಬ್ಯಾಡಗಿ, ಮೋಟೆಬೆನ್ನೂರು
- ಹಾವೇರಿ, ರಾಣೆಬೆನ್ನೂರು, ಹರಿಹರ ದಿ. 02-03-1934
  ದಾವಣಗೆರೆ, ಹರಪನಹಳ್ಳಿ, ಕೊಟ್ಟೂರು
  ಕೂಡ್ಲಿಗೆ, ದುಗ್ಗಾವತಿ, ಕಣಿವೆಹಳ್ಳಿ
  ಸೊಂಡೂರು
- ಸೊಂಡೂರು, ಬಳ್ಳಾರಿ, ಹೊಸಪೇಟೆ ದಿ. 03-03-1934
  ಭಾವಾಪುರ, ಗದಗ, ಜಕ್ಕಲಿ, ಹುಬ್ಬಳ್ಳಿ

● ಹುಬ್ಬಳ್ಳಿ, ಧಾರವಾಡ, ಅಮ್ಮಿನಭಾವಿ ಹಿರೇಉಳ್ಳಗೇರಿ, ಬೈಲಹೊಂಗಲ ಉಪ್ಪಿನ, ಬೆಟಗೇರಿ, ಸೌಂದತ್ತಿ ಸಂಪಗಾಂವ್, ಹೊಸೂರು, ಬೆಳಗಾವಿ	ದಿ. 04-03-1934
● ಬೆಳಗಾವಿ	ದಿ. 05-03-1934
● ಬೆಳಗಾವಿ	ದಿ. 06-03-1934
● ಬೆಳಗಾವಿ, ಯಮಕನಮರಡಿ ಹುಕ್ಕೇರಿ, ಗೋಕಾಕ, ಸಂಕೇಶ್ವರ ನವಲೀಹಾಳ, ಚಿಕ್ಕೋಡಿ, ಅಂಕಲಿ ಶೆಡಬಾಳ, ಬನಹಟ್ಟಿ, ಅಥಣಿ ಬಿಜಾಪುರ, ತಿಕೋಟ, ತೊರವಿ ಇಳಕಲ್	ದಿ. 07-03-1934
● ನಂದಿ ಬೆಟ್ಟ	10-05-1936 ರಿಂದ 30-05-1936 ರವರೆಗೆ
● ಚಿಕ್ಕಬಳ್ಳಾಪುರ, ಚಿಂತಾಮಣಿ ಕೋಲಾರ, ಬಂಗಾರಪೇಟೆ, ಕೆ.ಜಿ.ಎಫ್	31-05-1936
● ಬೆಂಗಳೂರು	01-06-1936 ರಿಂದ 12-06-1936 ರವರೆಗೆ
● ಬೆಳಗಾವಿ ಜಿಲ್ಲೆಯ ಹುದಲಿ	16-04-1936 ರಿಂದ 21-04-1937ರವರೆಗೆ

ಏಕಾದಶ ವ್ರತಗಳು

ಸತ್ಯ	**Truth**
ಅಹಿಂಸೆ	**Ahimsa or Love**
ಅಸ್ತೇಯ (ಕದಿಯದಿರುವುದು)	**Non-Stealing**
ಬ್ರಹ್ಮಚರ್ಯ	**Brahmacharya or Chastity**
ಅಸಂಗ್ರಹ (ಅಪರಿಗ್ರಹ)	**Non-Possession**
ಶರೀರ ಶ್ರಮ	**Physical Labour**
ಅಸ್ವಾದ (ನಾಲಿಗೆ ಚಪಲ)	**Control on the Palate**
ಸರ್ವತ್ರ ಭಯವರ್ಜನ (ಅಭಯ)	**Fearlessness**
ಸರ್ವಧರ್ಮ ಸಮಾನತ್ವ	**Equality of Religion**
ಸ್ವದೇಶಿ	**Swadeshi**
ಸ್ಪರ್ಶ ಭಾವನೆ (ಅಸ್ಪೃಶ್ಯತಾ ನಿವಾರಣೆ)	**Removal of Untouchability**

ಏಳು ಸಾಮಾಜಿಕ ಪಾತಕಗಳು Seven Social Sins

ತತ್ವರಹಿತ ರಾಜಕಾರಣ	**Politics without Principles**
ದುಡಿಮೆ ಇಲ್ಲದ ಸಂಪತ್ತು	**Wealth without Work**
ಆತ್ಮಸಾಕ್ಷಿ ಇಲ್ಲದ ಸಂತೋಷ	**Pleasure without Conscience**
ಚಾರಿತ್ರ್ಯವಿಲ್ಲದ ಶಿಕ್ಷಣ	**Education without Character**
ನೀತಿ ಇಲ್ಲದ ವ್ಯಾಪಾರ	**Commerce without Morality**
ಮಾನವೀಯತೆ ಇಲ್ಲದ ವಿಜ್ಞಾನ	**Science without Humanity**
ತ್ಯಾಗ ಇಲ್ಲದ ಪೂಜೆ	**Worship without Sacrifice**

– ಮಹಾತ್ಮ ಗಾಂಧೀಜಿ

ಹದಿನೆಂಟು ರಚನಾತ್ಮಕ ಕಾರ್ಯಗಳು
18 CONSTRUCTIVE PROGRAMMES

ಮತೀಯ ಐಕ್ಯತೆ	**Communal Unity**
ಅಸ್ಪೃಶ್ಯತಾ ನಿವಾರಣೆ	**Removal of Untouchability**
ಪಾನನಿರೋಧ	**Prohibition**
ಖಾದಿ	**Khadi**
ಇತರೆ ಗ್ರಾಮೋದ್ಯೋಗ	**Other village industries**
ಗ್ರಾಮ ನೈರ್ಮಲ್ಯ	**Village Sanitation**
ಮೂಲ ಶಿಕ್ಷಣ	**Basic Education**
ವಯಸ್ಕರ ಶಿಕ್ಷಣ	**Adult Education**
ಮಹಿಳಾ ಸಬಲೀಕರಣ	**Women Empowerment**
ಆರೋಗ್ಯ ಮತ್ತು ಶುಚಿತ್ವ ಶಿಕ್ಷಣ	**Hygiene & Health Education**
ಪ್ರಾದೇಶಿಕ ಭಾಷೆ	**Provincial Languages**
ರಾಷ್ಟ್ರಭಾಷೆ	**National Language**
ಆರ್ಥಿಕ ಸಮಾನತೆ	**Economic Equality**
ರೈತರ ಸಬಲೀಕರಣ	**Empowerment of Farmers**
ಕಾರ್ಮಿಕರ ಸಬಲೀಕರಣ	**Empowerment of Labours**
ಆದಿವಾಸಿ ಸಬಲೀಕರಣ	**Tribal Empowerment**
ಕುಷ್ಠರೋಗ ನಿರ್ಮೂಲನೆ	**Cure of Lepracy**
ವಿದ್ಯಾರ್ಥಿ	**Students**

ವರ್ತಮಾನದಲ್ಲಿ ಬಹು ಚರ್ಚಿತವಾಗುತ್ತಿರುವ ವಿಷಯವೆಂದರೆ ಅಸ್ಪೃಶ್ಯತೆ ಆಚರಣೆಯ ವಿವಿಧ ಮುಖಗಳಾದ, ಬಹಿಷ್ಕಾರ, ಅತ್ಯಾಚಾರ ದೌರ್ಜನ್ಯ, ಕೊಲೆ ಮತ್ತು ಪ್ರತ್ಯೇಕೀಕರಣ. ದಲಿತರು-ದಮನಿತರು ಎಂದರೆ ಉಳಿದ ಸಮುದಾಯದವರಿಂದ ಶೋಷಣೆಗೆಂದೇ ಹುಟ್ಟಿದವರು; ಬಿಟ್ಟಿ ಚಾಕರಿಗೊಸ್ಕರವೇ ಜನಿಸಿದವರು; ಸಮಾಜ, ಸರ್ಕಾರದ ಎಲ್ಲಾ ಅವಕಾಶಗಳ ನಿರಾಕರಣೆಗೆ ಒಗ್ಗಿಕೊಂಡವರು ಎಂಬುದು ಶತಮಾನದಿಂದ ಬೆಳೆಯಿಸಿಕೊಂಡಿರುವ ನಂಬಿಕೆ ಜನರ ರಕ್ತಮಾಂಸಗಳಲ್ಲಿ ಹುದುಗಿಹೋಗಿವೆ. ಇದರ ವಿರುದ್ಧ ಆಜೀವ ಪರ್ಯಂತ ಶ್ರಮಿಸಿದ ಮಹಾತ್ಮ ಗಾಂಧೀಜಿ ಮತ್ತು ಬಾಬಾಸಾಹೇಬ್ ಅಂಬೇಡ್ಕರ್ ಅವರು ಸಮಸಮಾಜ ನಿರ್ಮಾಣದ ಆಶಯದೊಂದಿಗೆ ಭಾರತೀಯ ಸಮಾಜವನ್ನು ಕಟ್ಟಿದವರು. ಅಸ್ಪೃಶ್ಯತೆಯನ್ನು ಸರ್ವಾಂಗೀಣವಾಗಿ ಅಭ್ಯಾಸಿಸುತ್ತಾ ಗಾಂಧೀಜಿ ಅವರು, "ಹಿಂದೂ ಧರ್ಮದಲ್ಲಿ ಅಸ್ಪೃಶ್ಯತೆ ಆಚರಣೆಗೆ ನಿಜವಾಗಿ ಆಧಾರವಿದ್ದರೆ, ನಾನು ಹಿಂದೂ ಧರ್ಮವನ್ನು ತ್ಯಜಿಸಲು ಹಿಂದೆ ಮುಂದೆ ನೋಡುವುದಿಲ್ಲ." ಎಂದು ತಮ್ಮ ಯಂಗ್ ಇಂಡಿಯಾ ಪತ್ರಿಕೆಯಲ್ಲಿ ಬರೆದರು ಹಾಗೂ ಶ್ರೇಷ್ಠತೆ ಮತ್ತು ಪವಿತ್ರತೆಯ ವ್ಯಸನದಿಂದ ಮುಕ್ತವಾದ ಹಾಗೂ ಕೀಳರಿಮೆ ಮತ್ತು ಅಪವಿತ್ರತೆಯ ಕುಸಿತದಿಂದ ವಿಮುಕ್ತವಾದ ಸಮಾನತೆಯ ಸ್ವಾತಂತ್ರ ಹೋರಾಟವನ್ನು ಸಂಘಟಿಸಿದ ಗಾಂಧೀಜಿ ಅವರನ್ನು ಈ ಪುಸ್ತಕ ಅನಾವರಣಗೊಳಿಸುತ್ತದೆ.

ಇಂದಿರಾ ಕೃಷ್ಣಪ್ಪ
ಗೌ. ಕಾರ್ಯದರ್ಶಿ

ಕರ್ನಾಟಕ ಗಾಂಧೀ ಸ್ಮಾರಕ ನಿಧಿ
ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ, ಬೆಂಗಳೂರು